ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallammanudi@gmail.com E-paper: www.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy | RNI NO:KARKAN/2011/48371


VOLUME - 13 ಸಂಪುಟ-13 | ISSUE - 53 ಸಂಚಿಕೆ- 53 | PAGE- 8 ಪುಟ-8 | ಬುಧವಾರ 02.04.2025 | RS.2/- ಬೆಲೆ 2/-

# 10 ವರ್ಷಕ್ಕೊಮ್ಮೆ ನಡೆಸುವ ಜನಗಣತಿಯೊಂದಿಗೆ ಜಾತಿಗಣತಿ ನಡೆಸಲು ಖರ್ಗೆ ಒತ್ತಾಯ

ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ:ಏ.1:10ವರ್ಷಗಳಿಗೊಮ್ಮೆ ನಡೆಸುವ ಜನಗಣತಿ ಮತ್ತು ಜಾತಿಗಣತಿಯನ್ನು ತಕ್ಷಣವೇ ಪ್ರಾರಂಭಿಸಬೇಕು. ವಿಳಂಬದಿಂದಾಗಿ ಹೆಚ್ಚಿನ ಸಂಖ್ಯೆಯ ಜನರು ಕಲ್ಯಾಣ ಯೋಜನೆಗಳಿಂದಹೊರಗುಳಿಯುತ್ತಿದ್ದಾರೆ ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮಂಗಳವಾರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಸದನದಲ್ಲಿ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿದ ಅವರು, 1881 ರಿಂದ ಭಾರತ ಪ್ರತಿ 10 ವರ್ಷಗಳಿಗೊಮ್ಮೆ ಜನಗಣತಿಯನ್ನು ನಡೆಸುತ್ತಿದೆ. ಯುದ್ಧಗಳು, ತುರ್ತು ಪರಿಸ್ಥಿತಿಗಳು ಅಥವಾ ಇತರ ಬಿಕ್ಕಟ್ಟುಗಳ ಸಮಯದಲ್ಲಿಯೂ ಸಹ ಇದನ್ನು ನಡೆಸಲಾಗಿದೆ ಎಂದರು.



1931ರಲ್ಲಿ, ಜನಗಣತಿಯ ಜೊತೆಗೆ ಜಾತಿಗಣತಿಯನ್ನುನಡೆಸಲಾಗುತ್ತಿತ್ತು. 1931ರ ಜನಗಣತಿಗೆ ಸ್ವಲ್ಪ ಮೊದಲು, ಮಹಾತ್ಮಾ ಗಾಂಧಿಯವರು 'ನಮ್ಮ ಆರೋಗ್ಯದಸ್ಥಿತಿಗತಿತಿಳಿಯಲುನಿಯಮಿತ ವೈದ್ಯಕೀಯ ತಪಾಸಣೆಗಳಂತೆಯೇ, ಜನಗಣತಿಯು ಒಂದು ರಾಷ್ಟಕ್ಕೆ ಅತ್ಯಂತ ಮುಖ್ಯವಾದ ತಪಾಸಣೆಯಾಗಿದೆ' ಎಂದು ಹೇಳಿದ್ದರು ಎಂದು ಖರ್ಗೆ ಹೇಳಿದರು.

ಜನಗಣತಿಯು ಒಂದು ನಿರ್ಣಾಯಕ ಪ್ರಕ್ರಿಯೆಯಾಗಿದ್ದು, ಜನಸಂಖ್ಯೆಯ

(2ನೇ ಪುಟ ನೋಡಿ)

# ಕ್ಷೇತ್ರಕ್ಕೆ ರಾಜಶೇಖರ ಪಾಟೀಲರ ಕೊಡುಗೆ ಅಪಾರ: ವಾಘಮಾರೆ

ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್:ಏ.1: ಕ್ಷೇತ್ರಕ್ಕೆ ರಾಜಶೇಖರ ಪಾಟೀಲರವರ ಕೊಡುಗೆ ಅಪಾರವಾಗಿದೆ ಎಂದು ಕಾಂಗ್ರೇಸ್ ಪಕ್ಷದ ಮುಖಂಡ ಡಾ.ಸಿದ್ರಾಮ ದಾದಾರಾವ ವಾಘಮಾರೆ ರವರು ತಿಳಿಸಿದ್ದಾರೆ.

ದಿ.ಬಸವರಾಜಪಾಟೀಲಪರಿವಾರದವರು ಸದಾ ಬಡವರ,ದೀನದಲಿತರ,ಹಿಂದುಳಿದ ಜನಾಂಗದವರ ಪರವಾಗಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದಾರೆ.



ಅಧಿಕಾರ ಇರಲಿ ಬಿಡಲಿ ಸದಾ ಬಡವರ ಮಧ್ಯ ಇದ್ದು. ಬಡವರ ಕಷ್ಟಗಳಿಗೆ ಸ್ಪಂದಿಸುತ್ತಾ ಬರುತ್ತಿದ್ದಾರೆ. ಪಾಟೀಲ ಅಂಥವರು ಹುಮನಾಬಾದ್ ಕ್ಷೇತ್ರಕ್ಕೆ ಸಿಕ್ಕಿದ್ದು ನಮ್ಮೆಲ್ಲರ ಪುಣ್ಯ ಎಂದು ತಿಳಿಸಿದ್ದಾರೆ.

ಕರೋನದ ಸಂದರ್ಭದಲ್ಲಿ ಜೀವದ ಹಂಗನ್ನು ತೊರೆದು ಕ್ಷೇತ್ರದ ಜನರು ಚನ್ನಾಗಿರಬೇಕೆಂದು ಅಹಾರದ ಕಿಟ್ ಗಳನ್ನು

(2ನೇ ಪುಟ ನೋಡಿ)

# ಕೃಷ್ಣಾ, ಭೀಮಾ ನದಿಗೆ ನೀರು ಬಿಡುವಂತೆ ಸಿಎಂ ಮನವಿ



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಏ.1: ಮಹಾರಾಷ್ಟ ಸಿಎಂಗೆ ದೇವೇಂದ್ರ ಫಡ್ನವಿಸ್‌ಗೆ ಸಿಎಂ ಸಿದ್ದರಾಮಯ್ಯ ಪತ್ರ ಬರೆದಿದ್ದಾರೆ. ಕುಡಿಯುವ ನೀರಿಗಾಗಿ ಕೊಯ್ನಾ ಜಲಾಶಯದಿಂದ

(2ನೇ ಪುಟ ನೋಡಿ)






## ಒಂದನೇ ಪುಟದಿಂದ

### ಜನಗಣತಿಯೊಂದಿಗೆ ಜಾತಿಗಣತಿ ನಡೆಸಲು ಖರ್ಗೆ ಒತ್ತಾಯ

ಬಗ್ಗೆ ಮಾತ್ರವಲ್ಲದೆ ಉದ್ಯೋಗ, ಕುಟುಂಬ ರಚನೆಗಳು, ಸಾಮಾಜಿಕ–ಆರ್ಥಿಕ ಪರಿಸ್ಥಿತಿಗಳು ಮತ್ತು ಇತರ ಹಲವಾರು ಪ್ರಮುಖ ಅಂಶಗಳ ಬಗ್ಗೆಯೂ ಡೇಟಾವನ್ನು ಸಂಗ್ರಹಿಸುವ ಹೆಚ್ಚಿನ ಸಂಖ್ಯೆಯ ಜನರನ್ನು ಇದು ಒಳಗೊಂಡಿರುತ್ತದೆ ಎಂದು ಅವರು ಹೇಳಿದರು.

ಎರಡನೇ ಮಹಾಯುದ್ಧ ಮತ್ತು 1971–72ರ ಭಾರತ–ಪಾಕಿಸ್ತಾನ ಯುದ್ಧದಂತಹ ಪ್ರಮುಖ ಘಟನೆಗಳ ಸಮಯದಲ್ಲಿಯೂ ಸಹ ಜನಗಣತಿಯನ್ನು ನಡೆಸಲಾಯಿತು. ಆದರೆ, ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಸರ್ಕಾರ ಜನಗಣತಿ ನಡೆಸುವಲ್ಲಿ ದಾಖಲೆಯ ವಿಳಂಬ ಮಾಡಿರುವುದು ದುರದೃಷ್ಟಕರ ಎಂದರು.

ಸರ್ಕಾರವು ಈಗಾಗಲೇ ಪರಿಶಿಷ್ಟ ಜಾತಿಗಳು (ಖಅ) ಮತ್ತು ಪರಿಶಿಷ್ಟ ಪಂಗಡಗಳ (ಖಖ) ದತ್ತಾಂಶವನ್ನು ಸಂಗ್ರಹಿಸುತ್ತಿರುವುದರಿಂದ ಸಾಮಾನ್ಯ ಜನಗಣತಿಯ ಜೊತೆಗೆ ಜಾತಿ ಜನಗಣತಿಯೂ ಸಾಧ್ಯವಾಗುತ್ತದೆ. ಇದರಿಂದ ಇತರ ಜಾತಿಗಳ ದತ್ತಾಂಶವನ್ನೂ ಸಂಗ್ರಹಿಸಬಹುದು. ಆದರೆ, ಸರ್ಕಾರ ಜನಗಣತಿ ಮತ್ತು ಜಾತಿ ಜನಗಣತಿ ಎರಡರ ಬಗ್ಗೆಯೂ ಮೌನವಾಗಿದೆ ಎಂದು ಖರ್ಗೆ ಹೇಳಿದರು.

ಕೋವಿಡ್ ಹೊರತಾಗಿಯೂ ವಿಶ್ವದ ಶೇ 81ರಷ್ಟು ದೇಶಗಳು ಜನಗಣತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿವೆ. ಭಾರತದಲ್ಲಿ ಜನಗಣತಿಗೆ ಸಂಬಂಧಿಸಿದಂತೆ ಸರ್ಕಾರವು ಯಾವುದೇ ಸ್ಪಷ್ಟ ಹೇಳಿಕೆಯನ್ನು ನೀಡುತ್ತಿಲ್ಲ ಎಂದು ದೂರಿದರು.

ಈ ವರ್ಷದ ಬಜೆಟ್‌ನಲ್ಲಿ ಜನಗಣತಿಗೆ ಕೇವಲ 575 ಕೋಟಿ ರೂ.ಗಳನ್ನು ಮಾತ್ರ ಮೀಸಲಿಡಲಾಗಿದೆ. ಇದು ಸರ್ಕಾರಕ್ಕೆ ಜನಗಣತಿ ನಡೆಸಲು ಇಷ್ಟವಿಲ್ಲ ಎಂಬುದನ್ನು ತೋರಿಸುತ್ತದೆ. ಜನಗಣತಿ ನಡೆಸುವುದನ್ನು ವಿಳಂಬ ಮಾಡುವುದು ಗಂಭೀರ ಪರಿಣಾಮಗಳಿಗೆ ಕಾಣವಾಗುತ್ತದೆ. ನಿಖರ ಮತ್ತು ನವೀಕರಿಸಿದ ಡೇಟಾ ಇಲ್ಲದೆ, ನೀತಿಗಳು ಅನಿಯಂತ್ರಿತ ಮತ್ತು ನಿಷ್ಪರಿಣಾಮಕಾರಿಯಾಗುತ್ತವೆ ಎಂದು ಅವರು ತಿಳಿಸಿದರು.

ಗ್ರಾಹಕ ಸಮೀಕ್ಷೆ, ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ, ಆವರ್ತಕ ಕಾರ್ಮಿಕ ಪಡೆ ಸಮೀಕ್ಷೆ, ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ಮತ್ತು ರಾಷ್ಟ್ರೀಯ ಸಾಮಾಜಿಕ ಸಹಾಯ ಕಾರ್ಯಕ್ರಮದಂತಹ ಹಲವಾರು ನಿರ್ಣಾಯಕ ಸಮೀಕ್ಷೆಗಳು ಮತ್ತು ಕಲ್ಯಾಣ ಕಾರ್ಯಕ್ರಮಗಳು ಜನಗಣತಿ ದತ್ತಾಂಶವನ್ನು ಅವಲಂಬಿಸಿವೆ. ಜನಗಣತಿಯಲ್ಲಿನ ವಿಳಂಬದಿಂದಾಗಿ, ಹೆಚ್ಚಿನ ಸಂಖ್ಯೆಯ ಜನರು ಕಲ್ಯಾಣ ಯೋಜನೆಗಳಿಂದ ಹೊರಗುಳಿಯುತ್ತಿದ್ದಾರೆ ಎಂದು ಅವರು ಹೇಳಿದರು.

ಸರ್ಕಾರ ವಿಶ್ವಾಸಾರ್ಹ ಮತ್ತು ನವೀಕೃತ ದತ್ತಾಂಶವಿಲ್ಲದೆ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದೆ. ಆದ್ದರಿಂದ, 10 ವರ್ಷಗಳಿಗೊಮ್ಮೆ ನಡೆಸುವ ಜನಗಣತಿಯನ್ನು ತಕ್ಷಣವೇ ಪ್ರಾರಂಭಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ಜಾತಿ ಜನಗಣತಿ ಮತ್ತು ಜನಗಣತಿಯನ್ನು ಆದಷ್ಟು ಬೇಗ ನಡೆಸಬೇಕು ಎಂದು ಹಿರಿಯ ಕಾಂಗ್ರೆಸ್ ನಾಯಕರು ಹೇಳಿದರು.

### ಕೊಡುಗೆ ಅಪಾರ: ವಾಘಮಾರೆ

ವಿತರಣೆ ಮಾಡಿದರು. ಇಂದು ಅವರ ಹುಟ್ಟು ಹಬ್ಬ ವಿದ್ದು ಭಗವಂತ ಅವರಿಗೆ ಇನ್ನೂ ಹೆಚ್ಚಿನ ಅಧಿಕಾರ. ಆರೋಗ್ಯ ನೀಡಿ ಕಾಪಾಡಲಿ. ಕ್ಷೇತ್ರಕ್ಕೆ ಮತ್ತೆ ಶಾಸಕರಾಗಿ, ಸಚಿವರಾಗಿ ಕಾರ್ಯ ನಿರ್ವಹಿಸಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ ಎಂದು ವಾಘಮಾರೆ ಪತ್ರಿಕೆಗೆ ತಿಳಿಸಿದ್ದಾರೆ.

### ನದಿಗೆ ನೀರು ಬಿಡುವಂತೆ ಸಿಎಂ ಮನವಿ

ಕೃಷ್ಣಾ ನದಿಗೆ ನೀರು ಬಿಡುವಂತೆ ಮನವಿ ಮಾಡಿದ್ದಾರೆ.

ಉಜ್ಜನಿ ಜಲಾಶಯದಿಂದ ಭೀಮಾ ನದಿಗೆ ನೀರು ಬಿಡುವಂತೆಯೂ ಮನವಿ ಮಾಡಿದ್ದಾರೆ. ಉತ್ತರ ಕರ್ನಾಟಕದ ಬೆಳಗಾವಿ, ವಿಜಯಪುರ, ಬಾಗಲಕೋಟೆ, ಕಲಬುರಗಿ ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ಇದೆ. ಹಾಗಾಗಿ ನೀರು ಬಿಡುವಂತೆ ಪತ್ರದಲ್ಲಿ ಸಿಎಂ ಸಿದ್ದರಾಮಯ್ಯ ಉಲ್ಲೇಖಿಸಿದ್ದಾರೆ.

ಈ ಹಿಂದೆ ಬೇಸಿಗೆಯಲ್ಲಿ ಕಾಲದಲ್ಲಿ ಕುಡಿಯುವ ನೀರು ಪೂರೈಕೆಗೆ ಕೃಷ್ಣಾ ನದಿಯಿಂದ ನೀರನ್ನು ಬಿಡುಗಡೆ ಮಾಡಲು ಮಹಾರಾಷ್ಟ್ರ ಸರ್ಕಾರವು ಸಕಾರಾತ್ಮಕವಾಗಿ ಸ್ಪಂದಿಸಿತ್ತು. ಕರ್ನಾಟಕ ಸರ್ಕಾರವು ಈ ಮೂಲಕ ಮಹಾರಾಷ್ಟ್ರಕ್ಕೆ ಧನ್ಯವಾದಗಳನ್ನು ತಿಳಿಸುತ್ತೆ. ಹಿಪ್ಪರಗಿ ಬ್ಯಾರೇಜ್ ಮತ್ತು ಇತರ ಸ್ಥಳೀಯ ಜಲಾಶಯಗಳಲ್ಲಿ ಶೇಖರಣಾ ನೀರು ಮುಂಗಾರು ಹಂಗಾಮು ತನಕ ಸಾಕಾಗುವುದಿಲ್ಲ.

ಕೃಷ್ಣಾ ಜಲಾನಯನ ಪ್ರದೇಶದ ಉತ್ತರ ಕರ್ನಾಟಕ ಜಿಲ್ಲೆಗಳ ಕುಡಿಯುವ ನೀರಿಗೂ ಸಾಕಾಗುವುದಿಲ್ಲ. ಹಾಗಾಗಿ ಕೊಯ್ನಾ ಜಲಾಶಯದಿಂದ ಕೃಷ್ಣಾ ನದಿಗೆ ಕನಿಷ್ಠ 2 ಟಿಎಂಸಿ, ಉಜ್ಜನಿ ಜಲಾಶಯದಿಂದ ಭೀಮಾ ನದಿಗೆ 1 ಟಿಎಂಸಿ ನೀರನ್ನ ಬಿಡುಗಡೆ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಸಿಎಂ ಮನವಿ ಮಾಡಿದ್ದಾರೆ.

## ಏ.1 ರಿಂದ ನರೇಗಾ ಕೂಲಿ 349 ರಿಂದ 370 ಕ್ಕೆ ಹೆಚ್ಚಳ: ಹೆಚ್ಚಿನ ಲಾಭ ಪಡೆಯಲು ಮನವಿ



ಮಲ್ಲಮ್ಮ ನುಡಿ ವಾರ್ತೆ ಔರಾದ :ಏ.1: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ನಿರ್ವಹಿಸುವ ಕಾರ್ಮಿಕರಿಗೆ ಮುಂಬರುವ ಏಪ್ರಿಲ್ 01 ರಿಂದ ಕೂಲಿ ಮೊತ್ತವನ್ನು 349 ರಿಂದ 370ಕ್ಕೆ ಹೆಚ್ಚಳ ಮಾಡಲಾಗಿದೆ. ಆದ್ದರಿಂದ ಗ್ರಾಮೀಣ ಭಾಗದ ಕೂಲಿಕಾರರು ನಗರದತ್ತ ಕೆಲಸಕ್ಕಾಗಿ ವಲಸೆ ಹೋಗದೆ ನಿಮ್ಮೂರಲ್ಲೆ ಕೆಲಸ ಮಾಡಿ ಇದರ ಲಾಭವನ್ನು ಪಡೆಯಬೇಕು.

ನರೇಗಾ ಯೋಜನೆಯಡಿ ಪ್ರತಿ ದಿನದ ಕೂಲಿಗೆ ಗಂಡು ಮತ್ತು ಹೆಣ್ಣುಮಕ್ಕಳಿಗೆ ಸಮಾನ ಕೂಲಿ ವೇತನ 370 ಕ್ಕೆ ಹೆಚ್ಚಳ ಮಾಡಲಾಗಿದೆ. ಒಂದು ಆರ್ಥಿಕ ವರ್ಷದಲ್ಲಿ 100 ದಿನ ಕೆಲಸ ಮಾಡಿ ರೂ. 37,000 ತಮ್ಮ ಖಾತೆಗೆ ನೇರವಾಗಿ ಜಮಾ ಮಾಡಿಕೊಳ್ಳಬಹುದು.

ರೈತರು, ಕೂಲಿಕಾರರು ಮನೆಯಲ್ಲಿ ದನ, ಕುರಿ, ಕೋಳಿಗಳಿದ್ದರೆ, ನರೇಗಾ ಯೋಜನೆಯಡಿ ಶೆಡ್ ಗಳು ನಿರ್ಮಿಸಿಕೊಳ್ಳಬಹುದು. ಜೊತೆಗೆ ಆರ್ಥಿಕ ಸದೃಢರಾಗಬಹುದು.

ಹೆಚ್ಚಿನ ಮಾಹಿತಿಗಾಗಿ ನಿಮ್ಮ ಹತ್ತಿರದ ಗ್ರಾಮ ಪಂಚಾಯತಿ ಮತ್ತು ತಾಲೂಕು ಪಂಚಾಯತಿಗೆ ಭೇಟಿ ನೀಡಿ, ಹಾಗೂ ಉಚಿತ ಏಕೀಕೃತ ಸಹಾಯವಾಣಿ ಸಂಖ್ಯೆ – 827750600 ಗೆ ಕರೆ ಮಾಡಬಹುದು ಎಂದು ಔರಾದ ತಾಲ್ಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಮಾಣಿಕರಾವ ಪಾಟೀಲ್ ಹಾಗೂ ನರೇಗಾ ಸಹಾಯಕ ನಿರ್ದೇಶಕ ಶಿವಕುಮಾರ್ ಘಾಟೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನರೇಗಾ ಯೋಜನೆಯ ಸೌಲಭ್ಯ ಪಡೆಯಲು ಜಾಬ್ ಕಾರ್ಡ್ ಇರಬೇಕು. ಕಾರ್ಡ್ ಇಲ್ಲದವರು ತಮ್ಮ ಕುಟುಂಬದಲ್ಲಿ 18 ವರ್ಷ ಮೆಲ್ಪಟ ಸದಸ್ಯರ ಆಧಾರ್ ಕಾರ್ಡ್ ,ಬ್ಯಾಂಕ್ ಪಾಸ್ ಬುಕ್ ,ರೇಷನ್ ಕಾರ್ಡ್ಸ್ ಪ್ರತಿ ಹಾಗೂ ಎರಡು ಫೋಟೋಗಳು ಗ್ರಾಮ ಪಂಚಾಯಿತಿಗೆ ನೀಡಿದರೆ ಉಚಿತವಾಗಿ ಹೊಸ ಜಾಬ್ ಕಾರ್ಡ್ ನೀಡಲಾಗುವುದು.

ನರೇಗಾ ಯೋಜನೆಯಲ್ಲಿ ಕೂಲಿ ಕೆಲಸ ಅಷ್ಟೇ ಅಲ್ಲದೆ ಜಾಮೀನು ಇರುವ ರೈತರು ಕ್ಷೇತ್ರದ ಬದು, ಕೃಷಿ ಹೊಂಡ, ತೋಟಗಾರಿಕೆ ಬೆಳೆ ದಾಳಿಂಬೆ ಸಪೋಟ, ನುಗ್ಗೆಕಾಯಿ ಜೊತೆ ರೇಷ್ಮೆ ಬೆಳೆಯಲು ಸೌಲಭ್ಯಗಳು ಪಡೆದುಕೊಳ್ಳಬಹುದು.

ಪರಿಶೀಷ್ಟ ಜಾತಿ, ಪರಿಶೀಷ್ಟ ಪಂಗಡ ಹಾಗೂ ತಾಂಡಾ ಮಹಿಳೆಯರು ಮತ್ತು ಬಿಪಿಎಲ್ ಕಾರ್ಡುದಾರರು ಇದರ ಹೆಚ್ಚಿನ ಲಾಭಪಡೆಯಬೇಕು ಎಂದು ಸಹಾಯಕ ನಿರ್ದೇಶಕ ಶಿವಕುಮಾರ್ ಘಾಟೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನರೇಗಾ ಕೂಲಿ ಮೊತ್ತ 349 ರೂ.ದಿಂದ 370ಕ್ಕೆ ಹೆಚ್ಚಳ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ.ಏ.01:ಕಲಬುರಗಿ ತಾಲೂಕಿನ ಹೊನ್ನಕಿರಣಗಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಹೊನ್ನಕಿರಣಗಿ ಗ್ರಾಮದ ಕೆರೆಹೂಳೆತ್ತುವ ಕಾಮಗಾರಿಗೆ ಕಲಬುರಗಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಭಂವರ್ ಸಿಂಗ್ ಮೀನಾ ಅವರು ಮಂಗಳವಾರ ಚಾಲನೆ ನೀಡಿದರು.

ಈ ಮೊದಲು ನರೇಗಾ ಒಂದು ದಿನದ ಕೂಲಿ ಮೊತ್ತ 349 ಇದ್ದು, 2025ರ ಏಪ್ರಿಲ್ 1 ರಿಂದ ನರೇಗಾ ಕೂಲಿ ಮೊತ್ತ 370 ರೂ.ಗಳಿಗೆ ಹೆಚ್ಚಿಸಲಾಗಿದೆ. ಎಲ್ಲರೂ ನಿಗದಿಪಡಿಸಿದ ಅಳತೆಗನುಗುಣವಾಗಿ ಕೆಲಸ ನಿರ್ವಹಿಸಬೇಕು. ಕಾಮಗಾರಿ ಸ್ಥಳದಲ್ಲಿ ನೆರಳಿನ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಆರೋಗ್ಯ ಕಿಟ್ ಹಾಗೂ ಓಆರ್‌ಎಸ್ ಪ್ಯಾಕೇಟ್ ವ್ಯವಸ್ಥೆ ಇರುವಂತೆ ನೋಡಿಕೊಳ್ಳುವ ಜವಾಬ್ದಾರಿಯು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು (ಪಿ.ಡಿ.ಓ.) ಮೇಲೆ ಇರುತ್ತದೆ. ನಂತರ ಸಿ.ಇ.ಓ.. ಅವರು ಕಾಮಗಾರಿ ಸ್ಥಳದ ಬಗ್ಗೆ ಪರಿಶೀಲನೆ ನಡೆಸಿದರು. ಕಾಮಗಾರಿ ಸ್ಥಳದಲ್ಲಿ 303 ಕೂಲಿ ಕಾರ್ಮಿಕರು ಕೆಲಸನಿರ್ವಹಿಸುತ್ತಿದ್ದಾರೆ. ಕೂಲಿ ಕಾರ್ಮಿಕರು ಪ್ರತಿಯೊಬ್ಬರು ಪಿ.ಎಮ್.ಜೆ.ಜೆ.ವೈ.(PMJJY) ಹಾಗೂ ಪಿ.ಎಮ್.ಎಸ್.ಬಿ.ವೈ.(PMSBY)ಯೋಜನೆಗಳ ವಿಮೆ ಮಾಡಿಸಿಕೊಳ್ಳಬೇಕು ಎಂದರು. ಈ ಸಂದರ್ಭದಲ್ಲಿ ಕಲಬುರಗಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಎಂ.ಡಿ. ಸೈಯದ ಪಟೇಲ್, ತಾಲೂಕು ಪಂಚಾಯತ್ ಸಹಾಯಕ ನಿರ್ದೇಶಕ ರೇವಣಸಿದ್ದಪ್ಪ ಗೌಡರ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಕವಿತಾ ಕಾಗೆ, ಗ್ರಾಮ ಪಂಚಾಯತಿ ಅಧ್ಯಕ್ಷರು,ಐ.ಈ.ಸಿ.ಸಂಯೋಜಕ ಮೋಸಿನ್‌ಖಾನ್, ತಾಂತ್ರಿಕ ಸಂಯೋಜಕರಾದ ಸತೀಶ, ಜಗದೀಶ ಹಾಗೂ ಗ್ರಾಮ ಪಂಚಾಯತಿ ಸಿಬ್ಬಂದಿಗಳು, ಕ್ಷೇತ್ರ ಸಹಾಯಕ ಸದಾಶಿವ, ಗ್ರಾಮ ಪಂಚಾಯತಿ ಸಿಬ್ಬಂದಿ ಪ್ರೇಮಾ, ವಿಜಯಲಕ್ಷ್ಮೀ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

### ಐಎಎಸ್/ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ: ಹೆಸರು ನೋಂದಾಯಿಸಲು ಮನವಿ

ಬೀದರ ಏ.1: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಕೇಂದ್ರ ಲೋಕಸೇವಾ ಆಯೋಗದವರು ನಡೆಸಲಿರುವ ಐಎಎಸ್ ಹಾಗೂ ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿಯನ್ನು ಮೈಸೂರಿನ ಕೇಂದ್ರ ಕಛೇರಿಯಲ್ಲಿ ನಡೆಸಲು ನಿರ್ಧರಿಸಲಾಗಿದೆ. ಆಸಕ್ತರು ದಿನಾಂಕ: 02–04–2025 ರೊಳಗಾಗಿ ದೂರವಾಣಿ ಸಂಖ್ಯೆ: 0821–2515944 ಗೆ ಕರೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆಂದು ಬೀದರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪ್ರಾದೇಶಿಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಇಂದು ಪೊಲೀಸ್ ಧ್ವಜ ದಿನಾಚರಣೆ

ಬೀದರ ಏ.1: ಬೀದರ ಜಿಲ್ಲಾ ಪೊಲೀಸ್ ವತಿಯಿಂದ ಏಪ್ರಿಲ್.2 ರಂದು ಬೆಳಿಗ್ಗೆ 8 ಗಂಟೆಗೆ ಬೀದರ ಜಿಲ್ಲಾ ಪೊಲೀಸ್ ಕವಾಯತು ಮೈದಾನ ಬೀದರದಲ್ಲಿ ಪೊಲೀಸ್ ಧ್ವಜ ದಿನಾಚರಣೆ–2025 ನ್ನು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ನಿವೃತ್ತ ಪಿ.ಎಸ್.ಐ. ಘನಶ್ಯಾಮ ಪರೇಡ್ ವಂದನೆ ಸ್ವೀಕಾರ ಮಾಡಲಿದ್ದಾರೆ.

### ಜಿಲ್ಲೆಯ ಪ್ರವಾಸಿ ತಾಣಗಳ ಛಾಯಾಚಿತ್ರಗಳ ಸೆರೆಹಿಡಿದು ಕಿರು ವಿವರಣೆಯೊಂದಿಗೆ ಕಳುಹಿಸಲು ಸೂಚನೆ

ಬೀದರ Kb.1: ಕರ್ನಾಟಕ ರಾಜ್ಯದ ಪ್ರವಾಸೋದ್ಯಮವನ್ನು ಇನ್ನಷ್ಟು ಮೈಲ್ದರ್ಜೆಗೇರಿಸಲು ಹಾಗೂ ಎಲ್ಲಾ ವರ್ಗಗಳ ಅಂದರೆ,ಧಾರ್ಮಿಕ,ಸಾಂಸ್ಕೃತಿಕ,ಪಾರಂಪಾರಿಕ,ನೈಸರ್ಗಿಕ ಹಾಗೂ ವನ್ಯಜೀವಿ ಮತ್ತು ಸಾಹಸ ಚಟುವಟಿಕೆಗಳು ಹಾಗೂ ಇತರೆ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ದೃಷ್ಟಿಕೋನದಲ್ಲಿ ಪ್ರಮುಖ ಪ್ರವಾಸಿ ತಾಣಗಳನ್ನು ಗುರುತಿಸಿ, ವಿಶ್ವದರ್ಜೆಯಲ್ಲಿ ಅಭಿವೃದ್ಧಿಪಡಿಸಲು ಕೇಂದ್ರ ಪ್ರವಾಸೋದ್ಯಮ ಸಚಿವಾಲಯದಿಂದ Discoverthe BeautyofIndia ಶೀರ್ಷಿಕೆಯಡಿಯಲ್ಲಿ "Dekho Apna Desh; Photo Contest–2025" ರ ಸ್ಪರ್ದೆಯನ್ನು ಏರ್ಪಡಿಸಲಾಗಿದ್ದು, ಸದರಿ ಸ್ಪರ್ಧೆಯ ಭಾಗವಾಗಿ ಬೀದರ ಜಿಲ್ಲೆಯ ನಾಗರಿಕರು ಮತ್ತು ಪ್ರವಾಸಿಗರು ಈ ಸೆರೆಹಿಡಿದು Dekhoapnadesh-photos@gmail.com ಇ–ಮೇಗೆ ನೇರವಾಗಿ ಕಳುಹಿಸಲು ಏಪ್ರಿಲ್.7 ರವರೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಡಾ.ಬಿ.ಆರ್.ಅಂಬೇಡ್ಕರ್ ಅವರ ಜಯಂತಿ ಕುರಿತು ಪೂರ್ವಭಾವಿ ಸಭೆ ಏ.3 ಕ್ಕೆ

ಬೀದರ ಏ.1: ದಿನಾಂಕ:14–04–2025ರಂದು ಡಾ.ಬಿ.ಆರ್. ಅಂಬೇಡ್ಕರ್ ಅವರ 134ನೇ ಜಯಂತಿಯನ್ನು ಆಚರಿಸುವ ಕುರಿತು ದಿನಾಂಕ: 03–04–2025 ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳು ಬೀದರ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ ಎಂದು ಬೀದರ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಯುಕ್ತ ಪೂರ್ವಭಾವಿ ಸಭೆಗೆ ಪರಿಶಿಷಟ ಜಾತಿ ಮತ್ತು ಎಲ್ಲಾ ಸಮಾಜದ ಮುಖಂಡರು, ವಿವಿಧ ದಲಿತ ಸಂಘಟನೆಗಳ ಪದಾಧಿಕಾರಿಗಳು, ಸಂಘ–ಸಂಸ್ಥೆಗಳ ಮುಖಂಡರು ಪೂರ್ವಭಾವಿ ಸಭೆಗೆ ಹಾಜರಾಗಿ ತಮ್ಮ ಸಲಹೆ ಸೂಚನೆಗಳನ್ನು ನೀಡಬೇಕೆಂದು ಅವರು ತಿಳಿಸಿದ್ದಾರೆ.

## ಬೆಂಬಲ ಬೆಲೆ ಯೋಜನೆಯಡಿ ತೊಗರಿ ಖರೀದಿ: ಏ. 25ರ ವರೆಗೆ ನೋಂದಣಿಗೆ ಕಾಲಾವಧಿ ವಿಸ್ತರಣೆ:ಬಿ.ಫೌಜಿಯಾ ತರನ್ನುಮ್

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಏ.1: ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ 2024–25ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ತೊಗರಿ ಖರೀದಿ ಪ್ರಕ್ರಿಯೆ ಜಿಲ್ಲೆಯಲ್ಲಿ ಈಗಾಗಲೆ ಚಾಲ್ತಿಯಲ್ಲಿದ್ದು, ರೈತರ ಹಿತದೃಷ್ಠಿಯಿಂದ ತೊಗರಿ ಖರೀದಿಗೆ ನೊಂದಣಿಯನ್ನು ಏಪ್ರಿಲ್ 25ರವರೆಗೆ ಮತ್ತು ಭೌತಿಕ ತೊಗರಿ ಖರೀದಿಗೆ ಮೇ 1ರ ವರೆಗೆ ವಿಸ್ತರಣೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ ಎಂದು ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ತಿಳಿಸಿದ್ದಾರೆ.

ಕೇಂದ್ರ ಸರ್ಕಾರವು ಬೆಂಬಲ ಬೆಲೆ ಯೋಜನೆಯಡಿ ತೆ–ೂಗರಿಗೆ ಪ್ರತಿ ಕ್ವಿಂಟಾಲ್ ರೂ.7,550 ನಿಗದಿಪಡಿಸಿದ್ದು, ಇದಕ್ಕೆ ರಾಜ್ಯ ಸರ್ಕಾರದಿಂದ ಪ್ರೋತ್ಸಾಹಧನ 450 ರೂ. ಪ್ರತಿ ಕ್ವಿಂಟಾಲಿಗೆ ಸೇರಿಸಿ ಒಟ್ಟು ಪ್ರತಿ ಕ್ವಿಂಟಾಲಿಗೆ 8,000 ರೂ. ದರ ನಿಗದಿಪಡಿಸಿದೆ. ಪ್ರತಿ ಎಕರೆಗೆ 4 ಕ್ವಿಂಟಾಲ್ ಮತ್ತು ಪ್ರತಿ ರೈತರಿಂದ ಗರಿಷ್ಠ 40 ಕ್ವಿಂಟಲ್ ಎಫ್.ಎ.ಕ್ಯೂ ಗುಣಮಟ್ಟದ ತೊಗರಿಯನ್ನು ಖರೀದಿಸಲಾಗುತ್ತಿದೆ ಎಂದು ಅವರು ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ ನಿಯಮಿತ ಬೆಂಗಳೂರು ಹಾಗೂ ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ಕಲಬುರಗಿ ಸಂಸ್ಥೆಗಳ ಮೂಲಕ ಜಿಲ್ಲೆಯಲ್ಲಿ ಒಟ್ಟು 189 ಖರೀದಿ ಕೇಂದ್ರಗಳನ್ನು ತೆರೆದು ರೈತರಿಂದ ತೊಗರಿ ಖರೀದಿ ಮಾಡಲಾಗುತ್ತಿದೆ. ಜಿಲ್ಲೆಯ ರೈತ ಭಾಂದವರು ಎಫ್.ಎ.ಕ್ಯೂ. ಗುಣಮಟ್ಟದ ತೊಗರಿ ಮಾರಾಟಕ್ಕಾಗಿ ತಮ್ಮ ಸಮೀಪದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಅಥವಾ ರೈತ ಉತ್ಪಾದಕ ಸಂಘಗಳಿಗೆ ಭೇಟಿ ನೀಡಿ ಹೆಸರು ನೊಂದಾಯಿಸಿಕೊಂಡು ತೊಗರಿ ಉತ್ಪನ್ನವನ್ನು ಮಾರಾಟ ಮಾಡಬೇಕೆಂದು ಅವರು ಮನವಿ ಮಾಡಿಕೊಂಡಿದ್ದಾರೆ.

1.85 ಲಕ್ಷ ತೊಗರಿ ಖರೀದಿ: ಕಲಬುರಗಿ ಜಿಲ್ಲೆಯಲ್ಲಿ 2024–25ನೇ ಸಾಲಿಗೆ 6.27 ಲಕ್ಷ ಹೆಕ್ಟರ್ ಪ್ರದೇಶದಲ್ಲಿ ತೊಗರಿ ಬಿತ್ತನೆಯಾಗಿದ್ದು,50 ಲಕ್ಷ ಕ್ವಿಂಟಲ್ ಇಳುವರಿ ನಿರೀಕ್ಷಿಸಲಾಗಿದೆ. ಏಪ್ರಿಲ್ 1ರ ವರೆಗೆ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ ಕಲಬುರಗಿ ಸಂಸ್ಥೆಯು 24,123 ಹಾಗೂ ಕರ್ನಾಟಕ ರಾಜ್ಯ ದ್ವಿದಳ ಧಾನ್ಯ ಅಭಿವೃದ್ಧಿ ಮಂಡಳಿ ಕಲಬುರಗಿ ಸಂಸ್ಥೆಯು 10,206 ಸೇರಿ ಒಟ್ಟಾರೆ 34,329 ರೈತರು ತೊಗರಿ ಮಾರಾಟಕ್ಕೆ ನೊಂದಣಿ ಮಾಡಿಕೊಂಡಿದ್ದು, ಈ ಪೈಕಿ 12,556 ರೈತರಿಂದ 1,85,740 ಕ್ವಿಂಟಲ್ ತೊಗರಿ ರೈತರಿಂದ ಖರೀದಿಸಲಾಗಿದೆ. ಇದರಲ್ಲಿ 1,643 ರೈತರಿಗೆ ಡಿ.ಬಿ.ಟಿ ಮೂಲಕ ಹಣ ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಬಿ.ಫೌ–ಜಿಯಾ ತರನ್ನುಮ್ ಅವರು ತಿಳಿಸಿದ್ದಾರೆ.

### ಏ. 3ಕ್ಕೆ ಜಿಲ್ಲಾ ಉಸ್ತುವಾರಿ ಸಚಿವರಿಂದ ಇ-ಖಾತಾ ವಿತರಣೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ.ಏ.01:ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್,ಮಾಹಿತಿ ತಂತ್ರಾಜ್ಞಾನ ಮತ್ತು ಜೈವಿಕ ತಂತ್ರಾಜ್ಞಾನ ಸಚಿವರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಏಪ್ರಿಲ್ 3 ರಂದು ಕಲಬುರಗಿ ನಗರದ ಟೌನ್ ಹಾಲ್‌ನಲ್ಲಿ ಇ–ಖಾತಾ ವಿಶೇಷ ಅಭಿಯಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಆಯ್ದ ಆಸ್ತಿ ಮಾಲೀಕರಿಗೆ ಇ–ಖಾತಾ ಪತ್ರ ವಿತರಣೆ ಮಾಡಲಿದ್ದಾರೆ.

ಸರ್ಕಾರ ಇತ್ತೀಚೆಗೆ ಅನಧಿಕೃತ ಆಸ್ತಿಗಳನ್ನು ಸಾರ್ವಜನಿಕರು ಉಪ ನೊಂದಣಾಧಿಕಾರಿಗಳ ಕಚೇರಿಯಲ್ಲಿ ನೊಂದಣಿ ಮಾಡಿಕೊಂಡದಲ್ಲಿ ಅಂತಹ ಆಸ್ತಿಗಳಿಗೆ ಬಿ–ಖಾತಾ ನೀಡಲು ಆದೇಶಿಸಿದೆ.

ಇನ್ನು ಆಸ್ತಿಯ 'ಎ' ಖಾತಾ ಮತ್ತು 'ಬಿ' ಖಾತಾ ಪಡೆಯಲು ಅನುಕೂಲವಾಗುವಂತೆ ಏಪ್ರಿಲ್ 3 ರಂದು ಬೆಳಿಗ್ಗೆ 10.30 ರಿಂದ ಸಂಜೆ 5.30 ಟೌನ್ ಹಾಲ್ (ಇಂದಿರಾ ಸ್ಮಾರಕ ಭವನ)

ಇಲ್ಲಿ ವಿಶೇಷ ಅಭಿಯಾನ ಆಯೋಜಿಸಿದ್ದು, ಕಲಬುರಗಿ ಮಹಾನಗರ ಪಾಲಿಕೆ ಸೇರಿದಂತೆ ಜಿಲ್ಲೆಯ ಪ್ರತಿ ನಗರ ಸ್ಥಳೀಯ ಸಂಸ್ಥೆಯ ಮಳಿಗೆ ಇಲ್ಲಿ ತೆರೆಯಲಿದ್ದು, ಖಾತಾಗೆ ಅರ್ಜಿ ಸ್ವೀಕರಿಸಲಾಗುತ್ತಿದೆ.

ಸಾರ್ವಜನಿಕರು 'ಎ' ಮತ್ತು 'ಬಿ' ಖಾತಾಗೆ ಅಗತ್ಯ ದಾಖಲಾತಿಗಳೊಂದಿಗೆ ಅರ್ಜಿ ಸಲ್ಲಿಸಿ ಇದರ ಲಾಭ ಪಡೆಯಬಹುದಾಗಿದೆ ಎಂದು ಡಿ.ಯು.ಡಿ.ಸಿ. ಯೋಜನಾ ನಿರ್ದೇಶಕ ಮುನಾವರ್ ದೌಲಾ ತಿಳಿಸಿದ್ದಾರೆ.

### ಬೆಂಬಲ ಬೆಲೆಯಲ್ಲಿ ತೊಗರಿ ಖರೀದಿ: ಹಮಾಲಿ, ಹೆಚ್ಚಿನ ತೊಗರಿ ಕೇಳಿದಲ್ಲಿ ದೂರು ಕೊಡಿ:ಡಿ.ಸಿ ಬಿ.ಫೌಜಿಯಾ ತರನ್ನುಮ್

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಏ.1:ಬೆಂಬಲ ಬೆಲೆ ಯೋಜನೆಯಡಿ ಸ್ಥಾಪಿಸಲಾದ ತೊಗರಿ ಖರೀದಿ ಕೇಂದ್ರಗಳಲ್ಲಿ ಪ್ರತಿ ಕ್ವಿಂಟಾಲ್ ತೊಗರಿಗೆ 100 ರೂ. ಹಮಾಲಿ ಮತ್ತು ಪ್ರತಿ ಕ್ವಿಂಟಾಲಿಗೆ 2 ಕೆ.ಜಿ ತೊಗರಿ ಸೂಟು ಎಂದು ರೈತರಿಂದ ಪಡೆಯುತ್ತಿರುವ ದೂರು ಕೇಳಿ ಬರುತ್ತಿದ್ದು, ರೈತರ ಯಾವುದೇ ಕಾರಣಕ್ಕೂ ಹಮಾಲಿ ಮೊತ್ತ ಅಥವಾ ಕ್ವಿಂಟಾಲಿಗೆ 2 ಕೆ.ಜಿ ತೊಗರಿ ಸೂಟು ನೀಡಬಾರದೆಂದು ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಜಿಲ್ಲೆಯ ರೈತರಲ್ಲಿ ಮನವಿ ಮಾಡಿದ್ದಾರೆ.

ರೈತರು ಪ್ರತಿ 50 ಕೆ.ಜಿ ಚೀಲಕ್ಕೆ ಚೀಲದ ತೂಕ 600 ಗ್ರಾಂ ಮಾತ್ರ ಹೆಚ್ಚುವರಿಯಾಗಿ ತೊಗರಿ ನೀಡಬೇಕಿದ್ದು, ಅದಕ್ಕಿಂತ ಹೆಚ್ಚು ನೀಡಬೇಕಾಗಿಲ್ಲ ಎಂದು ಅವರು ಸ್ಪಷ್ಟನೆ ನೀಡಿದ್ದಾರೆ.

ಒಂದು ವೇಳೆ ಯಾವುದೇ ಖರೀದಿ ಕೇಂದ್ರಗಳಲ್ಲಿ ಪ್ರತಿ ಕ್ವಿಂಟಾಲ್ ತೊಗರಿಗೆ 100 ರೂ. ಹಮಾಲಿ ಅಥವಾ ಪ್ರತಿ ಕ್ವಿಂಟಾಲಿಗೆ 2 ಕೆ.ಜಿ ತೊಗರಿ ಸೂಟು ನೀಡುವಂತೆ ಕೇಳಿದಲ್ಲಿ ಕೂಡಲೇ ರೈತರು ತಾಲೂಕಿನ ತಹಶೀಲ್ದಾರರು, ಸಹಾಯಕ ಕೃಷಿ ನಿರ್ದೇಶಕಕು ಅಥವಾ ಕೃಷಿ ಮಾರುಕಟ್ಟೆ ಇಲಾಖೆಯ ಸಹಾಯಕ ನಿರ್ದೇಶಕರು ಕೃಷಿ ಮಾರುಕಟ್ಟೆ ಇಲಾಖೆ ಅಥವಾ ಸಂಬಂಧಿತ ತಾಲೂಕಾ ನೋಡಲ್ ಅಧಿಕಾರಿಗಳಲ್ಲಿ ದೂರು ಸಲ್ಲಿಸುವಂತೆ ತಿಳಿಸಿದ್ದಾರೆ.

## ಆರ್ ಟಿಒ ಅಧಿಕಾರಿಗಳ ಮಿಂಚಿನ ಕಾರ್ಯಚರಣೆ. ನಾಲ್ಕು ಐಷಾರಾಮಿ ಕಾರುಗಳು ಜಪ್ತಿ- 2.50 ಲಕ್ಷ ರೂ. ತೆರಿಗೆ ವಸೂಲಿ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ:ಏ:1: ಅನ್ಯ ರಾಜ್ಯಗಳಿಂದ ಐಷಾರಾಮಿ ಕಾರು ಖರೀದಿಸಿ ಇಲ್ಲಿ ಆರಾಮವಾಗಿ ಓಡಾಡಿಸಿಕೊಂಡಿದ್ದ ನಾಲ್ಕು ಜನರಿಗೆ ಹಠಾತ್ ಶಾಕ್ ನೀಡಿರುವ ಆರ್ ಟಿಒ ಅಧಿಕಾರಿಗಳು, ನಾಲ್ಕು ವಾಹನಗಳನ್ನು ಶನಿವಾರ ಇಲ್ಲಿ ಜಪ್ತಿ ಮಾಡಿ, 2.50 ಲಕ್ಷ ರೂ.ತೆರಿಗೆ

ವಸೂಲಿ ಮಾಡಿದ್ದಾರೆ.

ಪಾಂಡಿಚೇರಿ ರಾಜ್ಯದ ಪಿವೈ ನೊಂದಣಿ ಇರುವ ನಾಲ್ಕು ಅತ್ಯಧಿಕ ಬೆಲೆಯುಳ್ಳ ಐಷಾರಾಮಿ ವಾಹನಗಳನ್ನು ಜಪ್ತಿ ಮಾಡಿದಾಗ ಒಬ್ಬರು ಮಾತ್ರ ಒಂದು ವಾಹನದ ತೆರಿಗೆ 2.50ಲಕ್ಷ ರೂ. ಕಟ್ಟಿ ವಾಹನ ಬಿಡಿಸಿಕೊಂಡು ಹೋಗಿದ್ದರೇ ಇನ್ನೂ ಮೂರು ವಾಹನಗಳ ಜಪ್ತಿ ಆರ್ ಟಿಓ ಕಚೇರಿ ಅಂಗಳ ಸೇರಿವೆ.

ಪ್ರಾದೇಶಿಕ ಸಾರಿಗೆ ಅಧಿಕಾರಿ ಮಿಲಿಂದಕುಮಾರ ನೇತೃತ್ವದಲ್ಲಿ ಅಧಿಕಾರಿಗಳಾದ ಹಯ್ಯಾಳಪ್ಪ, ಚಂದ್ರಕಾಂತ ಮತ್ತು ಪ್ರಭಾಕರ ಎಂಬುವವರೇ ಈ ವಾಹನಗಳ ತಿರುಗಾಟದ ಪತ್ತೆ ಹಚ್ಚಿ ಜಪ್ತಿ ಮಾಡಿದ್ದಾರೆ.

ಕಡಿಮೆ ತೆರಿಗೆ ಇರುವ ಪಾಂಡಿಚೇರಿ ರಾಜ್ಯದಿಂದ ಇನ್ನೂ ಅನೇಕ ವಾಹನಗಳನ್ನು ಖರೀದಿಸಿ ತಂದು ನಗರ ಮತ್ತು ಜಿಲ್ಲೆಯ ವಿವಿಧಡೆ ತಿರುಗಾಡುವವರ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದ್ದು, ಅಂತಹವುಗಳನ್ನು ಸಹ ಜಾಲ ಬೀಸಿ ಜಪ್ತಿ ಮಾಡಲಾಗುವುದೆಂದು ಆರ್ ಟಿಒ ಮಿಲಿಂದಕುಮಾರ ತಿಳಿಸಿದ್ದಾರೆ.

# ಅನುಭವ ಮಂಟಪ ತಿಂಗಳ ಕಾರ್ಯಕ್ರಮ ಹಾಗೂ ಅಲ್ಲ ಮಪ್ರಭುದೇವರ ಜಯಂತಿ.




ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :– ಏ 1 ಇಲ್ಲಿನ ಅನುಭವ ಮಂಟಪ ತಿಂಗಳ ಕಾರ್ಯಕ್ರಮ ಹಾಗೂ ಅಲ್ಲಮಪ್ರಭು ದೇವರ ಜಯಂತಿಯ ಅನುಭವ ಮಂಟಪದ ಆವರಣದಲ್ಲಿ ಜರುಗಿತು. ಈ ವೇಳೆ ನಾಡೋಜ ಪೂಜ್ಯ ಶ್ರೀ ಡಾ. ಬಸವಲಿಂಗ ಪಟ್ಟದೇವರು ದಿವ್ಯಸನ್ನಿಧಾನ ವಹಿಸಿ ಮಾತನಾಡಿ ಅನುಭವ ಮಂಟಪ ಕಾರ್ಯಕ್ರಮ ಜಗದಗಲವಾದ ಕಾರ್ಯಕ್ರಮ ಆಗಿದೆ. ಇಲ್ಲಿ ನಡೆಯುವ ಸಣ್ಣ ಪ್ರಮಾಣದ ಕಾರ್ಯಕ್ರಮ ಆಗಿದ್ದರೂ ಆನ್ಲೈನ್ ಮೂಲಕ ಜಗತ್ತಿನ ಅನೇಕ ದೇಶಗಳಲ್ಲಿರುವ ಬಸವ ಭಕ್ತರು ಈ ಕಾರ್ಯಕ್ರಮವನ್ನು ವೀಕ್ಷಿಸಬಹುದಾಗಿದೆ ಎಂದರು. ಪೂಜ್ಯ ಶ್ರೀ ಶಿವಾನಂದ ಮಹಾಸ್ವಾಮಿಗಳು ಮಾತನಾಡಿ ಅನುಭವ ಮಂಟಪ ಕಾರ್ಯಕ್ರಮ ಬಸವಭಕ್ತರ ಹೆಮ್ಮೆಯ ಕಾರ್ಯಕ್ರಮವಾಗಿದೆ ಎಂದರು. ಪೂಜ್ಯ ಮಾತೆ ಸುಗುಣಾದೇವಿ ತಾಯಿ ಸಮ್ಮುಖ ವಹಿಸಿದ್ದರು.

ಹಿರಿಯ ಸಾಹಿತಿ ಡಾ. ಸೋಮನಾಥ ಯಾಳವಾರ ಪ್ರಾಸ್ತಾವಿಕವಾಗಿ ಮಾತನಾಡಿ ಅನುಭವ ಮಂಟಪ ಬಸವಕಲ್ಯಾಣದಲ್ಲಿ 12ನೇ ಶತಮಾನದಲ್ಲಿ ಬಸವಣ್ಣನವರು ಮತ್ತು ಶರಣ–ರು ಸ್ಥಾಪಿಸಿದ ಪ್ರಜಾಪ್ರಭುತ್ವದ ಜಗತ್ತಿನ ಪ್ರಪ್ರಥಮ ಸಂಸತ್ತು ಆಗಿದೆ. ವಿನಾಕಾರಣವಾಗಿ ಇಂದಿನ ಕೆಲವರು ಅನುಭವ ಮಂಟಪ ಇರಲೇ ಇಲ್ಲ ಎಂಬ ವಿತಂಡವಾದ ಮಾಡುತ್ತಿರುವುದು ಸಲ್ಲದ ನಡೆಯಾಗಿದೆ. ಇದನ್ನು ಲಿಂಗಾಯತರು ಒಗ್ಗಟ್ಟಿನಿಂದ ಖಂಡಿಸಬೇಕು ಎಂದರು.

ಉಪನ್ಯಾಸಕರಾದ ಡಾ. ಜಯಶ್ರೀ ದಂಡೆ ಮಾತನಾಡಿ ಬಸವಾದಿ ಶರಣರ ವಚನಗಳು ಅನುಭಾವಿಕ ನೆಲೆಗಟ್ಟಿನ ಮೇಲೆ ಇವೆ. ಅನುಭಾವ ಎಂಬುವುದು ಇಂದ್ರಿಯಾತೀತ ಪರಮಾನಂದ ಅವಸ್ಥೆ ಆಗಿದೆ. ಅದನ್ನು ಅಲ್ಲಮ ಪ್ರಭುದೇವರು ತಮ್ಮ ಅನೇಕ ವಚನಗಳಲ್ಲಿ ಪ್ರಸ್ತುತ ಪಡಿಸಿದ್ದಾರೆ. ಅನುಭವ ಎಂಬುದು ಕೇವಲ ಮಾತಿನ ಮಂಟಪವಾಗಿರದೆ ಅನುಭಾವದ ನೆಲೆಯಾಗಿದೆ ಎಂದರು. ಈ ಸಂದರ್ಭದಲ್ಲಿ

ಡಾ. ವೀರಣ್ಣ ದಂಡೆ, ಡಾ. ರೇಖಾ ಮಹಾಜನ, ಆಕಾಶ ಖಂಡಾಳೆ ಮತ್ತು ಸಂತೋಷ ತಾಂಬೋಳೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ವಿಜಯಲಕ್ಷ್ಮಿ ಗುಂಡಪ್ಪ ಶೆಟ್ಟಿ ಅವರು ಬಸವ ಗುರು ಪೂಜೆ ನೆರವೇರಿಸಿದರು. ಡಾ. ಮೀನಾಕ್ಷಿ ಬಿರಾದಾರ ಸ್ವಾಗತಿಸಿದರು. ಭಕ್ತಿದಾಸೋಹ ಗಂಗಮ್ಮ ವೈಜಿನಾಥ ಪಾಟೀಲ ಅಟ್ಟರಗಾ ವಹಿಸಿದ್ದರು. ಲಕ್ಷ್ಮಿಬಾಯಿ ಪಾಟೀಲ ವಚನ ಗಾಯನ ಮಾಡಿದರು. ಸಂಗಮೇಶ ತೆ–ೂಗರಖೇಡೆ ನಿರೂಪಿಸಿದರು. ಅಶೋಕ ಕುಂಬಾರ ವಂದಿಸಿದರು.

# ಕಾಣೆಯಾಗಿದ್ದಾರೆ.

ಶ್ರೀ ಮಹೇಬೂಬ ಪಟೇಲ ತಂದೆ ಲಾಲ್ ಪಟೇಲ್ ವಯಸ್ಸು (30). ಸಾ. ಹಂದಿಕೇರಾ. ತಾ. ಹುಮನಾಬಾದ. ಇವರು 30 ವರ್ಷಗಳ ಹಿಂದೆ ನಾಪತ್ತೆಯಾಗಿದ್ದು, ಈ ಸಂಬಂಧ ಹುಮನಾಬಾದ ಪೋಲಿಸ ಠಾಣೆಯಲ್ಲಿ 8–3–2025 ರಂದು ಪ್ರಕರಣ ದಾಖಲಾಗಿದ್ದು, ಸದರಿಯವರು ಹುಡುಕಾಟ ಪೋಲಿಸ್ ಇಲಾಖೆ ಮಾಡುತ್ತಿದ್ದು, ಹಾಗೂ ಇವರ ಸಂಬಂಧಿಕರು ಕೂಡ ಹುಡುಕಾಟ ನಡೆಸುತ್ತಿದ್ದಾರೆ.

ಹಂದಿಕೇರಾ ಗ್ರಾಮದಲ್ಲಿ ಸರ್ವೆ ಸಂಖ್ಯೆಗಳಾದ 46/47/124/126 ಗಳಾಗಿದ್ದು, ಈ ಸರ್ವೆ ಸಂಖ್ಯೆಗಳು ಜಂಟಿಯಾಗಿದ್ದು, ಇವರ ಸಂಬಂಧಿಗಳು ಹಾಗೂ ಅಣ್ಣ–ತಮ್ಮಂದಿರು ಹಂಚಿಕೆ ಮಾಡಿಕೊಳ್ಳಬೇಕಾಗಿರುತ್ತದೆ.

ಆದರಿಂದ ಶ್ರೀ ಮಹೇಬೂಬ ಪಟೇಲ ತಂದೆ ಲಾಲ್ ಪಟೇಲ್ ಸಾ.ಹಂದಿಕೇರಾ. ಇವರು ಎಲ್ಲಾದರು ಕಂಡರೆ ಈ ಕೆಳಕಂಡ ವಿಳಾಸಕ್ಕೆ ತಿಳಿಸಲು ಕುಟುಂಬಸ್ಥರು ಮನವಿ ಮಾಡಿದ್ದಾರೆ. ಹುಮನಾಬಾದ ಪೋಲಿಸ ಠಾಣೆ ಪಿ.ಎಸ್.ಐ ರವರ ನಂಬರಗೆ 9480803452, ಹಾಗೂ 6360111408, 9390530396 ಸಂರ್ಪಕಿಸಬಹುದು.

# ಈದ್ಗಾ ಮೈದಾನದಲ್ಲಿ ಸಾವಿರಾರು ಮುಸ್ಲಿಂ ಬಾಂಧವರು ಈದುಲ್ ಫಿತರ್ ಪ್ರಾರ್ಥನೆ



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ: –ಏ 1 ಇಲ್ಲಿನ ಈದ್ಗಾ ಮೈದಾನದಲ್ಲಿ ಸಾವಿರಾರು ಮುಸ್ಲಿಂ ಬಾಂಧವರು ಈದುಲ್ ಫಿತರ್ ಪ್ರಾರ್ಥನೆಯನ್ನು ಸಲ್ಲಿಸಿದರು. ನಂತರ ನಸಿರುದ್ದಿನ್ ಜನಾಬ್ ಮಾತನಾಡಿ ಪವಿತ್ರ ಗ್ರಂಥ ಖುರಾನ್ ಎಲ್ಲರ ಸನ್ಮಾರ್ಗಕ್ಕಾಗಿ ಇಡೀ ಮಾನವ ಕುಲಕ್ಕೆ ನೇರ ಮಾರ್ಗವನ್ನು ತೋರಿಸಲಿಕ್ಕಾಗಿ ಬಂದಿರುವ ಅಂತಿಮ ಗ್ರಂಥವಾಗಿದೆ ಎಂದು ಹೇಳಿದರು. ಎಲ್ಲರೂ ಈ ಪವಿತ್ರ ಗ್ರಂಥವನ್ನು ಓದಬೇಕು ಇದರ ಬಗ್ಗೆ ವಿಚಾರವನ್ನು ಮಾಡಬೇಕು ಅದರಂತೆ ತಮ್ಮ ಜೀವನವನ್ನು ಸಾಗಿಸಬೇಕೆಂದು ಎಲ್ಲರಲ್ಲಿ ವಿನಂತಿ ಮಾಡಿದರು. ಮತ್ತು ಪವಿತ್ರ ಕುರಾನಿನ ಶಿಕ್ಷಣವನ್ನು ಅದರ ಆಚಾರ ವಿಚಾರವನ್ನು ಬೇರೆಯವರಿಗೆ ಹಂಚಬೇಕೆಂದು ಅವರು ಹೇಳಿದರು. ಪವಿತ್ರ ಖುರಾನಿನ ಶಿಕ್ಷಣವನ್ನು ಕೊಡುವವನು ಎಲ್ಲಾ ರೀತಿಯಲ್ಲಿ ಸ್ವಚ್ಛನ ಸ್ವಚ್ಛವನಾಗಿರಬೇಕು ಅವನು ತನ್ನ ಜೀವನದಲ್ಲಿ ಯಾವುದೇ ಅಧರ್ಮವಾಗಲಿ ಪಾಪದ ಕೆಲಸವಾಗಲಿ ಎಂದಿಗೂ ಮಾಡಲಾರನು ಅಂತವನು ಈ ಪವಿತ್ರ ಕುರಾನಿನ ಶಿಕ್ಷಣಗಳನ್ನು ಬೇರೆಯವರಿಗೆ ನಿಸ್ವಾರ್ಥವಾಗಿ ಕಲಿಸಬೇಕು.

ಮತ್ತು ನಮ್ಮ ಸಮಾಜದಲ್ಲಿ ಪ್ರತಿಯೊಬ್ಬರೂ ಪರಸ್ಪರ ಗೌರವಿಸಬೇಕು ನಾವೆಲ್ಲರೂ ಮಾನವರು ಮನುಷ್ಯರು ಎಂಬ ಅರಿವು ಪರಸ್ಪರ ಮೂಡಿಸಬೇಕು. ಇದರಿಂದ ಸಮಾಜದಲ್ಲಿ ಸಾಮಾಜಿಕ ಸೌಹಾರ್ದತೆ ಬೆಳೆಸಲಿಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿದರು. ಪಕುರ್ಂದ ಅಲಿ ಇಮಾಮ ಜಾಮಿ ಮಸ್ಜಿದ್ ಪ್ರಾರ್ಥನೆಯನ್ನ ಸಲ್ಲಿಸಿದರು.

## ಬಸನಗೌಡ ಪಾಟೀಲ್ ಯತ್ನಾಳ ಅವರನ್ನು ಉಚ್ಚಾಟನೆ ಮಾಡಿರುವುದನ್ನು ಖಂಡಿಸಿ ಬೃಹತ್ ಪ್ರತಿಭಟನೆ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ ಜಿಲ್ಲಾ ಹಿಂದೂ ಕಾರ್ಯಕರ್ತರಿಂದ ಬಸನಗೌಡ ಪಾಟೀಲ್ ಯತ್ನಾಳ ಬಿಜೆಪಿಯಿಂದ ಉಚ್ಚಾಟನೆ ಮಾಡಿದರುವ ಖಂಡಿಸಿ ಸರ್ದಾರ ವಲ್ಲಭಭಾಯಿ ಪಟೇಲ ವೃತ್ತದಲ್ಲಿ ಬೃಹತ್ ಪ್ರತಿಭಟನೆ ಮಾಡಲಾಯಿತು.. ಟೈರ್ ಗೆ ಬೆಂಕಿ ಹಚ್ಚಿ ಆಕ್ರೋಶವನ್ನು ವ್ಯಕ್ತಪಡಿಸಿದರು. ಯತ್ನಾಳ್ ಅವರನ್ನು ಉಚ್ಚಾಟನೆ ಮಾಡಿರುವುದು ಹಿಂದುಗಳಿಗೆ ನೋವುಂಟಾಗಿದೆ. ಮರಳಿ ಭಾಜಪ ಪಕ್ಷಕ್ಕೆ ಯತ್ನಾಳವರನ್ನೂ ಸೇರಿಸದೆ ಇದ್ದರೆ ಬರುವ ದಿನಗಳಲ್ಲಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರ ಮನೆಗೆ ಮುತ್ತಿಗೆ ಹಾಕಬೇಕಾಗುತ್ತೆ ಎಂದು ಹಿಂದೂ ಹೋರಾಟಗಾರ್ತಿ ಮಾಲಾ ಕಣ್ಣಿ ಅವರು ಎಚ್ಚರಿಕೆ ನೀಡಿದರು..

ಕರ್ನಾಟಕದ ಹಿಂದೂ ಫೈಯರ್ ಬ್ರ್ಯಾಂಡ್ ಎಂದೇ ಪ್ರಸಿದ್ಧಿಯಾದ ಹಿಂದೂ ಹುಲಿ ನೇರ ದಿಟ್ಟ ಮಾತುಗಾರ ವಿಜಯಪೂರದ ವಿಜಯಶಾಲ ಧೀಮಂತ ನಾಯಕ ಕೇಂದ್ರ ಬಿ.ಜೆ.ಪಿ. ಸರಕಾರದ ಮಾಜಿ ಸಚಿವರು ಹಾಗೂ ವಿಜಯಪುರದ ಹಾಲಿ ಜನಪ್ರಿಯಾ ಶಾಸಕರು ಬಸನ್ನಗೌಡ ಆರ್ ಪಾಟೀಲ್ ಯತ್ನಾ ಳ್ ವರಿಗೆ ಬಿ.ಜೆ.ಪಿ ಪಕ್ಷದಿಂದ ಉಚ್ಚಾಟನೆ ಮಾಡಿದಕ್ಕೆ ಖಂಡಿಸಿ ಕಲಬುರಗಿ ಬಿ.ಆರ್.ಪಿ. ಯತ್ನಾಳ ಗೌಡರ ಅಭಿಮಾನಿಗಳಿಂದ ಹಾಗೂ ಕಲಬುರಗಿ ಹಿಂದೂ ಕಾರ್ಯಕರ್ತರಿಂದ ಬೃಹತ್ ಪ್ರತಿಭಟನೆ ನಡೆಸಿದರು.



ಬಸವಕಲ್ಯಾಣ :– ರಾಜೀವಗಾಂಧಿ ಆರೋಗ್ಯ ವಿಶ್ವವಿದ್ಯಾಲಯ ಬೆಂಗಳೂರು ಸ್ನಾತಕ ಅಧ್ಯಯನ ಮಂಡಳಿ( BOS )ಸದಸ್ಯರಾಗಿ ನೇಮಕಗೊಂಡ ಡಾಟಟ ಶಿವಶರಣಯ್ಯಾ ಮಠಪತಿ ಬೀದರ ಇವರನ್ನು ಹಾರಕೂಡ ಶ್ರೀಮಠದ ಪೀಠಾಧಿಪತಿಗಳಾದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ದಂಪತಿಗಳಿಗೆ ಸತ್ಕರಿಸಿ ಆಶೀರ್ವದಿಸಿದರು. (ಚಿತ್ರ ಮಲ್ಲಮ್ಮ ನುಡಿ ವಾರ್ತೆ)

# ಗುರು ಸನ್ನಿಧಿ ಶುಭದ ಕಣಜ ಹಾರಕೂಡ ಶ್ರೀ.



ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :– ಏ 1 ಗುರುವಿನ ಸನ್ನಿಧಾನ ವೆಂದರೆ ಅದು ಶುಭದ ಕಣಜ, ಎಂತಹ ಸಂದರ್ಭದಲ್ಲೂ ಅಲ್ಲಿ ಅಶುಭಕ್ಕೆ ಅವಕಾಶವಿಲ್ಲವೆಂದು ಹಾರಕೂಡದ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ನುಡಿದರು.

ತಾಲೂಕಿನ ಹಾರಕೂಡ ಶ್ರೀಮಠದಲ್ಲಿ ಪೀರಜೆ ಪರಿವಾರದ ಹೆಣ್ಣುಮಕ್ಕಳಿಂದ ಆಯೋಜಿಸಿದ ಗುರುವಂದನೆ ಹಾಗೂ 790ನೇ ತುಲಾಭಾರ ಸಮಾರಂಭದ ಪಾವನ ಸನ್ನಿಧಾನ ವಹಿಸಿ ಮಾತನಾಡಿ ಮನುಷ್ಯತ್ವದಿಂದ ಮಾಧವತ್ವದ ಮಹೋನ್ನತ ಸಾಧನೆ ದಕ್ಕಬೇಕಾದರೆ ಗುರು ಸಾನಿಧ್ಯದಿಂದ ಮಾತ್ರ ಸಾಧ್ಯ. ಭ್ರಾಂತಿಯ ಲೋಕ ಬಯಲಾಗಿ ಬ್ರಹ್ಮಜ್ಞಾನ ಅನುಭಾವ ಪಡೆಯಲು ಗುರು ಕಾರುಣ್ಯದ ಘನ ಆಶ್ರಯ ದೊರೆತಾಗ ಸಾಧ್ಯವಾಗುತ್ತದೆ.

ನಮ್ಮ ಇಡೀ ಜೀವನವೇ ಶುಭಘಳಿಗೆಯಾಗಿ ಮಾರ್ಪಡಬೇಕಾದರೆ ಪರಿಶುದ್ಧ ಚಿತ್ತದಿಂದ ಗುರುವಿನ ಪಾದದಡಿ ನಮ್ಮನ್ನು ನಾವು ನೈವೇಧ್ಯ ಕರಿಸಿಕೊಳ್ಳಬೇಕು.

ಈ ದಿಶೆಯಲ್ಲಿ ಹಾರಕೂಡ ಗ್ರಾಮದ ಪೀರಜೆ ಪರಿವಾರದ ಹೆಣ್ಣು ಮಕ್ಕಳ ಗುರು ಭಕ್ತಿ ಅನುಕರಣೀಯುವಾಗಿದ್ದು ಅವರೆಲ್ಲರಿಗೂ ಮಹಾ ಗುರು ಹಾರಕೂಡ ಅಜ್ಜನವರ ಅನುಗ್ರಹದ ಶ್ರೀರಕ್ಷೆ ದೊರಕುವಂತಾಗಲಿ ಎಂದು ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಬೀದರ ಜಿಲ್ಲಾ ಪಂಚಾಯಿತಿ ನಿವೃತ್ತ ಉಪ ಕಾರ್ಯದರ್ಶಿಗಳಾದ ಬಿ.ಕೆ ಹಿರೇಮಠ, ಶಿಕ್ಷಕರಾದ ಮಲ್ಲಿನಾಥ ಹಿರೇಮಠ, ಮೇಘರಾಜ ನಾಗರಾಳೆ, ಶಿವಶರಣಯ್ಯ ಕಂಬಳಿ ಮಠ, ಡಾ. ಶಿವಶರಣಯ್ಯ ಮಠಪತಿ, ಆನಂದರಾವ ಝುಳಕೆ, ಶರಣಬಸಪ್ಪ ಹತ್ತೆ, ನಾಗಣ್ಣ ಪೀರಜೆ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಚಂದ್ರಕಲಾ ಪೀರಜೆ ಸ್ವಾಗತಿಸಿದರು. ಕಾರ್ತಿಕ ಸ್ವಾಮಿ ಯಲದಗುಂಡಿ ಪ್ರಾರ್ಥನಾ ಗೀತೆ. ಸ್ನೇಹಾ ಎಕಲೂರೆ ಮತ್ತು ಶಿವಗೀತಾ ಜಾಂಜೆ ಭಕ್ತಿ ಗೀತೆ. ಅರ್ಚನಾ ಗಂದಿಗುಡಿ ನಿರೂಪಿಸಿದರು. ಪವಿತ್ರಾ ಸಿರಗಾಪೂರ ವಂದಿಸಿದರು.

## ಡಾ.ಶಿವಕುಮಾರ ಸ್ವಾಮೀಜಿಗಳ ಸೇವೆ ಸಮಾಜಕ್ಕೆ ಮಾದರಿ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ:ಏ.1:ಸಮಾಜದಲ್ಲಿರುವ ಲಕ್ಷಾಂತರ ಬಡ, ಅನಾಥ ಮಕ್ಕಳಿಗೆ ಅನ್ನ, ಜ್ಞಾನ ದಾಸೋಹ, ಸಂಸ್ಕಾರ, ಮಾನವೀಯತೆಯನ್ನು ನೀಡಿ, ಅವರ ಬದುಕನ್ನು ಕಟ್ಟಿಕೊಟ್ಟ ಮಹಾನ ಶಿಲ್ಪಿ ಸಿದ್ಧಗಂಗಾ ಮಠದ ಶ್ರೀಗಳಾದ ಡಾ.ಶಿವಕುಮಾರ ಮಹಾಸ್ವಾಮೀಜಿಗಳಾಗಿದ್ದಾರೆ. ಪರಹಿತ, ಸಮಾಜ ಸೇವೆಯಲ್ಲಿಯೇ ಶಿವನನ್ನು ಕಂಡು ದೈವತ್ವಕ್ಕೇರಿದ ಮಹಾನ ಚೇತನ ಅವರಾಗಿದ್ದು, ಅವರ ಸೇವೆ ಸಮಾಜಕ್ಕೆ ಸದಾ ಮಾದರಿಯಾಗಿದೆ ಎಂದು ಉಪನ್ಯಾಸಕ, ಸಮಾಜ ಸೇವಕತಕ ಎಚ್.ಬಿ.ಪಾಟೀಲ ಅಭಿಪ್ರಾಯಪಟ್ಟರು.

ನಗರದ ಆಳಂದ ರಸ್ತೆಯ ಶೆಟ್ಟಿ ಕಾಂಪ್ಲೇಕ್ಸ್ ನಲ್ಲಿರುವ ‘ಬಸವೇಶ್ವರ ಡಿಗ್ರಿ ಕಾಲೇಜ್’ನಲ್ಲಿ ‘ಬಸವೇಶ್ವರ ಸಮಾಜ ಸೇವಾ ಬಳಗ’ದ ವತಿಯಿಂದ ಮಂಗಳವಾರ ಏರ್ಪಡಿಸಿದ್ದ ಡಾ.ಶಿವಕುಮಾರ ಮಾಹಾಸ್ವಾಮೀಜಿಯವರ 118ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಶ್ರೀಗಳ ಭಾವಚಿತ್ರಕ್ಕೆ ಪುಷ್ಪ ನಮನಗಳನ್ನು ಸಲ್ಲಿಸಿ ಅವರು ಮಾತನಾಡುತ್ತಿದ್ದರು.

ಸಮಾಜ ಸೇವಕ, ಚಿಂತಕ ಶಿವಯೋಗೆಪ್ಪಾ ಎಸ್.ಬಿರಾದಾರ ಮಾತನಾಡಿ, ಹನ್ನೆರಡನೆಯ ಶತಮಾನದ ಬಸವಾದಿ ಶರಣ–ರ ತತ್ವವನ್ನು ಅಕ್ಷರಶಃ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಅದರಂತೆ ಬದುಕಿ ತೋರಿಸಿದವರು. ದಾಸೋಹ, ಕಾಯಕ ಸಂಸ್ಕೃತಿ, ಸಮಾನತೆ, ಸಾಮರಸ್ಯ, ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ಗುಣ ಪೂಜ್ಯರದಾಗಿತ್ತು. ಸಮಾಜಕ್ಕಾಗಿ ನಿರಂತರವಾಗಿ ದಣಿವರಿಯದೆ ಸಾರ್ಥಕ ಸೇವೆಯನ್ನು ಸಲ್ಲಿಸಿ ಲಕ್ಷಾಂತರ ಜನರ ಹೃದಯ ಮಂದಿರದಲ್ಲಿ ಶಾಶ್ವತವಾಗಿ ನೆಲೆನಿಂತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯ ನಾಗೇಶ್ ತಿಮಾಜಿ ಬೆಳಮಗಿ, ಉಪನ್ಯಾಸಕರಾದ ರಾಜೇಶ್ವರಿ ಪಾಟೀಲ, ಅನ್ನಪೂರ್ಣ ಪಸಾರ, ಪ್ರಮುಖರಾದ ಶ್ರೀಶೈಲ್ ಪೂಜಾರಿ, ಕಾರ್ತಿಕ್, ಗಾಯತ್ರಿ, ಭಾಗ್ಯಶ್ರೀ, ಅಂಬಿಕಾ ಪೂಜಾರಿ, ಮಧುಬಾಣಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ಅಲ್ಲಾಹುವಿನ ಅನುಗ್ರಹಕ್ಕೆ ಬಡವರ ಸೇವೆ ಮಾಡಿ:– ಅಸ್ಲಾಂಮಿಯಾ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:ಮುಸ್ಲಿಂ ಸಮುದಾಯದವರು ಪವಿತ್ರ ರಂಜಾನ್ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು. ಕಳೆದೊಂದು ತಿಂಗಳಿಂದ ಶ್ರದ್ಧಾ ಭಕ್ತಿಯಿಂದ ಉಪವಾಸ ವ್ರತಾಚರಣೆ ಮಾಡಿರುವ ಇವರು, ಸೋಮವಾರ ಬೆಳಿಗ್ಗೆ ಪಟ್ಟಣದ ಈದ್ಗಾ ಮೈದಾನದಲ್ಲಿ ಏಕ ಕಾಲಕ್ಕೆ ಸಾವಿರಾರು ಮುಸ್ಲಿಂ ಸಮುದಾಯದವರು ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು. ನಂತರ ಪರಸ್ಪರವಾಗಿ ಕೈ–ಕೈ ಮಿಲಾಯಿಸುವುದರ ಮೂಲಕ ರಂಜಾನ್ ಹಬ್ಬ ಆಚರಿಸಿದರು. ಸಮಾಜ ಕಾರ್ಯಕರ್ತ ಮಹಮ್ಮದ್ ಅಸ್ಲಾಂಮಿಯಾ ಮಾತನಾಡಿ, ಮಾನವೀಯತೆಯ ಒಳಿತಿಗಾಗಿ ತನ್ನನ್ನು ತಾನು ಅರ್ಪಿಸುವವನೇ ನೈಜವಾದ ಮುಸ್ಲಿಂ, ಸತ್ಯಮಾರ್ಗದಲ್ಲಿ ನಡೆಯುವಾಗ ಎದುರಾಗುವ ಸಂಕಷ್ಟಗಳನ್ನು ಎದುರಿಸಲು ಬೇಕಾಗುವ ಸಹನೆಯ ಗುಣವನ್ನು ಬೆಳೆಸಲು, ಹಾಗೂ ಹಸಿದವರ ಸಂಕಷ್ಟವನ್ನು ಅರಿಯಲು ಒಂದು ತಿಂಗಳವರೆಗೆ ಉಪವಾಸ ವ್ರತಗಳ ತರಬೇತಿಯನ್ನು ನೀಡಲಾಯಿತು, ಸಮಾಜದಲ್ಲಿರುವ ಬಡವರ ನಿರ್ಗತಿಕರ ಕಲ್ಯಾಣಕ್ಕಾಗಿ ಧನವನ್ನು

ತ್ಯಾಗ ಮಾಡುವ ಮನೋಭಾವ ರೂಡಿಸಿಕೊಳ್ಳಬೇಕು, ಸದಾ ಸತ್ಯದ ಪಥದಲ್ಲಿ ನಡೆಯಬೇಕು, ಸುಳ್ಳು ನಮ್ಮನ್ನು ಪಾಪದ ಪ್ರತಾಪಕ್ಕೆ ತಳ್ಳುತ್ತದೆ, ಅದು ನಮ್ಮನ್ನು ಹಾಳುಮಾಡುತ್ತದೆ ಸುಳ್ಳನ್ನು

ತ್ಯಜಿಸಿ ಸತ್ಯದ ಮಾರ್ಗದಲ್ಲಿ ನಡೆದು, ದುರ್ಗಣಗಳನ್ನು ತ್ಯಜಿಸಿ ಸದ್ಗುಣಗಳನ್ನು ಅಳವಡಿಸಿಕೊಂಡು ಸಂಸ್ಕಾರಯುತ ಬದುಕು ನಡೆಸಲು ಪ್ರಯತ್ನಿಸಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ಸೈಯದ್ ಹಾರುನ ಗಂಜಿವಾಲೇ, ಸೈಯದ್ ಮಝುರ್ ಸುನಾರ್, ಎಂ.ಡಿ. ರಿಯಾಜ್, ಅಹಿಮದ್ ಖುರೇಶಿ, ಶೇಕ್ ಅಂಜತ್, ಎಂ.ಡಿ.ವಾಜಿದ್, ಪವನ ನಾಯಕ್ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಚಿಟಗುಪ್ಪ: ಪವಿತ್ರ ರಂಜಾನ್ ಹಬ್ಬದ ಅಂಗವಾಗಿ ಪಟ್ಟಣದಲ್ಲಿ ಅತಿಥಿ ಶಿಕ್ಷಕ ಹಸನ್ ಅವರ ಮನೆಯಲ್ಲಿ ಆಯೋಜಿಸಿದ ಔತಣ ಕೂಟದಲ್ಲಿ ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ನೌಕರರ ಸಂಘದ ವಿಭಾಗೀಯ ಕಾರ್ಯಾಧ್ಯಕ್ಷ ಮುರಳೀಧರ, ಸಂಜೀವನ ಭೋಸ್ಲೆ, ವೆಂಕಟಪ್ಪ, ಯಲ್ಲಾಲಿಂಗ, ಅನೀಲಕುಮಾರ್ ಸಿಂಧೆ, ಶಿವರಾಜ್ ಮುಸ್ತಾಪುರ್, ರಾಜಕುಮಾರ ಆರ್. ಹಡಪದ, ನರೇಂದ್ರರೆಡ್ಡಿ ರಾಂಪುರ ಅವರು ಭಾಗವಹಿಸಿ ರಂಜಾನ್ ಹಬ್ಬದ ಶುಭಾಶಯಗಳು ತಿಳಿಸುತ್ತಾ, ಶೀರ್ ಖುರ್ಮಾ, ಗುಲ್ ಗುಲೇ ಮತ್ತು ಸಿಹಿಯಾದ ತಿಂಡಿಗಳನ್ನು ಸೇವನೆ ಮಾಡಿದರು. (ಮಲ್ಲಮ್ಮ ನುಡಿ ಚಿತ್ರ)


# ಜು.12 ರಂದು ರಾಷ್ಟ್ರೀಯ ಲೋಕ್ ಅದಾಲತ್



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.01: ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಇವರ ನಿರ್ದೇಶನದಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ವತಿಯಿಂದ ಜುಲೈ 12 ರಂದು ನಗರದ ತಾಳೂರು ರಸ್ತೆಯ ಹೊಸ ಜಿಲ್ಲಾ ನ್ಯಾಯಾಲಯ ಸಂಕೀರ್ಣದಲ್ಲಿ ರಾಷ್ಟ್ರೀಯ ಲೋಕ್ ಅದಾಲತ್ ನಡೆಸಲಾಗುವುದು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ.ಶಾಂತಿ ಅವರು ತಿಳಿಸಿದ್ದಾರೆ.

# ಪಾರ್ಲಿಮೆಂಟ್ ಸ್ಪರ್ಧೆಗೆ ಫ್ರಾನ್ಸಿಸ್ ಕಾಲೇಜು ಆಯ್ಕೆ



ಬೆಂಗಳೂರು,ಏ.1–ಕೋರಮಂಗಲದ ಸಂತ ಫ್ರಾನ್ಸಿಸ್ ಕಾಲೇಜಿನ ಮೂರು ವಿದ್ಯಾರ್ಥಿನಿಯರು ಒರಿಸ್ಸಾದ ಸೀತಾಪುರದಲ್ಲಿನ ಸೆಂಚುರಿಯನ್ ವಿಶ್ವವಿದ್ಯಾಲಯದಲ್ಲಿ ಏಪ್ರಿಲ್ 1 ರಿಂದ 5ರವರೆಗೆ ನಡೆಯಲಿರುವ ಮೂರನೇ ಎ.ಐ.ಯು. ರಾಷ್ಟ್ರ ಮಟ್ಟದ ಮಹಿಳಾ ವಿದ್ಯಾರ್ಥಿ ಪಾರ್ಲಿಮೆಂಟ್ ಸ್ಪರ್ಧೆಗೆ ಬೆಂಗಳೂರು ನಗರ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಲು ಆಯ್ಕೆಯಾಗಿ ಕಾಲೇಜಿಗೆ ಕೀರ್ತಿಯನ್ನು ತಂದಿದ್ದಾರೆ.

ಅಲಿ ಬಿಲ್ಕಿಷ್, ಹರ್ಷಿತಾ ಆರ್ ಮತ್ತು ಇಶಿಕಾ ಜೈನ್ ಬೆಂಗಳೂರು ನಗರ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸುತ್ತಿರುವ ವಿದ್ಯಾರ್ಥಿಗಳಾಗಿದ್ದು, ಡಾ. ಹರೀಶ್ ರವರು ಈ ತಂಡಕ್ಕೆ ತರಬೇತಿಯನ್ನು ನೀಡಿರುತ್ತಾರೆ.

ತಂಡವು ಇಂದು ಬೆಂಗಳೂರಿನಿಂದ ಪ್ರಯಾಣ ಬೆಳೆಸುತ್ತಿದ್ದು, ಕಾಲೇಜಿನ ನಿರ್ದೇಶಕರಾದ ಬ್ರದರ್ ಪೀಟರ್, ಉಪನಿರ್ದೇಶಕರಾದ ಬ್ರದರ್ ಡಾ. ಟೈಟಸ್, ಪ್ರಾಂಶುಪಾಲರಾದ ಡಾ. ಆರ್. ಎನ್. ಸುಬ್ಬರಾವ್, ಉಪಪ್ರಾಂಶುಪಾಲರಾದ ಡಾ. ಕಾರ್ತಿಕ್ ಪಿ ಹಾಗೂ ಎಲ್ಲಾ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂಧಿ ವರ್ಗದವರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

# ಬಡ ಮಕ್ಕಳ ಬಾಳು ಬೆಳಗಿದ್ದ ಶಿವಕುಮಾರ ಸ್ವಾಮೀಜಿ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಏ. 01 : ತುಮಕೂರಿನ ಸಿದ್ದಗಂಗಾ ಮಠದ ಡಾ. ಶಿವಕುಮಾರ ಸ್ವಾಮೀಜಿ ಅಸಂಖ್ಯಾತ ಬಡ ವಿದ್ಯಾರ್ಥಿಗಳ ಬಾಳು ಬೆಳಗಿದ್ದರು ಎಂದು ಬೀದರ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಹೇಳಿದರು. ಸಿದ್ದಗಂಗಾ ಮಠದ ಹಳೆಯ ವಿದ್ಯಾರ್ಥಿಗಳ ಹಾಗೂ ಹಿತೈಷಿಗಳ ಸಂಘದ ಜಿಲ್ಲಾ ಘಟಕದ ವತಿಯಿಂದ ನಗರದ ಜಿಲ್ಲಾ ಕನ್ನಡ ಭವನದಲ್ಲಿ ಮಂಗಳವಾರ ಆಯೋಜಿಸಿದ್ದ ತುಮಕೂರಿನ ಡಾ. ಶಿವಕುಮಾರ ಸ್ವಾಮೀಜಿ ಅವರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಶಿಕ್ಷಣದಿಂದಲೇ ಮಕ್ಕಳ ಭವಿಷ್ಯ ಉಜ್ವಲಗೊಳಿಸಲು ಹಾಗೂ ಸಶಕ್ತ ರಾಷ್ಟ್ರ ಕಟ್ಟಲು ಸಾಧ್ಯವೆಂದು ಮನಗಂಡಿದ್ದರು. ಬಡ ಮಕ್ಕಳಿಗೆ ತಮ್ಮ ಶಾಲಾ, ಕಾಲೇಜುಗಳಲ್ಲಿ ಊಟ, ವಸತಿ ಸಹಿತ ಉಚಿತ ಶಿಕ್ಷಣ ನೀಡಿದ್ದರು ಎಂದು ಬಣ್ಣಿಸಿದರು.

ಸಿದ್ದಗಂಗಾ ಮಠದಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳು ದೇಶ, ವಿದೇಶದಲ್ಲಿ ಉನ್ನತ ಹುದ್ದೆಗಳಲ್ಲಿದ್ದಾರೆ. ಇಂದು ಅನೇಕ ಶಿಕ್ಷಣ ಸಂಸ್ಥೆಗಳು ಶಿಷ್ಯವೇತನದ ಮೂಲಕ ಬಡ ವಿದ್ಯಾರ್ಥಿಗಳಿಗೆ ನೆರವಾಗಲು ಸಿದ್ಧಗಂಗಾ ಮಠವೇ ಪ್ರೇರಣೆ–ಯಾಗಿದೆ ಎಂದು ತಿಳಿಸಿದರು.

ಸಿದ್ಧಗಂಗಾ ಮಠ ಶತ ಶತಮಾನಗಳಿಂದ ಸಮಾಜೋಧಾರ್ಮಿಕಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ. ಎಲ್ಲ ಮಠಗಳಿಗೆ ಮಾದರಿಯಾಗಿದೆ ಎಂದು ಹೇಳಿದರು. ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಸುರೇಶ ಚನಶೆಟ್ಟಿ ಮಾತನಾಡಿ, ಡಾ. ಶಿವಕುಮಾರ ಸ್ವಾಮೀಜಿ ಅವರ ಸಮಾಜ ಸೇವೆಗೆ ಸಾಟಿಯೇ ಇಲ್ಲ. ಅದನ್ನು ಶಬ್ದಗಳಲ್ಲಿ ವರ್ಣಿಸಲು ಆಗುವುದಿಲ್ಲ ಎಂದು ನುಡಿದರು. ಕೇಂದ್ರ ಸರ್ಕಾರ ಡಾ. ಶಿವಕುಮಾರ ಸ್ವಾಮೀಜಿ ಅವರಿಗೆ ಭಾರತ ರತ್ನ ಪ್ರಶಸ್ತಿ ನೀಡಬೇಕು. ಅವರಿಗೆ ಪ್ರಶಸ್ತಿ ನೀಡುವುದರಿಂದ ಭಾರತ ರತ್ನದ ಘನತೆ ಹೆಚ್ಚಾಗಲಿದೆ ಎಂದು ಹೇಳಿದರು. ಸರ್ಕಾರಿ ಎನ್.ಜಿ.ಒ. ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷರಾಗಿ ಪುನರಾಯ್ಕೆಯಾದ ಬಾಲಾಜಿ ಬಿರಾದಾರ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಬೀದರ್ ತಾಲ್ಲೂಕು ಘಟಕದ ನೂತನ ಅಧ್ಯಕ್ಷ ಟಿ.ಎಂ. ಮಚ್ಚೆ ಅವರನ್ನು ಸನ್ಮಾನಿಸಲಾಯಿತು.

ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಶಿವಕುಮಾರ ಪಾಟೀಲ ತೇಗಂಪುರ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಪಶು ವೈದ್ಯಕೀಯ ವಿಶ್ವವಿದ್ಯಾಲಯದ ವ್ಯವಸ್ಥಾಪಕ ಮಂಡಳಿ ಸದಸ್ಯ ಬಸವರಾಜ ಭತಮುರ್ಗೆ, ನಿವೃತ್ತ ಮುಖ್ಯಶಿಕ್ಷಕ ಸಿದ್ದಾರೆಡ್ಡಿ ನಾಗೋರಾ, ಮುಖಂಡ ನಾಗರಾಜ ಕರ್ಪೂರ, ಪಿಡಿಒ ಚಂದ್ರಕಾಂತ ಫುಲೆ, ಸಂಘದ ಜಿಲ್ಲಾ ಘಟಕದ ಉಪಾಧ್ಯಕ್ಷ ರಮೇಶ ಪಾಟೀಲ ಪಾಶಾಪುರ ಮತ್ತಿತರರು ಇದ್ದರು.

ಸಂಘದ ಜಿಲ್ಲಾ ಘಟಕದ ಪ್ರಧಾನಕಾರ್ಯದರ್ಶಿ ದೇವೇಂದ್ರ ಕರಂಜೆ ನಿರೂಪಿಸಿದರು. ನಾಗಭೂಷಣ ಹುಗ್ಗೆ ಸ್ವಾಗತಿಸಿದರು. ಬಾದಾಮಿಯ ಶಿಕ್ಷಕ ಸಂಜುಕುಮಾರ ಜಮಾದಾರ್ ವಂದಿಸಿದರು.

# ಬಾವಗಿ ಗ್ರಾಮದ ಭದ್ರೇಶ್ವರ ಜಾತ್ರಾ ಮಹೋತ್ಸವ ಭಿತ್ತಿ ಪತ್ರ ಬಿಡುಗಡೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಏ. 01 : ಬೀದರ್ ತಾಲ್ಲೂಕಿನ ಸುಕ್ಷೇತ್ರ ಬಾವಗಿ ಗ್ರಾಮದ ಆರಾಧ್ಯದೈವ ಪವಾಡ ಪುರುಷ ಶೀ ಗುರು ಭದ್ರೇಶ್ವರನ ಜಾತ್ರಾ ಮಹೋತ್ಸವದ ಪ್ರಯುಕ್ತ ರವಿವಾರ ಭಿತ್ತಿ ಪತ್ರ ಬಿಡುಗಡೆ ಮಾಡಲಾಯಿತು .

ಗುರು ಭದ್ರೇಶ್ವರ ಸಂಸ್ಥಾನದ ವೇದಮೂರ್ತಿ ಶಾಂತಕುಮಾರ ಸ್ವಾಮಿ ಯವರು ಮಾತನಾಡಿ ದಿನಾಂಕ 3/4/2025 ರಂದು 11ದಿನಗಳ ಕಾಲ ಗುರು ಭದ್ರೇಶ್ವರ ಚರಿತ್ರೆ ಪುರಾಣ ಕಾರ್ಯಕ್ರಮವು ನಡೆಯಲಿದೆ.

ಎಪ್ರೀಲ್ 13,14,15,ರಂದು ಜಾತ್ರಾ ಮಹೋತ್ಸವದ ನಡೆಯಲಿದ್ದು ಜಾತ್ರಾ ಮಹೋತ್ಸವದ ಕಾರ್ಯಕ್ರಮ ಈ ಕೆಳಗಿನಂತಿದೆ.

ದಿನಾಂಕ 13ರಂದು ಜಾತ್ರಾ ಮಹೋತ್ಸವ ಉದ್ಘಾಟನೆ ಯಾಗಲಿದ್ದು 14 ರಂದು ಪಲ್ಲಕ್ಕಿ ಹಾಗೂ ನಾಡಿನ ಖ್ಯಾತ ಸಂಗೀತ ಕಲಾವಿದರಿಂದ ಸಂಗೀತ ರಸಮಂಜರಿ, ಜರುಗಲಿದೆ 15 ರಂದು ಗುರು ಭದ್ರೇಶ್ವರ ಮಹಾ ರಥೋತ್ಸವ ಜರುಗಲಿದೆ. ಅದಕ್ಕಾಗಿ ಸಕಲ ಭಕ್ತಾದಿಗಳು ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿ ಯಶಸ್ವಿಯಾಗಿಸಬೇಕೆಂದು ನುಡಿದರು. ಈ ಸಂದರ್ಭದಲ್ಲಿ ಭದ್ರೇಶ್ವರ ಸಂಸ್ಥಾನದ ವೇದಮೂರ್ತಿ ಭದ್ರಯ್ಯಸ್ವಾಮಿ, ಮುಖಂಡರಾದ ಚನ್ನಮಲ್ಲಪ್ಪ ಹಜ್ಜರಗಿ, ರೇವಣಪ್ಪ ಭದ್ರಣ್ಣ, ನಾಗಶೆಟ್ಟಿ ಅಳ್ಳಿ, ಕಾಶಪ್ಪಾ ಪಕ್ಕಾ, ಲೋಕೇಶ ಕನಶೆಟ್ಟಿ, ಶಿವಕುಮಾರ ರೇಶಟ್ಟಿ, ರಾಜಕುಮಾರ ಪಾಟೀಲ, ಬಸವರಾಜ ಖೌದಿ, ಪ್ರಭು ಹಜ್ಜರಗಿ, ಮಾರುತಿ ಹೂಗಾರ, ಶರಣಪ್ಪಾ ಮುದ್ದ ಸುನೀಲ ಚಿದ್ರಿ ನಾಗೇಶ್ ಕೊಳಾರ, ಭದ್ರಪ್ಪ ಖೌದಿ, ಶಿವಕುಮಾರ ಸಂಗಶೆಟಿ, ಫಾಳೆಪ್ಪಾ ಬೊಮ್ಮಣಿ ಅವಿನಾಶ ಭಾಲ್ಕೆ, ಉಪಸ್ಥಿತರಿದ್ದರು.

# ಲಿಂಗಾಯತ ಸನಾತನ ಧರ್ಮದ ಭಾಗವಲ್ಲ



ಬೀದರ. ಏ. 01 : ಲಿಂಗಾಯತ ಧರ್ಮ ಸನಾತನ ಧರ್ಮದ ಭಾಗವಲ್ಲ ಎಂದು ಜಾಗತಿಕ ಲಿಂಗಾಯತ ಮಹಾಸಭಾದ ಕೇಂದ್ರ ಸಮಿತಿಯ ಉಪಾಧ್ಯಕ್ಷ ಬಸವರಾಜ ಧನ್ನೂರ ಹೇಳಿದರು. ತಾಲ್ಲೂಕಿನ ಕೊಳಾರ(ಕೆ) ಗ್ರಾಮದಲ್ಲಿ ರಾಷ್ಟ್ರೀಯ ಬಸವ ದಳದ ಗ್ರಾಮ ಘಟಕದ ವತಿಯಿಂದ ಈಚೆಗೆ ಆಯೋಜಿಸಿದ್ದ ಅಲ್ಲಮಪ್ರಭು ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸನಾತನ ಧರ್ಮದಲ್ಲಿ ಇರುವ ಅಸಮಾನತೆ, ಮೌಢ್ಯತೆ, ಕಂದಾಚಾರಗಳನ್ನು ಅಲ್ಲಗಳೆದು ಬಸವಣ್ಣನವರು ವೈಚಾರಿಕವಾದ ಹೊಸ ಲಿಂಗಾಯತ ಧರ್ಮ ಕಟ್ಟಿದರು. ಲಿಂಗಾಯತ ವಿನೂತನ, ನಿತ್ಯ ನೂತನ ಧರ್ಮವಾಗಿದೆ ಎಂದು ತಿಳಿಸಿದರು. ಲಿಂಗಾಯತಕ್ಕೆ ಸನಾತನ ಧರ್ಮದೊಂದಿಗೆ ಜೋಡಿಸುವ ಪ್ರಯತ್ನಗಳು ನಡೆದಿವೆ. ಲಿಂಗಾಯತರು ಎಚ್ಚರ ವಹಿಸಬೇಕು ಎಂದು ಹೇಳಿದರು. ಬಸವಣ್ಣನವರು ಲಿಂಗಾಯತ ಧರ್ಮ ಕೊಟ್ಟರೂ ಸ್ವತಃ ಎಲ್ಲೂ ಧರ್ಮ ಗುರುವೆಂದು ಹೇಳಿಕೊಂಡಿಲ್ಲ. ನಾನೊಬ್ಬ ಭಕ್ತ ಎಂದೇ ಹೇಳಿ ಔದರ್ಯ ಮೆರೆದಿದ್ದಾರೆ ಎಂದು ತಿಳಿಸಿದರು. ವಿಶ್ವದ ಮೊಟ್ಟ ಮೊದಲ ಸಂಸತ್ತಾದ 12ನೇ ಶತಮಾನದ ಬಸವಕಲ್ಯಾಣದ ಅನುಭವ ಮಂಟಪದ ಪ್ರಥಮ ಪೀಠಾಧ್ಯಕ್ಷ ಅಲ್ಲಮಪ್ರಭುದೇವರು ತಮ್ಮ ವಚನದಲ್ಲಿ ಮಹಾ ಮಹಿಮ ಸಂಗನಬಸವಣ್ಣ ಎನಗೆಯೂ ಗುರು, ನಿನಗೆಯೂ ಗುರು, ಜಗವೆಲ್ಲಕ್ಕೆಯೂ ಗುರು ಎಂದು ಹೇಳಿದ್ದಾರೆ. ಬಸವಣ್ಣನವರನ್ನು ಗುರುವೆಂದು ಒಪ್ಪದವರು ಅಲ್ಲಮಪ್ರಭುದೇವರ ವಚನ ಓದಬೇಕು. ಆ ಮೂಲಕ ಧರ್ಮ ಗುರುವಿನ ಕುರಿತ ತಮ್ಮ ಗೊಂದಲ ನಿವಾರಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಬಸವ ಭಕ್ತರೆಲ್ಲರೂ ಸೇರಿ ಗ್ರಾಮದಲ್ಲಿ ಮಾದರಿ ಬಸವ ಮಂಟಪ ನಿರ್ಮಿಸಿರುವುದು ಶ್ಲಾಘನೀಯ ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಘಟಕದ ಮಾಜಿ ಅಧ್ಯಕ್ಷ ರಾಜೇಂದ್ರಕುಮಾರ ಗಂದಗೆ ತಿಳಿಸಿದರು. ಜಗದ್ಗುರು ಮಾತೆ ಮಹಾದೇವಿ ಅವರು ರಚಿಸಿದ ಸಾಮೂಹಿಕ ಪ್ರಾರ್ಥನೆ ಪುಸ್ತಕ ಬಿಡುಗಡೆ ಮಾಡಲಾಯಿತು. ರಾಜ್ಯ ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಮಾರುತಿ ಚಾಂಬೋಳ ಅವರನ್ನು ಸನ್ಮಾನಿಸಲಾಯಿತು. ನಿಕಿತಾ ಪಾಪಡೆ ಹಾಗೂ ಸಿಂಚನಾ ಬಿರಾದಾರ ಪ್ರಾರ್ಥನೆ ನಡೆಸಿಕೊಟ್ಟರು. ಭಕ್ತಿಶ್ರೀ ತುಪ್ಪದ ವಚನ ಗಾಯನ ಮಾಡಿದರು.

ಪಾರಮ್ಮ ಮಾರುತೆಪ್ಪ ಪಾಪಡೆ ಗುರು ಪೂಜೆಗೈದರು. ರಾಷ್ಟ್ರೀಯ ಬಸವ ದಳದ ಜಿಲ್ಲಾ ಘಟಕದ ಅಧ್ಯಕ್ಷ ಸೋಮಶೇಖರ ಪಾಟೀಲ ಗಾದಗಿ ಷ???ಸ್ಥಲ ಧ್ವಜಾರೋಹಣ ಮಾಡಿದರು. ಗ್ರಾಮ ಘಟಕದ ಅಧ್ಯಕ್ಷ ಅಶೋಕ ಶಂಭು ಅಧ್ಯಕ್ಷತೆ ವಹಿಸಿದ್ದರು.

ಲಿಂಗಾಯತ ಸಮಾಜದ ಜಿಲ್ಲಾ ಅಧ್ಯಕ್ಷ ಕುಶಾಲರಾವ್ ಪಾಟೀಲ ಗಾದಗಿ, ಗ್ರಾಮ ಪಂಚಾಯಿತಿ ಅಧ್ಯಕ್ಷ ಪ್ರಶಾಂತ ಶರಗಾರ್, ರಾಷ್ಟ್ರೀಯ ಬಸವ ದಳದ ಬೀದರ್ ನಗರ ಘಟಕದ ಅಧ್ಯಕ್ಷ ವಿವೇಕಾನಂದ ಧನ್ನೂರ, ಬೀದರ್ ತಾಲ್ಲೂಕು ಘಟಕದ ಅಧ್ಯಕ್ಷ ಸಂಜುಕುಮಾರ ಪಾಟೀಲ, ಜಿಲ್ಲಾ ಯುವ ಘಟಕದ ಅಧ್ಯಕ್ಷ ಗಣೇಶ ಬಿರಾದಾರ, ಪಿಕೆಪಿಎಸ್ ಅಧ್ಯಕ್ಷ ಶಿವಾನಂದ ಕುಂಬಾರ, ಪ್ರಮುಖರಾದ ಮಲ್ಲಿಕಾರ್ಜುನ ಶಂಭು, ಬಸವರಾಜ ಖ್ಯಾಮಾ ಉಪಸ್ಥಿತರಿದ್ದರು.

ರವಿ ಪಾಪಡೆ ಸ್ವಾಗತಿಸಿದರು. ಸಿದ್ರಾಮ ಶೆಟಕಾರ್ ನಿರೂಪಿಸಿದರು. ರವಿ ಶಂಭು ವಂದಿಸಿದರು.

# ಆಯುರ್ವೇದ ಅಧ್ಯಯನ ಮಂಡಳಿಗೆ ಮಠಪತಿ ನೇಮಕ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಏ. 01: ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸ್ನಾತಕ ಆಯುರ್ವೇದ ಅಧ್ಯಯನ ಮಂಡಳಿ ಸದಸ್ಯರಾಗಿ ನಗರದ ಡಾ. ಶಿವಶರಣಯ್ಯ ಮಠಪತಿ ಅವರನ್ನು ನೇಮಕ ಮಾಡಲಾಗಿದೆ. ವಿಶ್ವವಿದ್ಯಾಲಯದ ಕುಲಸಚಿವ ಪಲ್ಲಕ್ಕಿ ರಾಮಣ್ಣ ಶಿವಪ್ರಸಾದ್ ಈ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ. ಇವರ ಅಧಿಕಾರ ಅವಧಿ 2027 ರ ಜೂನ್ 15 ರ ವರೆಗೆ ಇರಲಿದೆ. ಮಠಪತಿ ಅವರು ಬಸವಕಲ್ಯಾಣದ ನೀಲಗಂಗಾ ಆಯುರ್ವೇದಿಕ್ ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಕೇಂದ್ರದ ಶರೀರ ರಚನೆ ವಿಭಾಗದ ಮುಖ್ಯಸ್ಥರಾಗಿದ್ದಾರೆ. ವೈದ್ಯ ವಿಜ್ಞಾನಕ್ಕೆ ಸಂಬಂಧಿಸಿದ ಕೃತಿ ರಚಿಸಿದ್ದಾರೆ. ರಾಜ್ಯಮಟ್ಟದ ವಿಚಾರ ಸಂಕಿರಣಗಳಲ್ಲಿ ಪ್ರಬಂಧ ಮಂಡಿಸಿದ್ದಾರೆ.



ಮಠಪತಿ ಅವರ ನೇಮಕಕ್ಕೆ ಹಾರಕೂಡದ ಡಾ. ಚನ್ನವೀರ ಶಿವಾಚಾರ್ಯರು, ನೀಲಗಂಗಾ ಆಯುರ್ವೇದಿಕ್ ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಕೇಂದ್ರದ ಆಡಳಿತ ಮಂಡಳಿ ಪದಾಧಿಕಾರಿಗಳು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಸಂತಸ ವ್ಯಕ್ತಪಡಿಸಿದ್ದಾರೆ.

# ಕನ್ನಡಿಗರ ಹಕ್ಕು ಕಬಳಿಸಿದ ಶಾಸಕ ಪ್ರಭು ಚವ್ಹಾಣರ ಶಾಸಕತ್ವ ರದ್ದುಗೊಳಿಸಿ: ಸೋಮನಾಥ ಮುಧೋಳ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಏ. 01 : 2008ರಿಂದ ಇಲ್ಲಿಯ ವರೆಗೆ ಔರಾದ್(ಬಿ) ಮೀಸಲು ಶಾಸಕನಾಗಿ ನಕಲಿ ಜಾತಿ ಪ್ರಮಾಣ ಪತ್ರ ತಯಾರಿಸಿ ಕನ್ನಡಿಗರ ಎಲ್ಲ ಹಕ್ಕುಗಳನ್ನು ಕಬಳಿಸಿದ ಪ್ರಭು ಚವ್ಹಾಣರ ವಿರುದ್ಧ ಸರ್ಕಾರ ಸೂಕ್ತಕ್ರಮ ಕೈಗೊಂಡು ಇದುವರೆಗೆ ಪಡೆದ ಎಲ್ಲಾ ಸರ್ಕಾರಿ ಸೌಲಭ್ಯಗಳನ್ನು ಅವರಿಂದ ವಸೂಲಿ ಮಾಡುವಂತೆ ಕನ್ನಡಪರ ಸಂಘಟನೆಗಳ ಒಕ್ಕೂಟದ ಪ್ರಮುಖರಾದ ಸೋಮನಾಥ ಮುಧೋಳಕರ್ ಒತ್ತಾಯಿಸಿದರು. ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು ಮೂಲತಃ ಪ್ರಭು ಚವ್ಹಾಣ ಅವರು ಮಹಾರಾಷ್ಟ್ರ ರಾಜ್ಯದವರಾಗಿದ್ದು, ತನ್ನ ಪ್ರಭಾವ ಬಳಸಿ ಇಲ್ಲಿಯ ತಹಸಿಲ್ದಾರರ ಮೂಲಕ ತನ್ನ ಹಾಗೂ ತನ್ನ ಕುಟುಂಬಸ್ಥರ ಪರಿಶಿಷ್ಟ ಜಾತಿ ಪ್ರಮಾಣ ಪತ್ರ ಪಡೆದುಕೊಂಡು ಕನ್ನಡಿಗರಿಗೆ ಮೋಸ ಮಾಡಿದ್ದಾರೆ. ಈ ಕುರಿತು ಹಲವಾರು ಮೇಲ್ಮನವಿ ಪ್ರಾಧಿಕಾರ ಹಾಗೂ



ನ್ಯಾಯಾಲಯದಲ್ಲಿ ಅಕ್ಷೇಪಣೆ ಸಲ್ಲಿಸಿದರೂ ಅಲ್ಲಿಯೂ ಸಹ ತನ್ನ ಪ್ರಭಾವ ಬಳಸಿಕೊಂಡು ಅರ್ಜಿ ವಾಪಸ್ ಪಡೆಯುವಂತೆ ಮಾಡಿದ್ದಾರೆ.

2023ರಲ್ಲಿ ರಾಜ್ಯದಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಔರಾದ ಮೀಸಲು ವಿಧಾನಸಭಾ ಕ್ಷೇತ್ರದಿಂದ ಕಮಲನಗರ ತಾಲೂಕಿನ ಹಾಲಳ್ಳಿ ಗ್ರಾಮದ ನಿವಾಸಿ ನರಸಿಂಗ ತಂದೆ ತುಕಾರಾಮ ಅವರು ಚುನಾವಣೆಯಲ್ಲಿ ಸ್ಪದ–ರ್ಿ ಮಾಡುತ್ತಾರೆ. ನಾಮಪತ್ರ ಪರಿಶೀಲನೆ ದಿನದಂದು ಸೂಕ್ತ ದಾಖಲೆಗಳೊಂದಿಗೆ ನ್ಯಾಯವಾದಿಗಳ ಜೊತೆಯಲ್ಲಿ ಪ್ರಭು ಚವ್ಹಾಣ ಅವರ ನಾಮಪತ್ರಕ್ಕೆ ಆಕ್ಷೇಪಣೆ ಸಲ್ಲಿಸಿರುತ್ತಾರೆ. ಚುನಾವಣಾಧಿಕಾರಿಗಳು ಆಕ್ಷೇಪಣೆ ಬಗ್ಗೆ ಯಾವುದೇ ಸೂಕ್ತಕ್ರಮ ಕೈಗೊಂಡಿರುವುದಿಲ್ಲ. ಇದರಿಂದ ನರಸಿಂಗ ತಂದೆ ಸುಕಾರಾಮ ಅವರು ಮೇಲ್ಮನವಿ ಪ್ರಾಧಿಕಾರಕ್ಕೆ 4ಡಿ ಅಡಿಯಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ.

ಆಯುಕ್ತರು ಹಾಗೂ ಮೇಲ್ಮನವಿ ಪ್ರಾಧಿಕಾರವು ದಿನಾಂಕ: 22–11–2023 ರಂದು ಪ್ರಭು ಚವ್ಹಾಣ ಅವರಿಗೆ ವಿಚಾರಣೆ ಸಭೆಯ ಸೂಚನಾ ಪತ್ರ ನೀಡಿ ದಿನಾಂಕ: 16–12–2023 ರಂದು ಅಗತ್ಯ ದಾಖಲೆ ಮತ್ತು ವಸ್ತಾವೇಜುಗಳೊಂದಿಗೆ ಸದರಿ ದಿನಾಂಕದಂದು ಖುದಾಗಿ ಅಥವಾ ನ್ಯಾಯವಾದಿಗಳ ಮುಖಾಂತರ ಹಾಜರಾಗುವಂತೆ ಸೂಚಿಸಿತ್ತು. ಆದರೆ ಪ್ರಭು ಚವ್ಹಾಣ ಅವರು ಇದನ್ನು ಪ್ರಶ್ನಿಸಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿ ಸಂಖ್ಯೆ ಡಬ್ಲೂಪಿ ಸಂ. 203394/2023 ಇರುತ್ತದೆ.

ಸುಮಾರು ಎರಡು ವರ್ಷಗಳ ಕಾಲ ವಾದಿ ಪ್ರತಿವಾದಿಗಳ ವಾದವನ್ನು ಆಲಿಸಿ ದಿನಾಂಕ: 17–03–2025 ರಂದು ಕಲಬುರಗಿ ಹೈಕೋರ್ಟ್ ಪೀಠದ ನ್ಯಾಯಾಧೀಶರಾದ ಸೂರಜ್ ಗೋವಿಂದರಾಜ್ ಅವರು 220 ಪುಟಗಳ ಮಹತ್ವದ ತೀರ್ಪು ನೀಡಿದ್ದಾರೆ.

ಸುಮಾರು 2008 ರಿಂದ ಇಲ್ಲಿಯವರೆಗೆ ಎಷ್ಟು ಜನರು ನ್ಯಾಯಾಲಯಕ್ಕೆ ಹಾಗೂ ಮೇಲ್ಮನವಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದ್ದಾರೋ ಅವರೆಲ್ಲರ ಅರ್ಜಿಗಳನ್ನು ಪ್ರಭು ಚವ್ಹಾಣ ಅವರು ತಮ್ಮ ಪ್ರಭಾವ ಬಳಸಿ ಹಿಂಪಡೆಯುವಂತೆ ಮಾಡಿದ್ದಾರೆ. ಈ ಮೂಲಕ ಕಾಲಹರಣ ಮಾಡುತ್ತ ಕನ್ನಡಿಗರಿಗೆ ಅನ್ಯಾಯ ಮಾಡುತ್ತಲೇ ಬಂದಿದ್ದಾರೆ. ಹೀಗಾಗಿ 4ಡಿ ಅಡಿಯಲ್ಲಿ ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು 30 ದಿನಗಳ ಒಳಗಾಗಿ ಜಾತಿ ಪ್ರಮಾಣ ಪತ್ರ ರದ್ದುಗೊಳಿಸಿ ಪ್ರಭು ಚವ್ಹಾಣ ಅವರನ್ನು ಶಾಸಕ ಸ್ಥಾನದಿಂದ ವಜಾಗೊಳಿಸಿ ಕನ್ನಡಿಗರಿಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರುವುದಾಗಿ ತಿಳಿಸಿದ ಅವರು ಒಂದು ವೇಳೆ ಪ್ರಭು ಚವ್ಹಾಣ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಬೀದರ ಜಿಲ್ಲೆ ಬಂದ್‌ಗೆ ಕರೆ ನೀಡಲಾಗುವುದು ಎಂದು ಈ ವೇಳೆ ಎಚ್ಚರಿಸಿದರು.

ಕನ್ನಡ ಪರ ಸಂಘಟನೆಗಳ ಇತರೆ ಪ್ರಮುಖರಾದ ರವಿಸ್ವಾಮಿ ನಿರ್ಣಾ, ಸುಭಾಷ ಕೆನಾಡೆ, ನಿತೀಶ ಉಪ್ಪೆ, ಸೋಮನಾಥ ವರವಟ್ಟಿ (ಕೆ), ರಮೇಶ ಧೂಳಾ, ಚರಣಜೀತ ಆಣದೂರೆ, ವಿವೇಕ ಸ್ವಾಮಿ, ಶಾಮ್ ಮದನ, ಧನರಾಜ ಸಾಂಗವಿಕರ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ಸಮತಾ ಸೈನಿಕದಳ ಸಂಘದ ಶತಮಾನೋತ್ಸವ ಪೂರ್ವಭಾವಿ ಸಭೆ

ಮಲ್ಲಮ್ಮ ನುಡಿ ವಾರ್ತೆ

ಶಹಾಪೂರ:ಏ.1: ಶನಿವಾರ ಆರ್ ವಾಯಿ ದಿಗ್ಗಿ ಕಾಲೇಜನ ಡಾ. ಬಿ ಆರ್ ಅಂಬೇಡ್ಕರ್ ಅವರ ಸ್ಥಾಪಿತವಾದ, ಸಮತಾ ಸೈನಿಕದಳ ಸಂಘ 2025 ಕ್ಕೆ 100 ವರ್ಷ ಪೂರೈಸಿದ್ದು ಇದರ ಅಂಗವಾಗಿ ಶತಮಾನೋತ್ಸವ ಕಾರ್ಯಕ್ರಮ ಸಭೆ ಕರೆಯಲಾಗಿದ್ದು. ಅಧ್ಯಕ್ಷತೆ ರಾಜ್ಯ ಕಾರ್ಯಾಧ್ಯಕ್ಷ ಮಹಾದೇವ್ ದಿಗ್ಗಿ ವಹಿಸುವರು. ಅಂಬೇಡ್ಕರ್ ಅವರ ಹೋರಾಟದ ಬಗ್ಗೆ ಮರು



ನೆನಪಿಸಿ ಇವತ್ತಿನ ಹೋರಾಟದ ಬಗ್ಗೆ ಬೇಸರ ವ್ಯಕ್ತಪಡಿಸಿದರು. ಮತ್ತು ಶತಮಾನೋತ್ಸವದ ಬಗ್ಗೆ ತಾಲೂಕಿನ ಸ್ಥಳಿಯ ಜನತೆಯನ್ನು ಭಾಗವಹಿಸುವಂತೆ ಸಮಾಜದ ಮುಖಂಡರಿಗೆ ಹಾಗೂ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಮಾಡಬೇಕೆಂದು ತಿಳಿಸಿದರು. ಈ ಸಭೆಯಲ್ಲಿ ಜಿಲ್ಲಾ ಅಧ್ಯಕ್ಷ ಅಂಬ್ರೇಶ್ ದಿಗ್ಗಿ .ಸುರುಪರ ತಾಲೂಕ ಅಧ್ಯಕ್ಷ ಪರಶುರಾಮ್ ಗಡ್ಡದ, ಶಹಾಪೂರ ತಾಲೂಕ ಅಧ್ಯಕ್ಷ ಡಾ. ಮರೆಪ್ಪ ಪರಮೇಶ್ವರ, ಮಹೇಂದ್ರಕುಮಾರ ದಿಗ್ಗಿ ಅವರು ಈ ಕಾರ್ಯಕ್ರಮ ತುಂಬ ವಿಜೃಂಭಣೆಯಿಂದ ಹಾಗೂ ವ್ಯವಸ್ಥಿತವಾಗಿ ಬೇರೆ ಬೇರೆ ಜಿಲ್ಲೆಗಳಿಂದ ವಿದ್ವಾಂಸರು ಆಗಮಿಸಲಿದ್ದಾರೆ ಅಂಬೇಡ್ಕರ್ ಅವರ ವಿಚಾರಗಳು ಜನರಿಗೆ ತಲುಪುವಂತೆ ಮಾಡಬೇಕು. ಇದು ಒಂದು ಮುಂದಿನ ಜನಾಂಗಕ್ಕೆ ಹೊಸ ದಾರಿ ದೀಪವಾಗಬೇಕು ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು ,ಮಾಸ್ತಿ ಸರ್ ಇತರರು ಉಪಸ್ಥಿತರಿದ್ದರು ಮಾಸ್ತಿ ಆರ್ ನಿರೂಪಿಸಿದರು ಮರೆಪ್ಪ ಎಮ್ ವಂದಿಸಿದರು.

# ಬಾಲಯೇಸು ಪುಣ್ಯಕ್ಷೇತ್ರದಲ್ಲಿ ಮಹಿಳಾ ದಿನಾಚರಣೆ

ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಏ.1: ಇಂದಿನ ಆಧುನಿಕತೆಯಲ್ಲಿ ಮಹಿಳೆಯರು ಅನೇಕ ಕ್ಷೇತ್ರದಲ್ಲಿ ತಮ್ಮ ಸಾಧನೆಯನ್ನು ತೋರುತ್ತಿರುವುದು ಹೆಮ್ಮೆಯ ಸಂಗತಿ ಎಂದು ಸುಕನ್ಯಾ ರೇಷ್ಮೆ ಹೇಳಿದರು. ಪಟ್ಟಣದ ಬಾಲಯೇಸು ಪುಣ್ಯ ಕ್ಷೇತ್ರದಲ್ಲಿ ಆರ್ಬಿಟ್ ಸಂಸ್ಥೆ ಮತ್ತು ತಾಲೂಕು ಜನಜಾಗೃತಿ ಒಕ್ಕೂಟದ ವತಿಯಿಂದ ಈಚೆಗೆ ಆಯೋಜಿಸಿದ್ದ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪುರುಷರಿಗಿಂತ ಮಹಿಳೆಯರು ಯಾವ ಕ್ಷೇತ್ರದಲ್ಲೂ ಹಿಂದೆ ಇಲ್ಲ, ಆದರೆ ಮಹಿಳೆಯರು ಸಾಗಬೇಕಾಗಿರುವ ಹಾದಿ ಇನ್ನು ಸಾಕಷ್ಟು ಇದೆ, ಹೆಣ್ಣು



ತಾಯಿಯಾಗಿ, ಪತ್ನಿಯಾಗಿ, ಮಗಳಾಗಿ, ಸಹೋದರಿಯಾಗಿ ಕುಟುಂಬದ ಕಣ್ಣಾಗಿ ತನ್ನ ಜವಾಬ್ದಾರಿಯನ್ನು ನಿಭಾಯಿಸುತ್ತಿದ್ದಾಳೆ. ಮಹಿಳೆಯರ ಹೊರತಾಗಿ ಈ ಪ್ರಪಂಚವೇ ಕಲ್ಪಿಸಿಕೊಳ್ಳುವುದು ಕಷ್ಟ ಸುಮಾರು 30 ವರ್ಷಗಳಿಂದ ಆರ್ಬಿಟ್ ಸಂಸ್ಥೆ ಮಹಿಳೆಯರ ಸಬಲೀಕರಣಕ್ಕಾಗಿ ದುಡಿಯುತ್ತಿರುವುದು ಶ್ಲಾಘನೀಯ ಸಂಗತಿ ಎಂದು ತಿಳಿಸಿದರು.

ಆರ್ಬಿಟ್ ಸಂಸ್ಥೆಯ ವಿಮಲಾಬಾಯಿ ಮಾತನಾಡಿ, ಮಹಿಳೆಯರಲ್ಲಿ ನಾಯಕತ್ವ ಗುಣ ಬೆಳೆಸುವಲ್ಲಿ ಆರ್ಬಿಟ್ ಸಂಸ್ಥೆಯ ಕೊಡುಗೆ ದೊಡ್ಡದಿದೆ ಎಂದು ತಿಳಿಸಿದರು.

ಡಿಸಿಸಿ ಬ್ಯಾಂಕ್‌ನ ಸಹಾಯಕ ಅಭಿವೃದ್ಧಿ ಅಧಿಕಾರಿ ಪ್ರತಾಪಸಿಂಗ ರಾಜಪುತ್ ಮಾತನಾಡಿದರು.

ಸ್ಥಳೀಯ ನಿರ್ದೇಶಕ ವಂದನಿಯ ಫಾಧರ ರೋಕಿ ಮಾತನಾಡಿದರು. ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ವಂದನೆಯ ಫಾದರ್, ವಿಕ್ಟರ್ ವಾಸ್, ಸಹ ನಿರ್ದೇಶಕರಾದ ಫಾದರ್ ವಿಜಯ್, ಪುರಸಭೆ ಅಧ್ಯಕ್ಷೆ ಶಶಿಕಲಾ ಅಶೋಕ, ಸಹಾಯಕ ಕೃಷಿ ನಿರ್ದೇಶಕ ಪಿ.ಎಂ.ಮಲ್ಲಿಕಾರ್ಜುನ, ಉಪನ್ಯಾಸಕರಾದ ವಿಜಯಲಕ್ಷ್ಮಿ ಗಡ್ಡೆ, ಫಾದರ್ ರೇಜಿ, ಫ್ರಾನ್ಸಿಸ್. ಸಿಸ್ಟರ್ ಶೀಲಾ, ಯಜ್ಞ, ಹಾಗೂ ಕ್ರಿಸ್ಟಿನ, ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ನಿರ್ಮಲ, ಸುಜಾತ, ಪ್ರಭಾವತಿ ಇದ್ದರು.

ರಾಜೇಶ್ವರಿ ಪ್ರಾರ್ಥನೆ ಗೀತೆ ನಡೆಸಿಕೊಟ್ಟರು. ರಾಣಿ ಸ್ವಾಗತಿಸಿದರು. ಅರ್ಚನಾ, ಸುಲೋಚನಾ ನಿರೂಪಿಸಿದರು. ಇಂದುಮತಿ ವಂದಿಸಿದರು.

# ಹೆಡ್‌ಕಾನ್ಸ್ಟೇಬಲ್ ಗಿರೆಪ್ಪ ಮುಖ್ಯಮಂತ್ರಿ ಪದಕ

ಯಾದಗಿರಿ:ಏ.01: ಕಾನೂನು ಸುವ್ಯವಸ್ಥೆ ಕಾಪಾಡುವ ಜತೆಗೆ ಇಲಾಖೆಯಲ್ಲಿ ಉತ್ತಮ ಕರ್ತವ್ಯ ನಿರ್ವಹಿಸಿದವರಿಗೆ ನೀಡುವ 2024ನೇ ಸಾಲಿನ ಮುಖ್ಯಮಂತ್ರಿ ಪದಕಕ್ಕೆ ಯಾದಗಿರಿ ಜಿಲ್ಲಾ ಪೊಲೀಸ್ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೆಡ್‌ಕಾನ್ಸ್ಟೇಬಲ್ ಗಿರೆಪ್ಪ ಭಾಜನರಾಗಿದ್ದಾರೆ.

ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ದೇವಿಕೇರಾ ಗ್ರಾಮದವರಾಗಿದ್ದು, 2005ನೇ ಸಾಲಿನಲ್ಲಿ ಪೊಲೀಸ್ ಇಲಾಖೆಗೆ ಆಯ್ಕೆಯಾಗಿದ್ದು, ಹಿಂದೆ ಗುರುಮಠಕಲ್ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿ ಕಳೆದು ಹಲವು ವರ್ಷಗಳಿಂದ ಜಿಲ್ಲಾ ಪೊಲೀಸ್ ಕಛೇರಿಯ ಅಪರಾಧ ಶಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ.

# ಮಾಜಿ ಸಚಿವ ರಾಜಶೇಖರ ಪಾಟೀಲ ಜನ್ಮದಿನ ಇಂದು



ಮಲ್ಲಮ್ಮ ನುಡಿ ವಾರ್ತೆ

ಬೀದರ. ಏ. 01 : ಹುಮನಾಬಾದ್ ಪಟ್ಟಣದ ರಾಜೇಶ್ವರಿ ದೇವಸ್ಥಾನ ಆವರಣದಲ್ಲಿ ಏಪ್ರಿಲ್ 2 ರಂದು ಸಂಜೆ 6ಕ್ಕೆ ಮಾಜಿ ಸಚಿವ ರಾಜಶೇಖರ ಪಾಟೀಲ ಅವರ ಜನ್ಮದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕಾಂಗ್ರೆಸ್ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ದತ್ತಾತ್ರಿ ಮೂಲಗೆ ತಿಳಿಸಿದ್ದಾರೆ.

ಕೆಪಿಸಿಸಿ, ಕಾಂಗ್ರೆಸ್ ಜಿಲ್ಲಾ ಘಟಕ, ಬ್ಲಾಕ್ ಕಾಂಗ್ರೆಸ್, ಎಲ್ಲ ಮುಂಚೂಣಿ ಘಟಕಗಳ ಅಧ್ಯಕ್ಷರು, ಪದಾಧಿಕಾರಿಗಳು, ಪಕ್ಷದ ಚುನಾಯಿತ ಪ್ರತಿನಿಧಿಗಳು, ಮುಖಂಡರು ಹಾಗೂ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದ್ದಾರೆ.

ಮಾಜಿ ಸಚಿವ ರಾಜುಗೌಡ ಕಿಡಿ

# ಅಗತ್ಯ ವಸ್ತುಗಳ ಬೆಲೆ ಏರಿಕೆ ಜನರ ಶಾಪ ಸರ್ಕಾರಕ್ಕೆ ತಟ್ಟದೆ ಇರದು...



ಯಾದಗಿರಿ: ರಾಜ್ಯ ಸರ್ಕಾರ ಅಗತ್ಯ ವಸ್ತುಗಳಬೆಲೆ ಏರಿಕೆ ಮಾಡುವಮೂಲಕಜನರಶಾಪಕ್ಕೆ ಗುರಿಯಾಗಿದೆ ಎಂದು ಮಾಜಿ ಸಚಿವ ನರಸಿಂಹ ನಾಯಕ ( ರಾಜುಗೌಡ)ಅವರೂಶಹಾಪುರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಮನುಷ್ಯ ಹುಟ್ಟಿದ ಮೇಲೆ ಸಾಯುವತನಕ ಬೇಕಾದ ಮೂಲಭೂತ ಅವಶ್ಯಕತೆಗಳ ದರ ಹೆಚ್ಚಳ ಮಾಡುವ ಮೂಲಕ ರಾಜ್ಯದ ಜನರನ್ನು ಸುಲಿಗೆ ಮಾಡುತ್ತಿದೆ. ಪ್ರತಿ ಲೀಟರ್ ಹಾಲಿಗೆ 4ರೂ.ಹೆಚ್ಚಳ ಮಾಡುವ ಮೂಲಕಶ್ರೀಸಾಮಾನ್ಯನ ಪರಿಸ್ಥಿತಿ ಗಂಭೀರಗೊಳಿಸಿದ್ದಾರೆ. ಸ್ಟಾಂಪ್ ಡ್ಯೂಟಿ, ಹೀಗೆ ಎಲ್ಲ ವಿಧದಲ್ಲೂ ದರ ಹೆಚ್ಚಳ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಬೆಂಗಳೂರಿನಲ್ಲಿ ಕಸಕ್ಕೂ ತೆರಿಗೆ ಹಾಕುವ ವಿಚಿತ್ರ ಪದ್ಧತಿ ಜಾರಿಗೆ ತಂದಿದೆ. ಪಂಚ ಗ್ಯಾರಂಟಿಯೋ ಅಥವಾ ಪಂಚ್ ಗ್ಯಾರಂಟಿಯೋ ತಿಳಿಯದಾಗಿದೆ. ಈ ದರ ಹೆಚ್ಚಳ ಖಂಡಿಸಿ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಸೇರಿದಂತೆ ನಮ್ಮ ಪಕ್ಷದ ಎಲ್ಲ ಶಾಸಕರು ಮಾಜಿ ಶಾಸಕರು ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಬುಧವಾರ ಬೆಳಗ್ಗೆಯಿಂದ ಅನಿರ್ದಿಷ್ಟ ಉಪವಾಸ ಸತ್ಯಾಗ್ರಹ ಆಯೋಜಿಸಲಾಗಿದೆ ಆಯೋಜಿಸಲಾಗಿದ್ದ ಎಂದರು.

ನಮ್ಮಲ್ಲಿ ನೀರು ಇಲ್ಲದಿದ್ದರೆ ತೆಲಂಗಾಣಕ್ಕೆ ಯಾಕೆ ಹರಿಸಿದ್ದೀರಿ. ಸುಮಾರು 10 ಟಿಎಂಸಿ ನೀರು ಹರಿಸಲಾಗಿದೆ ಈ ಬಗ್ಗೆ ತನಿಖೆ ನಡೆಸಬೇಕು. 5 ದಿನ ನಿರಂತರ ನೀರು ಹರಿಸಲಾಗಿದೆ. ನಮ್ಮ ರೈತರ ಬಗ್ಗೆ ಈ ಭಾಗದ ಶಾಸಕ ಮತ್ತು ಸಚಿವರು ದುರ್ಬಲರಾಗಿದ್ದಾರೆ. ಇವರಿಗೆ ಸರ್ಕಾರದ ಬಳಿ ಹೋಗಿ ಕೇಳಲು ಧೈರ್ಯವಿಲ್ಲ ಎಂದು ಲೇವಡಿ ಮಾಡಿದರು.

ರೈತರಿಗೆ ಅನ್ಯಾಯ ಮಾಡಿದರೆ ಈ ಸರ್ಕಾರ ಬಹಳ ದಿನ ಉಳಿಯುವುದಿಲ್ಲ. ಕಾಲುವೆಗೆ ನೀರು ಹರಿಸುವಂತೆ ನಾನು ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಮನವಿ ಮಾಡಿದ್ದೇನೆ. ಅಧಿಕಾರಿಗಳೇ ಸಿಎಂ ಅವರಿಗೆ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದರು..

ಈ ಸಂದರ್ಭದಲ್ಲಿ ಜಿಲ್ಲಾ ಅಧ್ಯಕ್ಷ ಬಸವರಾಜ ವಿಭೂತಿಹಳ್ಳಿ, ರಾಜ್ಯ ಕಾರ್ಯದರ್ಶಿ ಮತ್ತು ನಗರಸಭೆ ಅಧ್ಯಕ್ಷೆ ಕು.ಲಲಿತಾ ಅನಪುರ, ನಿಕಟಪೂರ್ವ ಜಿಲ್ಲಾಧ್ಯಕ್ಷ ಅಮೀನರಡ್ಡಿ ಯಾಳಗಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುರು ಕಾಮ ಮತ್ತು ಮೆಲಪ್ಪ ಗುಳುಗಿ ಹಾಗೂ ಪರುಶುರಾಮ ಕುರಕುಂದಿ, ಜಿಲ್ಲಾ ಉಪಾಧ್ಯಕ್ಷ ಅಡಿವೆಪ್ಪ ಜಾಕ, ಜಿಲ್ಲಾ ಪಂಚಾಯತ್ ಅಧ್ಯಕ್ಷ ರಾಜ ಹನುಮಂತ ನಾಯಕ, ಸಿದ್ದಣ್ಣ ಗೌಡ, ಶಿವರಾಜ ದೇಶಮುಖ, ರಾಜಶೇಖರ್ ಗೂಗಲ್, ರಾಜಶೇಖರ್ ಕಾಡಂನೊರ, ಶಹಾಪುರ ಗ್ರಾಮೀಣ ಮಂಡಲ ಅಧ್ಯಕ್ಷ ತಿರುಪತಿ ಹತಿಕಟಿಗಿ, ರಾಜುಗೌಡ ಉಕ್ಕಿನಾಳ, ಜಿಲ್ಲಾ ಮಾಧ್ಯಮ ಸಂಚಾಲಕ ವಿರುಪಾಕ್ಷಯ್ಯ ಸ್ವಾಮಿ ಹೆಡಗಿಮದ್ರಾ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.....

ಇಂದು ಸಂಜೆಯೊಳಗೆ ನೀರು ಬಿಡುವ ನಿರ್ಧಾರ ತೆಗೆದುಕೊಳ್ಳಿ,

# ಇಲ್ಲವಾದರೇ ನಾಳೆ ಯಾದಗಿರಿ ಬಂದ್, ನಂತರ ಶಾಸಕರ ಮನೆಗಳಿಗೆ ಮುತ್ತಿಗೆ : ರಾಜೂಗೌಡ ಎಚ್ಚರಿಕೆ.

ಮಲ್ಲಮ್ಮ ನುಡಿ ವಾರ್ತೆ

ಶಹಾಪುರ:ಇಂದುಸಂಜೆಯೊಳಗೆ ನೀರು ಬಿಡುವ ನಿರ್ಧಾರ ಕೈಕೊಳ್ಳಬೇಕು, ಇಲ್ಲವಾದರೇ ನಾಳೆ ಯಾದಗಿರಿ ಬಂದ್, ಮುಂದಿನ ನಡೆ ರೈತಸಂಘಟನೆಗಳು, ತೆಗೆದ 'ಕೊಳ್ಳುವ ನಿರ್ಧಾರದಂತೆಯೇ ಹೋರಾಟ ನಿರಂತರವಾಗಿಮುಂದುವರೆಸಲಾಗುವುದು ಎಂದು ಮಾಜಿ ಸಚಿವ ರಾಜೂ ಗೌಡ ಎಚ್ಚರಿಸಿದ್ದಾರೆ.

ಶಹಾಪುರ ಸಮೀಪದ ಭೀ. ಗುಡಿ ಸರ್ಕಲ್ ನ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಗಳವಾರ ನಡೆದ ಪಕ್ಷಾತೀತ ಹೊರಾಟದಲ್ಲಿ ಮಾತನಾಡಿದರು.

ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ರೈತರನ್ನು ಉದ್ದೇಶಿಸಿ ಮಾತನಾಡಿದ ಅವರು, ನೀರು ಬೀಡುವವರೆಗೂ ಹೋರಾಟ ನಿಲ್ಲಿಸುವ ಮಾತೇ ಇಲ್ಲ ಎಂದು ಹೇಳಿದರು. ಬೆಂಗಳೂರಿಗೆ ಹೋಗುವ ಅಗತ್ಯವಿಲ್ಲ, ಜಿಲ್ಲೆಯ ಮೂವರು, ನೆರೆಯ ಜೇವರ್ಗಿ ಶಾಸಕರ ಮನೆಗಳಿಗೆ ಮುತ್ತಿಗೆ ಹಾಕಿದರೇ ನೀರು ತಾನಾಗಿಯೇ ಹರಿಯುತ್ತದೆ ಎಂದು ಗುಡುಗಿದರು.

ನೆರೆಜಿಲ್ಲೆ ಸಚಿವ ಎಂ.ಬಿ.ಪಾಟೀಲ್ ಅವರನ್ನು ನೋಡಿ ಕಲಿಯರಿ, ಅವರು ಹೇಗೆ ತಮ್ಮ ಜಿಲ್ಲೆಯ ರೈತರಿಗೆ ನೀರು ಹರಿಸಿದರು. ಸಿಎಂ, ಡಿಸಿಎಂ ಎದುರು ನಿಂತು ನೀರು ಹರಿಸಿ ಎಂದು ಕೇಳಲೂ ಧೈರ್ಯವಿಲ್ಲ, ಕೇಳಿದರೇ ಎಲ್ಲಿ ಸಚಿವ ಸ್ಥಾನ ಹೊಗುತ್ತದೆ, ಇಲ್ಲವೇ ನಿಮ್ಮ ಅಕ್ರಮ ದಂಧೆ ನಿಲ್ಲುತ್ತವೆಂದು ಹೆದರುತ್ತಿದ್ದಿರಿ? ಮೊದಲು ಅನ್ನದಾತ, ಆಮೇಲೆ ರಾಜಕೀಯ, ಅಧಿಕಾರ ಎನ್ನುವ ಸತ್ಯ ಅರಿಯರಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದು ಒಬ್ಬ ರಾಜೂಗೌಡನ ಹೋರಾಟ ಅಲ್ಲ, ಜಿಲ್ಲೆಯ ರೈತರ ಪರವಾಗಿ ನಡೆಯುತ್ತಿರುವ ಪಕ್ಷಾತೀತ ಹೋರಾಟವೆಂದು ಸ್ಪಷ್ಟಪಡಿಸಿದರು.

ಬಿಜೆಪಿ ಮಾಜಿ ಅಧ್ಯಕ್ಷ ಅಮೀನ್ ರಡ್ಡಿ ಯಾಳಗಿ, ಹಾಲಿ ಅಧ್ಯಕ್ಷ ಬಸವರಾಜ ವಿಭೂತಿಹಳ್ಳಿ, ಕಲಬುರಗಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಶಿವರಾಜ ಪಾಟೀಲ್ ರದ್ದೆವಾಡಗಿ, ಕರವೇ ಅಧ್ಯಕ್ಷ ಟಿ.ಎನ್.ಭೀಮು ನಾಯಕ್, ನಗರಸಭೆ ಅಧ್ಯಕ್ಷೆ ಲಲಿತಾ ಅನಪುರ, ರೈತಮುಖಂಡ ಮಹೇಶ ಸುಬೇದಾರ ಸೇರಿದಂತೆಯೇ ಅನೇಕರು ಮಾತನಾಡಿ, ರೈತರಿಗೆ ನೀರು ಬಿಡುವ ವಿಷಯದಲ್ಲಿ ಸರ್ಕಾರದ ವಿಳಂಬ ನೀತಿಯನ್ನು ಖಂಡಿಸಿದರು.

ಜಿಲ್ಲೆ ಸಚಿವ, ಶಾಸಕರ ನಡೆಯನ್ನು ಖಂಡಿಸಿದರು. ರೈತರು ಬಿತ್ತಿ ಬೆಳೆದರೇ ನಾವು, ನೀವು ಉಂಡುಟ್ಟು ಆರಾಮವಾಗಿ ಇರುತ್ತೆವೆ, ಈ ಕನಿಷ್ಠ ಪ್ರಜ್ಞೆ ಇಟ್ಟುಕೊಂಡೂ ಸರ್ಕಾರದ ಮೇಲೆ ಒತ್ತಡ ಹಾಕುವ ಮೂಲಕ ನೀರು ಹರಿಸಿ ಎಂದರು.

ಯಾದಗಿರಿ ಜಿಲ್ಲೆ, ದೇವದುರ್ಗ ಮತ್ತು ಜೇವರ್ಗಿ ತಾಲೂಕಿನಿಂದ ಸಾವಿರಾರು ಸಂಖ್ಯೆಯಲ್ಲಿ ರೈತರು ರಸ್ತೆತಡೆಯಲ್ಲಿ ಭಾಗವಹಿಸಿದ್ದರು.

ಸುಮಾರು ಎರಡು ತಾಸು ರಸ್ತೆ ನಡೆಯಿತು.

ಇದರಿಂದಾಗಿ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಪೊಲೀಸರು ಸೂಕ್ತಬಂದೋಬಸ್ತ್ ಮಾಡಿದ್ದರು. ಈ ಸಂದರ್ಭದಲ್ಲಿ ರಾಜ ಹಣಮಂತನಾಯಕ, ಬಸವರಾಜ ಸ್ಥಾವರಮಠ, ಬಸನಗೌಡ ಯಾಡಿಯಾಪುರ, ಯಲ್ಲಪ್ಪ ಕುರುಕುಂದಿ, ಸುರೇಶ್ ಸಜ್ಜನ್, ವೀರೆಶ ಸಾಹುಕಾರ ಹುಣಸಗಿ, ಶೋಭಾ ಬಾಣಿ, ಬಿ.ಎಮ್.ಹಳ್ಳಿಕೊಟಿ, ಸಿದ್ದನಗೌಡ ಕರಿಭಾವಿ, ಚಂದ್ರಶೇಖರ ವಾಗನೂರು, ದೇವಿಂದ್ರಪ್ಪ ಕೊನೇರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುರು ಕಾಮ ಮತ್ತು ಮೆಲಪ್ಪ ಗುಳುಗಿ ಹಾಗೂ ಪರುಶುರಾಮ ಕುರಕುಂದಿ, ಜಿಲ್ಲಾ ಉಪಾಧ್ಯಕ್ಷ ಅಡಿವೆಪ್ಪ ಜಾಕ, ಜಿಲ್ಲಾ ಪಂಚಾಯತ್ ಅಧ್ಯಕ್ಷ ರಾಜ ಹನುಮಂತ ನಾಯಕ, ಸಿದ್ದಣ್ಣ ಗೌಡ, ಶಿವರಾಜ ದೇಶಮುಖ, ರಾಜಶೇಖರ್ ಗೂಗಲ್, ರಾಜಶೇಖರ್ ಕಾಡಂನೊರ, ಚಂದ್ರಶೇಖರ ಯಾಳಗಿ, ಶಹಾಪುರ ಗ್ರಾಮೀಣ ಮಂಡಲ ಅಧ್ಯಕ್ಷ ತಿರುಪತಿ ಹತಿಕಟಿಗಿ, ರಾಜುಗೌಡ ಉಕ್ಕಿನಾಳ, ಹಯಳ್ಳಪ್ಪ ಆಚಾರ್ಯ ಜೇವರ್ಗಿ, ಸೇರಿದಂತೆ ವಿವಿಧ ಸಂಘಟನೆಗಳು ಪದಾಧಿಕಾರಿಗಳ ಉಪಸ್ಥಿತರಿದ್ದರು.....



ನಾವೇ ಮೆರೆಯುಸುತ್ತೆವೆ

ಜಿಲ್ಲೆಯ ರೈತರ ಪರವಾಗಿ ನಿಂತು ಕೂಡಲೇ ನೀರು ಬಿಡಿಸಿ, ಈ ಕೆಲಸ ಮಾಡಿದರೇ ನಾವೇ ನಿಮ್ಮ ಪೊಟೊ ಕೊರಳಿಗೆ ಹಾಕಿಕೊಂಡು ಮೆರೆಯುಸುತ್ತೆವೆ.

**-ರಾಜೂಗೌಡ, ಮಾಜಿ ಸಚಿವ**


ರೈತರ ಬಗ್ಗೆ ಕಾಳಜಿ ಇಲ್ಲದ ಸಚಿವರು.

ಜಿಲ್ಲೆಯ ರೈತರ ಮತಗಳಿಂದಲೇ ಗೆದ್ದು ಶಾಸಕರಾಗಿ ಸಚಿವರಾಗಿರುವ ಶರಣಬಸಪ್ಪ ದರ್ಶನಾಪುರ ಅವರು, ನೀರಿಗಾಗಿ ರೈತರ ಬೀದಿಗಿಳಿದರೂ ತುಟಿ ಬಿಚ್ಚಿಲ್ಲ, ಬದಲಿಗೆ ತಡವಾಗಿ ಬಿತ್ತನೆ ಮಾಡಿದರೇ ನೀರು ಎಲ್ಲಿಂದ ಕೊಡಬೇಕೆಂದು ರೈತರನ್ನೆ ಪ್ರಶ್ನಿಸಿದ್ದಾರೆ. ಅವರಿಗೆ ರೈತರ ಕಷ್ಟ ಗೊತ್ತಿಲ್ಲ, ಅಧಿಕಾರ ಮತ್ತು ಶ್ರೀಮಂತಿಕೆಯಲ್ಲಿ ಬೆಳೆದಿದ್ದಾರೆ.

**ಅಮೀನ್ ರಡ್ಡಿ ಯಾಳಗಿ**
**ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷರು.**

ಭೀ,ಗುಡಿ, ಕಾಲುವೆ ನೀರಿಗೆ ರಸ್ತೆ ತಡೆದು ರೈತರ ಪ್ರತಿಭಟನೆ,!

# ಮಾರ್ಯಾದಿಗೇಡು ಸಚಿವ ಶಾಸಕರಿಗೆ ರೈತರ ಛೀ ಮಾರಿ-ಮಾಜಿ ಸಚಿವ ರಾಜುಗೌಡ ಆಕ್ರೋಶ,!



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ:ಏಪ್ರೀಲ್ 15ರವರೆಗೂ ಕಾಲುವೆಗೆ ನೀರು ಹರಿಸಿದಲ್ಲಿ ಪೈರು ಬಂದ ಬೇಳೆಗಳಿಗೆ ಅನೂಕೂಲವಾಗುತ್ತದೆ, ಕೇವಲ ಕಾಟಚಾರಕ್ಕೆಂದು 6 ನೆಯ ತಾರೀಖಿನವರೆಗೂ ನೀರು ಹರಿಸಿದಲ್ಲಿ ರೈತರು ಬಾಯಿಗೆ ಬಂದ ಅನ್ನ ಕೈಗೆ ಬಾರದೆ ಸಂಕಷ್ಟಕ್ಕಿಡಾಗಿ, ಸರಣಿ ಆತ್ಮಹತ್ಯೆಗಳಿಗೆ ರೈತರು ಬಲಿಯಾಗಬೇಕಾಗುತ್ತದೆ, ಪಕ್ಕದ ತೆಲಂಗಾಣ ರಾಜ್ಯಕ್ಕೆ ರಾತ್ರೋ ರಾತ್ರಿ 10 ಟಿ,ಎಮ್,ಸಿ, ನೀರು ಬಿಟ್ಟು ನಾರಾಯಣಪುರ ಎಡದಂಡೆ ಬಲದಂಡೆ ಕಾಲುವೆಯ ಭಾಗದ ರೈತರನ್ನು ವಂಚಿತರನ್ನಾಗಿಸಿದ್ದು, ರೈತರು ಶಾಸಕ ಸಚಿವರಿಗೆ ಛೀ ಮಾರಿ ಹಾಕುತ್ತಿದ್ದಾರೆ, ಮಾರ್ಯಾದಿಗೇಡು ಜಿಲ್ಲೆಯ ರಾಜಕಾರಣಿಗಳಿಂದ ಇಂದು ರೈತರು ಮೋಸ ಹೋಗುತ್ತಿದ್ದಾರೆ, ಎಂದು ಮಾಜಿ ಮಂತ್ರಿ ರಾಜುಗೌಡ [ನರಸಿಂಹನಾಯಕ] ಆಕ್ರೋಶ ವ್ಯಕ್ತಪಡಿಸಿದರು, ಅವರು ತಾಲುಕಿನ ಭೀ,ಗುಡಿ ಬಾಪುಗೌಡ ಸರ್ಕಲ್ ನಲ್ಲಿ ಹಮ್ಮಿಕೊಂಡ, ರೈತರ ಬ್ರಹತ್ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದರು, ರಾಜುಗೌಡರ ಹೋರಾಟವಲ್ಲ, ಇದು ರೈತಪರ ಹೋರಾಟವಿದ್ದು, ರೈತರ ಜೊತೆಗೆ ಚೆಲ್ಲಾಟವಾಡಿದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟಕ್ಕಿಳಿಯಬೇಕಾಗುತ್ತದೆ ಎಂದ ಅವರು. ಭದ್ರ ನೀರು ಬಿಟ್ಟಲ್ಲಿ ಯಾದಗಿರಿಗೆ ಒಳ್ಳೆಯದಾಗುತ್ತದೆ ಎಂದು ಮುಖ್ಯಮಂತ್ರಿಗಳು ಸಂದೇಶವಿದ್ದು, ಸರಿಯಾಗಿ ಅಧಿಕಾರಿಗಳು ಯಾವ ಡ್ಯಾಂ, ಎಷ್ಟು ನೀರು ಇದೆ ಎನ್ನುವದನ್ನೆ ಮುಖ್ಯಮಂತ್ರಿಗಳಿಗೆ ಮರೆಮಾಚುತ್ತಿದ್ದಾರೆ ಎಂದು ಆರೋಪಿಸಿದ ರಾಜುಗೌಡರು. ನೀರು ಕೇಳಿದಲ್ಲಿ ಮಂತ್ರಿಗಿರಿ. ಶಾಸಕಗಿರಿ, ಅಧ್ಯಕ್ಷಗಿರಿ ಕೈಬಿಡುತ್ತದಯೋ? ಎನ್ನುವ ಭಯದಲ್ಲಿ ನಮ್ಮ ರಾಜಕಿಯ ನಾಯಕರು ಆಡಳಿತದಲ್ಲಿದ್ದಾರೆ. ಎಂದು ಅವರು ವ್ಯಂಗ್ಯವಾಡಿದರು, ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷರಾದ ಚಂದ್ರಶೇಖರಗೌಡ ಮಾಗನೂರ, ಅಮೀನರಡ್ಡಿ ಯಾಳಗಿ, ಯಾದಗಿರಿ ಜಿಲ್ಲಾ ಬಿಜೆಪಿ ಅಧ್ಯಕ್ಷರಾದ ಬಸವರಾಜಪ್ಪಗೌಡ ವಿಬೂತಿಹಳ್ಳಿ, ಶಿವರಾಜ ಪಾಟೀಲ್ ರದ್ದೆವಾಡಿಗಿ, ರೈತ ಸಂಘದ ಯಾದಗಿರಿ ಜಿಲ್ಲಾ ಅಧ್ಯಕ್ಷರಾದ ಮಹೇಶಗೌಡ ಸುಬೇದಾರ, ಸುರೇಶ ಸಜ್ಜನ್, ಕು,ಲಲಿತಾ ಅನನಪೂರ, ಅಡಿವೆಪ್ಪಾ ಜಾಕಾ, ವೀರುಪಕ್ಷಯ್ಯಸ್ವಾಮಿ ಹೆಡಿಗಿಮದ್ರಾ, ಪರಶುರಾಮ ಕುರುಕುಂದಿ, ನಮ್ಮ ಕರ್ನಾಟಕ ಸೇನೆಯ ರಾಜ್ಯ ಸಂಚಾಲಕರಾದ ಭೀಮಣ್ಣ ಶಖಾಪುರ, ಕರವೇ ಜಿಲ್ಲಾಧ್ಯಕ್ಷರಾದ ಟಿ,ಎನ್,ಭೀಮುನಾಯಕ, ಶಹಾಪುರ ಬಿಜೆಪಿ ಅಧ್ಯಕ್ಷರಾದ ತಿರುಪತಿ ಹತ್ತಕಟಟಗಿ, ನಗರ ಅಧ್ಯಕ್ಷರಾದ ಚಂದ್ರಶೇಖರ ಯಾಳಗಿ, ಸೇರಿದಂತೆ ಅನೇಕ ಗಣ್ಯರು ಮಾತನಾಡಿದರು,

ಕಲಬುರ್ಗಿ ಬೇಂಗಳೂರ ರಾಷ್ಟ್ರಿಯ ಹೆದ್ದಾರಿ ಮತ್ತು ಕೊಡಂಗಲ್ ಸಿಂದಗಿ ರಾಜ್ಯ ಹೆದ್ದಾರಿ, ನಾಲ್ಕು ಗಂಟೆಗಳ ಕಾಲ ಸ್ಥಗಿತಗೊಂಡಿತ್ತು, ಬಸ್ ಸಂಚಾರ ಅಸ್ಥವ್ಯಸ್ಥಗೊಂಡಿತ್ತು, ಬಿಸಿಲಿನ ತಾಪದಲ್ಲೂ ರೈತು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು, ಯಾದಗಿರಿ ಜಿಲ್ಲೆಯ ಮಂತ್ರಿ ಶಾಸಕರಿಗೆ ರೈತರ ಕಾಳಜಿ ಇಲ್ಲದೆ ಅವ್ಯವಹಾರಗಳಲ್ಲಿ ಮುಳುಗಿದ್ದಾರೆ, ಏ,15ರವರೆಗೂ ನೀರು ಬಿಡುವತನಕ ನಮ್ಮ ಹೋರಾಟ ನಡೆಯಲ್ಲಿದೆ, ಉಗ್ರಸ್ವರೂಪ ಹೋರಾಟಕ್ಕಿಳಿದು ಶಾಸಕ ಮಂತ್ರಿಗಳ ಮನೆಗೆ ಮುತ್ತಿಗೆ ಹಾಕುತ್ತೇವೆ, ರೈತರ ಹಿತಕ್ಕೆ ದಕ್ಕೆ ಉಂಟಾದಲ್ಲೂ ಪಕ್ಷಾತೀತವಾಗಿ ಹೋರಾಟ ಮಾಡುತ್ತೇವೆ,

**ಅಮೀನರಡ್ಡಿ ಯಾಳಗಿ**
**ಬಿಜೆಪಿ ಯುವ ನಾಯಕರು ಶಹಾಪುರ.**

# ಏ.1 ರಿಂದ ನರೇಗಾ ಕೂಲಿ 349 ರಿಂದ 370 ಕ್ಕೆ ಹೆಚ್ಚಳ: ಹೆಚ್ಚಿನ ಲಾಭ ಪಡೆಯಲು ಮನವಿ

ಮಲ್ಲಮ್ಮ ನುಡಿ ವಾರ್ತೆ

ಔರಾದ : ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ ನಿರ್ವಹಿಸುವ ಕಾರ್ಮಿಕರಿಗೆ ಮುಂಬರುವ ಏಪ್ರಿಲ್ 01 ರಿಂದ ಕೂಲಿ ಮೊತ್ತವನ್ನು 349 ರಿಂದ 370ಕ್ಕೆ ಹೆಚ್ಚಳ ಮಾಡಲಾಗಿದೆ. ಆದ್ದರಿಂದ ಗ್ರಾಮೀಣ ಭಾಗದ ಕೂಲಿಕಾರರು ನಗರದತ್ತ ಕೆಲಸಕ್ಕಾಗಿ ವಲಸೆ ಹೋಗದೆ ನಿಮ್ಮೂರಲ್ಲೆ ಕೆಲಸ ಮಾಡಿ ಇದರ ಲಾಭವನ್ನು ಪಡೆಯಬೇಕು.

ನರೇಗಾ ಯೋಜನೆಯಡಿ ಪ್ರತಿ ದಿನದ ಕೂಲಿಗೆ ಗಂಡು ಮತ್ತು ಹೆಣ್ಣು ಮಕ್ಕಳಿಗೆ ಸಮಾನ ಕೂಲಿ ವೇತನ 370 ಕ್ಕೆ ಹೆಚ್ಚಳ ಮಾಡಲಾಗಿದೆ. ಒಂದು ಆರ್ಥಿಕ ವರ್ಷದಲ್ಲಿ 100 ದಿನ ಕೆಲಸ ಮಾಡಿ ರೂ. 37,000 ತಮ್ಮ ಖಾತೆಗೆ ನೇರವಾಗಿ ಜಮಾ ಮಾಡಿಕೊಳ್ಳಬಹುದು.

ರೈತರು, ಕೂಲಿಕಾರರು ಮನೆಯಲ್ಲಿ ದನ, ಕುರಿ, ಕೋಳಿಗಳಿದ್ದರೆ, ನರೇಗಾ ಯೋಜನೆಯಡಿ ಶೆಡ್ ಗಳು ನಿರ್ಮಿಸಿಕೊಳ್ಳಬಹುದು. ಜೊತೆಗೆ ಆರ್ಥಿಕ ಸದೃಢರಾಗಬಹುದು.

ನರೇಗಾ ಯೋಜನೆಯ ಸೌಲಭ್ಯ ಪಡೆಯಲು ಜಾಬ್ ಕಾರ್ಡ್ ಇರಬೇಕು. ಕಾರ್ಡ್ ಇಲ್ಲದವರು ತಮ್ಮ ಕುಟುಂಬದಲ್ಲಿ 18 ವರ್ಷ ಮೆಲ್ಪಟ ಸದಸ್ಯರ ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್ ,ರೇಷನ್ ಕಾರ್ಡ್ಸ್ ಪ್ರತಿ ಹಾಗೂ ಎರಡು ಫೋಟೋಗಳು ಗ್ರಾಮ ಪಂಚಾಯಿತಿಗೆ ನೀಡಿದರೆ ಉಚಿತವಾಗಿ ಹೊಸ ಜಾಬ್ ಕಾರ್ಡ್ ನೀಡಲಾಗುವುದು.

ನರೇಗಾ ಯೋಜನೆಯಲ್ಲಿ ಕೂಲಿ ಕೆಲಸ ಅಷ್ಟೇ ಅಲ್ಲದೆ ಜಾಮೀನು ಇರುವ ರೈತರು ಕ್ಷೇತ್ರದ ಬದು, ಕೃಷಿ ಹೊಂಡ, ತೋಟಗಾರಿಕೆ ಬೆಳೆ ದಾಳಿಂಬೆ ಸಪೋಟ, ನುಗ್ಗೆಕಾಯಿ ಜೊತೆ ರೇಷ್ಮೆ ಬೆಳೆಯಲು ಸೌಲಭ್ಯಗಳು ಪಡೆದುಕೊಳ್ಳಬಹುದು.

ಪರಿಶೀಷ್ಟ ಜಾತಿ, ಪರಿಶೀಷ್ಟ ಪಂಗಡ ಹಾಗೂ ತಾಂಡಾ ಮಹಿಳೆಯರು ಮತ್ತು ಬಿಪಿಎಲ್ ಕಾರ್ಡುದಾರರು ಇದರ ಹೆಚ್ಚಿನ ಲಾಭಪಡೆಯಬೇಕು ಎಂದು ಸಹಾಯಕ ನಿರ್ದೇಶಕ ಶಿವಕುಮಾರ್ ಘಾಟೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.





ಹೆಚ್ಚಿನ ಮಾಹಿತಿಗಾಗಿ ನಿಮ್ಮ ಹತ್ತಿರದ ಗ್ರಾಮ ಪಂಚಾಯತಿ ಮತ್ತು ತಾಲೂಕು ಪಂಚಾಯತಿಗೆ ಭೇಟಿ ನೀಡಿ, ಹಾಗೂ ಉಚಿತ ಏಕೀಕೃತ ಸಹಾಯವಾಣಿ ಸಂಖ್ಯೆ - 827750600 ಗೆ ಕರೆ ಮಾಡಬಹುದು ಎಂದು ಔರಾದ ತಾಲ್ಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಮಾಣಿಕರಾವ ಪಾಟೀಲ್ ಹಾಗೂ ನರೇಗಾ ಸಹಾಯಕ ನಿರ್ದೇಶಕ ಶಿವಕುಮಾರ್ ಘಾಟೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉದ್ಯಾನವನ ಜಾಗವನ್ನು ತೆರವುಗೊಳಿಸದೆ ಹೋದರೆ ಉಗ್ರವಾದ

# ಹೋರಾಟ ಮಾಡುವುದಾಗಿ ಅಧಿಕಾರಿಗಳಿಗೆ ಎಚ್ಚರಿಕೆ ಶಿವು ದೊಡ್ಮನಿ

ಮಲ್ಲಮ್ಮ ನುಡಿ ವಾರ್ತೆ



ಶಹಾಪುರ ತಾಲೂಕಿನ ಹಳಿಸಗರ ಗ್ರಾಮದ ಸರ್ವೆ ನಂ: 526/6 ರ ಮೋಟಗಿ ರೆಸಿಡೆನ್ಸಿ ಮಾಲೀಕರು ಕಟ್ಟಡ ನಿರ್ಮಿಸಿ, ವಾಣಿಜ್ಯ ಉದ್ದೇಶಗಳಿಗೆ ಬಳಸಿಕೊಳ್ಳುತ್ತಿದ್ದಾರೆ. ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಸರ್ಕಾರಿ ಆಸ್ತಿ ಒತ್ತುವರಿ ಮಾಡಿಕೊಂಡವರ ವಿರುದ್ಧ ಕ್ರಮ ಜರುಗಿಸಿ ಜಾಗವನ್ನು ತೆರವುಗೊಳಿಸಿ, ನಾಗರಿಕರ ವಾಯುವಿಹಾರಕ್ಕೆ ಅನುಕೂಲ ಕಲ್ಪಿಸಿಕೊಡಬೇಕು ಎಂದು ಅನೇಕ ಬಾರಿ ಮಾನ್ಯ ಪೌರಾಯುಕ್ತರಿಗೆ ದೂರು ನೀಡಿದ್ದರೂ ಸಹ, ಒತ್ತುವರಿ ಜಾಗವನ್ನು ತೆರವುಗೊಳಿಸಲು ಸಂಬಂಧಪಟ್ಟ ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದಾರೆ.

ಸರ್ಕಾರದ ಆಸ್ತಿ ಉಳಿಸಿಕೊಳ್ಳಲು ಅಧಿಕಾರಿಗಳು ಏಕೆ ಆಸಕ್ತಿ ವಹಿಸುತ್ತಿಲ್ಲ. ಅಧಿಕಾರಿಗಳು

ಯಾವುದಾದರೂ ಆಮಿಷಕ್ಕೆ ಕಟ್ಟಡ ನಿರ್ಮಿಸಿ ವಾಣಿಜ್ಯ ಕಟ್ಟಡವಾಗಿರುವುದರಿಂದ ಕೂಡಲೇ ಆ ಜಾಗವನ್ನು ತೆರವುಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವಂತೆ ಜಿಲ್ಲಾಧಿಕಾರಿಗಳಿಗೂ ಹಾಗೂ ನಗರಪಾಲಿಕರಿಗೆ ಮನವಿ ಸಲ್ಲಿಸಲಾಗಿದೆ ಎಚ್ಚೆತ್ತುಕೊಳ್ಳದ ಅಧಿಕಾರಿಗಳಿಗೆ ಒಂದು ವಾರದೊಳಗೆ ಗೊಳಸದೆ ಇದ್ದರೆ ಹೋರಾಟ ಮಾಡುವುದಾಗಿ ಶಿವು ದೊಡ್ಡಮನಿ ಪತ್ರಿಕೆಗೆ ತಿಳಿಸಿದ್ದಾರೆ.

# ಹೊಸ ಸಂಕಲ್ಪಗಳ ಯಶಸ್ವಿಗೆ ಮುನ್ನುಡಿ "ಯುಗಾದಿ"

ಸೈದಾಪುರ:ಏ.1: ಹಿಂದೂಗಳ ಪಾಲಿಗೆ ಯುಗಾದಿ ಹಬ್ಬವು ಹೊಸ ಹೊಸ ಸಂಕಲ್ಪಗಳ ಯಶಸ್ವಿಗೆ ಹಾಗೂ ಹೊಸ ಜೀವನಕ್ಕೆ ಮುನ್ನುಡಿ ಎಂದು ಮಾಜಿ ತಾಲ್ಲೂಕ ಪಂಚಾಯಿತಿ ಸದಸ್ಯ ರವಿಂದ್ರ ನಾಯಕ ಮಲ್ಲೋರ್ ಅಭಿಪ್ರಾಯಪಟ್ಟರು. ಸಮೀಪದ ಕೂಡ್ಲೂರು ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಶ್ರೀ ಬಸವಲಿಂಗೇಶ್ವರ ದ್ವಾರ ಬಾಗಿಲು ಹತ್ತಿರ ಯುಗಾದಿ ಹಬ್ಬದ ಹಿನ್ನಲೆಯಲ್ಲಿ ವಿವಿಧ ಹಣ್ಣು-ಹಂಪಲುಗಳನ್ನು ಸೇರಿಸಿ ಸಿದ್ದಪಡಿಸಿದ ಬೇವು ಸಾರ್ವಜನಿಕರಿಗೆ ವಿತರಿಸಿ ಮಾತನಾಡಿದರು. ಗ್ರಾಮೀಣ ಭಾಗದಲ್ಲಿ ಯುಗಾದಿ ಹಬ್ಬವು ಅತ್ಯಂತ ಸಂಭ್ರಮದೊಂದಿಗೆ ಕಳೆಗಟ್ಟಿರುತ್ತದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಪಟ್ಟಣ ಹಾಗೂ ಕೂಡ್ಲೂರ ಗ್ರಾಮ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಹಿರಿಯರು, ಮುಖಂಡರು, ಯುವಕರು ಸೇರಿದಂತೆ ಇತರರಿದ್ದರು.

ದೇವಸ್ಥಾನಗಳಲ್ಲಿ ವಿಶೇಷ ಪೂಜಾ ಕೈಕಂರ್ಯಗಳು: ಪಟ್ಟಣದ ವಿಶ್ವನಾಥ ಮಂದಿರದಲ್ಲಿ, ಸಮೀಪದ ಕಾಳೆ ಬೆಳಗುಂದಿ ಗ್ರಾಮದ ಶ್ರೀ ಬನದೇಶ್ವರ, ಕೂಡ್ಲೂರಿನ ಶ್ರೀ ಬಸವಲಿಂಗೇಶ್ವರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿರುವ ಪ್ರಮುಖ ದೇವಸ್ಥಾನಗಳಲ್ಲಿ ಯುಗಾದಿ ಹಬ್ಬದ ಹಿನ್ನಲೆಯಲ್ಲಿ ವಿಶೇಷ ಪೂಜಾ ಕೈಕಂರ್ಯಗಳು ನಡೆದವು. ಅರ್ಚಕರು ಬೆಳಿಗ್ಗೆಯೇ ದೇವಸ್ಥಾನಗಳನ್ನು ಸ್ವಚ್ಛಗೊಳಿಸಿ, ಮೂರ್ತಿಗಳನ್ನು ವಿಶೇಷವಾಗಿ ಅಲಂಕರಿಸಿ ಶೃಂಗಾರ ಮಾಡಿದ್ದರು. ಭಕ್ತರು ಹಲವು ಬಗೆಯ ನೈವೇದ್ಯಗಳನ್ನು ತಂದು ದೇವರಿಗೆ ಅರ್ಪಿಸಿ, ಹೊಸ ಹೊಸ ಸಂಕಲ್ಪಗಳು ಈ ವರ್ಷ ಸಾಕಾರಗೊಳ್ಳಲಿ ಎಂದು ಮನದಲ್ಲಿ ಪ್ರಾರ್ಥನೆ ಮಾಡಿದರು.

# ಸಾರ್ವಜನಿಕರ ಕುಂದುಕೊರತೆಗಳ ಅಹವಾಲು ಸ್ವೀಕಾರ/ಜನ ಸಂಪರ್ಕ ಸಭೆ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.01-ಬಳ್ಳಾರಿ ವಿಭಾಗದ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳಿಂದ ಜಿಲ್ಲೆಯ ವಿವಿಧ ತಾಲ್ಲೂಕು ಕೇಂದ್ರಗಳಲ್ಲಿ ಸಾರ್ವಜನಿಕರಿಂದ ಕುಂದುಕೊರತೆಗಳ ಅಹವಾಲುಗಳ ಸ್ವೀಕಾರ/ ಜನ ಸಂಪರ್ಕ ಸಭೆ ಏರ್ಪಡಿಸಲಾಗಿದೆ ಎಂದು ಬಳ್ಳಾರಿ ವಿಭಾಗದ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಸಿದ್ಧರಾಜು.ಸಿ ಅವರು ತಿಳಿಸಿದ್ದಾರೆ.

ಪೊಲೀಸ್ ಅಧೀಕ್ಷಕರಾದ ಸಿದ್ಧರಾಜು.ಸಿ ಮಾರ್ಗದರ್ಶನದಲ್ಲಿ ಪೊಲೀಸ್ ನಿರೀಕ್ಷಕರಾದ ಸುರೇಶ್.ಎಂ.ಭಾವಿಮನಿ ಮತ್ತು ನಾಗರೆಡ್ಡಿ ಇವರ ನೇತೃತ್ವದಲ್ಲಿ ಕುರುಗೋಡು, ಸಂಡೂರು, ಸಿರುಗುಪ್ಪ ಮತ್ತು ಕಂಪ್ಲಿ ತಾಲ್ಲೂಕು ಕೇಂದ್ರಗಳಲ್ಲಿ ಅಹವಾಲು ಸ್ವೀಕರಿಸುವ ಕಾರ್ಯಕ್ರಮ ನಡೆಯಲಿದೆ.

ಅಹವಾಲು ಸ್ವೀಕರಿಸುವ ದಿನ ಮತ್ತು ಸ್ಥಳ:

ಏ.09 ರಂದು ಬೆಳಿಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಕುರುಗೋಡು ತಹಶೀಲ್ದಾರರ ಕಚೇರಿ ಸಭಾಂಗಣ. ಏ.17 ರಂದು ಬೆಳಿಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 02 ಗಂಟೆಯವರೆಗೆ ಸಂಡೂರು ತಹಶೀಲ್ದಾರರ ಕಚೇರಿ ಸಭಾಂಗಣ. ಏ.23 ರಂದು ಬೆಳಿಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 02 ಗಂಟೆಯವರೆಗೆ ಸಿರುಗುಪ್ಪ ಸಿಡಿಪಿಓ ಕಚೇರಿ ಸಭಾಂಗಣ ಮತ್ತು ಏ.24 ರಂದು ಬೆಳಿಗ್ಗೆ 11.30 ಗಂಟೆಯಿಂದ ಮಧ್ಯಾಹ್ನ 02 ಗಂಟೆಯವರೆಗೆ ಕಂಪ್ಲಿ ತಹಶೀಲ್ದಾರರ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರಿಗೆ ಅರ್ಜಿ ಸಲ್ಲಿಸಲು ನಮೂನೆ/ಫಾರಂ ನಂ.01 ಮತ್ತು 02 ಗಳನ್ನು ಸಹ ನೀಡಲಾಗುವುದು. ಕುಂದು ಕೊರತೆಗಳಿರುವ ಸಾರ್ವಜನಿಕರು ದೂರುಗಳಿದ್ದಲ್ಲಿ ನಿಗದಿಪಡಿಸಿದ ದಿನದಂದು ಅರ್ಜಿ ನಮೂನೆಯಲ್ಲಿ ಅಹವಾಲು ನೀಡಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರವಾಸೋದ್ಯಮ ಇಲಾಖೆ: ಫೋಟೋ ಕಾಂಟೆಸ್ಟ್

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.01-ಪ್ರವಾಸೋದ್ಯಮ ಇಲಾಖೆ ವತಿಯಿಂದ 'ಡಿಸ್ಕವರ್ ದಿ ಬ್ಯೂಟಿ ಆಫ್ ಇಂಡಿಯಾ' ಶೀರ್ಷಿಕೆಯಡಿ 'ದೆಖೋ ಅಪ್ನ ದೇಶ್ ಫೋಟೋಕಾಂಟೆಸ್ಟ್-2025' ಸ್ಪರ್ಧೆ ಏರ್ಪಡಿಸಲಾಗಿದ್ದು,ಬಳ್ಳಾರಿ ಜಿಲ್ಲೆಯ ಪ್ರಮುಖ ಧಾರ್ಮಿಕ, ಸಾಂಸ್ಕೃತಿಕ,ಪಾರಂಪರಿಕ,ಕರಕುಶಲ, ನೈಸರ್ಗಿಕ ಹಾಗೂ ವನ್ಯಜೀವಿ ಮತ್ತು ಸಾಹಸ ಚಟುವಟಿಕೆಗಳು ಹಾಗೂ ಇತರೆ ಪ್ರವಾಸಿತಾಣಗಳ ಅತ್ಯಾಕರ್ಷಕ ಛಾಯಾಚಿತ್ರಗಳನ್ನು ಸೆರೆಹಿಡಿದು ಪ್ರವಾಸಿ ತಾಣಗಳ ಕಿರು ವಿವರಣೆಯೊಂದಿಗೆ Dekhoap-nadeshphotos@gmail.com ಇ-ಮೇಲ್ ಗೆ ನೇರವಾಗಿ ಕಳುಹಿಸಿಕೊಡಬಹುದಾಗಿದೆ.

ಪ್ರವಾಸೋದ್ಯಮವನ್ನು ಇನ್ನಷ್ಟು ಮೇಲ್ದರ್ಜೆಗೇರಿಸಲು ಹಾಗೂ ಎಲ್ಲಾ ವರ್ಗಗಳ ಧಾರ್ಮಿಕ, ಸಾಂಸ್ಕೃತಿಕ,ಪಾರಂಪರಿಕ,ಕರಕುಶಲ, ನೈಸರ್ಗಿಕ ಹಾಗೂ ವನ್ಯಜೀವಿ ಮತ್ತು ಸಾಹಸ ಚಟುವಟಿಕೆಗಳು ಹಾಗೂ ಇತರೆ ಪ್ರವಾಸಿತಾಣಗಳಲ್ಲಿ ಪ್ರವಾಸಿಗರ ದೃಷ್ಟಿಕೋನದಲ್ಲಿ ಪ್ರಮುಖ ಪ್ರವಾಸಿತಾಣಗಳನ್ನು ಗುರುತಿಸಿ, ವಿಶ್ವದರ್ಜೆಯಲ್ಲಿ ಅಭಿವೃದ್ಧಿಪಡಿಸಲು ಕೇಂದ್ರ ಪ್ರವಾಸೋದ್ಯಮದಿಂದ 'ಡಿಸ್ಕವರ್ ದಿ ಬ್ಯೂಟಿ ಆಫ್ ಇಂಡಿಯಾ' ಶೀರ್ಷಿಕೆಯಡಿ 'ದೆಖೋ ಅಪ್ನ ದೇಶ್ ಫೋಟೋಕಾಂಟೆಸ್ಟ್-2025' ಸ್ಪರ್ಧೆ ಏರ್ಪಡಿಸಲಾಗಿದ್ದು, ಈ ಸಂಬಂಧ ರಾಜ್ಯದ ಎಲ್ಲಾ ಜಿಲ್ಲೆಗಳು/ ಕೇಂದ್ರಾಡಳಿತ ಪ್ರದೇಶಗಳಲ್ಲಿನ ವಿವಿಧ ವಿಭಾಗಗಳಲ್ಲಿ ಅತ್ಯುತ್ತಮ ಛಾಯಾಚಿತ್ರಗಳನ್ನು ಸೆರೆಹಿಡಿದು ಇ-ಮೇಲ್ ಗೆ ನೇರವಾಗಿ ಕಳುಹಿಸಲು ಏ.07 ರ ವರೆಗೆ ಅವಕಾಶ ಕಲ್ಪಿಸಲಾಗಿದೆ.

*ವರ್ಗ:*

ಸ್ಮಾರಕ,ವನ್ಯಜೀವಿ,ಜಿಐ ಟ್ಯಾಗ್ ಕರಕುಶಲ ವಸ್ತುಗಳು ಮತ್ತು ಕೈಮಗ್ಗಗಳು, ಭೂದೃಶ್ಯ(ಲ್ಯಾಂಡ್ ಸ್ಕೇಪ್) ಮತ್ತು ಸಾಹಸ. ಈ ವರ್ಗಗಳಡಿ ಫೋಟೋ ಕಳುಹಿಸಿಕೊಡಬಹುದಾಗಿದೆ.

ಬಳ್ಳಾರಿ ಜಿಲ್ಲೆಯ ಪ್ರವಾಸಿತಾಣಗಳಿಗೆ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಪ್ರಚಾರವನ್ನು ನೀಡಲು ಜಿಲ್ಲೆಯ ಎಲ್ಲಾ ಛಾಯಾಗ್ರಾಹಕರು,ಸಾರ್ವಜನಿಕರು ಹಾಗೂ ಪ್ರವಾಸಿಗರು ಸಹಕರಿಸುವಂತೆ ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಪ್ರಭುಲಿಂಗ ತಳಕೇರಿ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

## ಮಹಿಳಾ ಧ್ವನಿ ಸಂಸ್ಥೆಯಿಂದ ಕೊಪ್ಪಳದಲ್ಲಿ ಯುಗಾದಿ ಸಂಭ್ರಮ ಆಚರಣೆ : ಜಾನಪದ ಸಾಂಸ್ಕೃತಿಗಳ ಅನಾವರಣ




ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ: ನಗರದ ಪಾನಘಂಟಿ ಕಲ್ಯಾಣ ಮಂಟಪದಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ಮಹಿಳಾ ಧ್ವನಿ ಸಂಸ್ಥೆ,ಕವಿತಾ ಮೀಡಿಯಾ ಸೋರ್ಸ ಪ್ರೈ.ಲಿ. ಹೈಬ್ರೀಡ್ ನ್ಯೂಸ್ ಕನ್ನಡ ಸುದ್ದಿವಾಹಿನಿ ವತಿಯಿಂದ ಯುಗಾದಿ ಸಂಭ್ರಮ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ದೀಪ ಬೇಳಗಿಸುವದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದ ಸಮಾಜಸೇವಕರಾದ ಶಾರದಾ ಪಾನಘಂಟಿರವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತ ಹಬ್ಬ ಹರಿ ದಿನಗಳನ್ನು ಆಚರಿಸುವ ಮೂಲಕ ನಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕಾಗಿದೆ.ಯುಗಾದಿ ಹೊಸವರ್ಷದ ಆರಂಭ ದಿನದಂದು ಹೈಬ್ರೀಡ್ ನ್ಯೂಸ್ ನವರು ಗ್ರಾಮೀಣ ಸೊಗಡಿನ ಕಾರ್ಯಕ್ರಮವನ್ನು ಆಯೋಜಿಸಿರುವುದು ತುಂಬಾ ಖುಷಿಯ ಸಂಗತಿ ಎಂದು ತಿಳಿಸಿದರು ಇದರಿಂದ ಯುವ ಪೀಳಿಗೆಗೆ ನಮ್ಮ ಆಚರಣೆಗಳ ತಿಳಿವಳಿಕೆ ಮೂಡುತ್ತದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಹಿರಿಯ ಸಾಹಿತಿಗಳಾದ ಮಹಾಂತೇಶ ಮಲ್ಲನಗೌಡರವರು ಮಾತನಾಡುತ್ತ ಯುಗಾದಿ ಹಬ್ಬವನ್ನು ವೈಜ್ಞಾನಿಕ ಕಾರಣದಿಂದ ಆಚರಿಸುತ್ತೇವೆ ಈ ಬೇಸಿಗೆ ಕಾಲದಲ್ಲಿ ಎಣ್ಣೆಸ್ನಾನ ಮಾಡುವುದು ಬೇವು ಬೆಲ್ಲದ ಪಾನಕವನ್ನು ಕುಡಿಯುವುದು ದೇಹಕ್ಕೆ ಉತ್ತಮ ಎಂದು ತಿಳಿಸಿದರು.ಗ್ರಾಮೀಣ ಸೊಗಡಿನ ಪರಂಪರೆಯನ್ನು ಉಳಿಸುವ ಕಾರ್ಯವಾಗಬೇಕಿದೆ ಎಂದರು.

ಇದೇ ವೇಳೆ ಸಮಾಜಸೇವಕರಾದ ಸಲೀಂ ಅಳವಂಡಿ ಬೇವು ಬೆಲ್ಲವನ್ನು ಹಂಚುವುದರ ಮೂಲಕ ಹಿಂದೂ ಮುಸ್ಲಿಂ ಭಾವೈಕ್ಯತೆಗೆ ಸಾಕ್ಷಿಯಾದರು.

ಯುಗಾದಿ ಸಂಭ್ರಮ ಕಾರ್ಯಕ್ರಮದಲ್ಲಿ ಅನೇಕ ಗ್ರಾಮೀಣ ಸೊಗಡಿನ ಕಾರ್ಯಕ್ರಮಗಳು ಜನರ ಮನವನ್ನು ಸೆಳೆದವು. ಕಾರ್ಯಕ್ರಮದಲ್ಲಿ ಕವಿಗೋಷ್ಠಿ,ಜಾನಪದ,ಏಕಪಾತ್ರ,ಸುಗಮ ಸಂಗೀತ,ನೃತ್ಯ ಕಾರ್ಯಕ್ರಮಗಳು ಜರುಗಿದವು.

ರಾಯಚೂರಿನ ಮಲ್ಲಿಕಾರ್ಜುನಗೌಡ ಜಾನಪದ ಕಲಾತಂಡ,ಹಿರೇಹಡಗಲಿಯ ಮಹಿಳಾ ಜಾನಪದ ಕಲಾತಂಡ,ಅಪ್ಪು ಡ್ಯಾನ್ಸ ಅಕಾಡೆಮಿ ಕಲಾತಂಡ ಭಾಗವಹಿಸಿದ್ದರು. ರಶ್ಮೀ ಕನಕಗಿರಿ,ಪೂಜಾ ನರಿ,ಕಂದೆರ ತಿಪ್ಪೆಸ್ವಾಮಿ,ಪ್ರಗತಿ,ನರಸಿಂಹ, ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಿನ್ನಾಳ ಕಲೆಯಲ್ಲಿ ಗುರುತಿಸಿಕೊಂಡಿರುವ ಅಮೃತಾ ಚಿತ್ರಗಾರ ಅವರಿಗೆ ಸ್ಟಾರ್ ವುಮೇನ್ ಅವಾರ್ಡ್ ನೀಡಿ ಗೌರವಿಸಲಾಯಿತು. ಅಂತರಾಷ್ಟ್ರೀಯ ಜಾನಪದ ಕಲಾವಿದರಾದ ಸೌಭಾಗ್ಯ ಗವಿಸಿದ್ದಯ್ಯ ದಂದಪತಿಗಳಿಗೆ ಸ್ಟಾರ್ ಜೋಡಿ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ಎಲ್ಲರಿಗೂ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಬೀರಪ್ಪ ಅಂಡಗಿ,ಪ್ರೇಮಾ ಹಲಗಿ,ಚೈತ್ರಾ ವಕೀಲರು,ಮಹಿಳಾ ಧ್ವನಿ ಸಂಸ್ಥಾಪಕಿ ಪ್ರಿಯದರ್ಶಿನಿ ಮುಂಡರಗಿಮಠ,ಡಾ.ಬಿ.ಎನ್. ಹೊರಪೇಟಿ, ಉಪಸ್ಥಿತಿರಿದ್ದರು.

# ವಿಜೃಂಭಣೆಯಿಂದ ನೆರವೇರಿದ ಶ್ರೀ ಮಾರುತೇಶ್ವರ ಮಹಾ ರಥೋತ್ಸವ



ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಜಿಲ್ಲೆ ಕೊಪ್ಪಳ ತಾಲೂಕಿನ ಇಲಕಲ್ಲಗಡ ಗ್ರಾಮದಲ್ಲಿ ಸೋಮವಾರ ಸಂಜೆ ಶ್ರೀ ಮಾರುತೇಶ್ವರನ ಮಹಾರಥೋತ್ಸವ ವಿಜೃಂಭಣೆಯಿಂದ ಜರಗಿತು.

ಗ್ರಾಮದ ಶ್ರೀ ಮಾರುತೇಶ್ವರ ಮಹಾ ರಥೋತ್ಸವಕ್ಕೆ ಕೊಪ್ಪಳ ಸಂಸ್ಥಾನ ಗವಿಶ್ರೀ ಮಠದ ಪೂಜ್ಯರಾದ ಶ್ರೀ ಅಭಿನವ ಗವಿಸಿದ್ದೇಶ್ವರ ಮಹಾಸ್ವಾಮಿಗಳು, ಕುದರಿಮೋತಿ ಸಂಸ್ಥಾನ ಮಠದ ವಿಜಯ ಮಹಾಂತೇಶ್ವರ ಮಹಾಸ್ವಾಮಿಗಳು ಹಾಗೂ ಕುಕನೂರು ಪಟ್ಟಣದ ಮುಂಡರಗಿ ಶ್ರೀಅನ್ನದಾನೇಶ್ವರ ಶಾಖಾಮಠದ ಮಹದೇವ ಮಹಾಸ್ವಾಮಿಗಳು ಚಾಲನೆ ನೀಡಿದರು.

ಶ್ರೀ ಮಾರುತೇಶ್ವರ ಜಾತ್ರೋತ್ಸವ ಪ್ರಯುಕ್ತ ದೇವಸ್ಥಾನದಲ್ಲಿ ಹನುಮಂತ ದೇವರಿಗೆ ಅಭಿಷೇಕ ನಮಸ್ಕಾರ ಹಾಕುವುದು ಮತ್ತು ಪೂಜಾ ಕಾರ್ಯ ಸೇರಿದಂತೆ ಹಲವಾರು ಧಾರ್ಮಿಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದರು. ಎತ್ತುಗಳ ಬಹುಮಾನ ವಿತರಣೆ ಮತ್ತು ಮಠಾಧೀಶರಿಂದ ಹಿತನುಡಿಗಳ ಕಾರ್ಯಕ್ರಮ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಹಮ್ಮಿಕೊಳ್ಳಲಾಗಿತ್ತು

ರಥೋತ್ಸವಕ್ಕೂ ಮುನ್ನ ದಿನ ಭಾನುವಾರ ಸಂಜೆ ಲಘು ರಥೋತ್ಸವ ನಡೆಯಿತು ಬೆಳಿಗ್ಗೆ ಜೋಡಿಯತ್ತುಗಳ ಭಾರ ಎಳೆಯುವ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಸ್ಪರ್ಧೆಯಲ್ಲಿ ಸುತ್ತಮುತ್ತಲಿನ ಸುಮಾರು ಒಂದು 20 ರಿಂದ 30 ಜೋಡಿಗಳ ಊರುಗಳ ಎತ್ತುಗಳು ಭಾಗವಹಿಸಿದ್ದು ಪ್ರಥಮ ಬಹುಮಾನ 15 ತೊಲೆ ಬೆಳ್ಳಿ ದ್ವಿತೀಯ ಬಹುಮಾನ ಹತ್ತು ತೊಲೆ ಬೆಳ್ಳಿ ಘೋಷಿಸಿದರು ಪ್ರಥಮ ಬಹುಮಾನವನ್ನು ಲಾಯದುಣಸಿ ಗ್ರಾಮದ ಜೋಡೆತ್ತುಗಳು ಪಡೆದುಕೊಂಡವು, ದ್ವಿತೀಯ ಬಹುಮಾನವನ್ನು ಲಿಂಗದಳ್ಳಿ ಎತ್ತುಗಳು ಪಡೆದುಕೊಂಡವು.

ರಥೋತ್ಸವ ಸಂದರ್ಭದಲ್ಲಿ ಸುತ್ತಮುತ್ತಲಿನ ಗ್ರಾಮಸ್ಥರು ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಂಡು ತಮ್ಮ ಅರ್ಹತೆ ಹಾಗೂ ಇಷ್ಟಾರ್ಥಗಳನ್ನು ಈಡೇರಿಸಿ ಸ್ವಾಮಿಯ ಕೃಪೆಗೆ ಪಾತ್ರರಾದರು .

ಈ ಸಂದರ್ಭದಲ್ಲಿ ಊರಿನ ಹಿರಿಯರಾದ ಹನುಮೇಶಪ್ಪ ಕುಷ್ಟಗಿ ವೀರಬಸಪ್ಪ ಶೆಟ್ಟರ್ ಗಂಗಾಧರಸ್ವಾಮಿ ಹನುಮಂತ್ ಕಾಟಾಪುರ್ ಮಾರುತಿ ತೋಟಗಂಟಿ ಬಸವರಾಜ್ ಬೋವಿ ರವಿ ದೇಸಾಯಿ ರವಿ ಪಟ್ಟಣಶೆಟ್ಟಿ ಮಲ್ಲಿಕಾರ್ಜುನ್ ಮಾಚನೂರು ಶರಣಪ್ಪ ಕುಂಬಾರ್ ಶಿವುಕುಮಾರ್ ಪ್ರದೀಪ್ ಮನ್ನಾಪುರ್ ನಾಗರಾಜ್ ಬಡಿಗೇರ್ ಮಾರುತೇಶ್ವರ ಕಮಿಟಿ ಅವರು ರೈತ ಸಂಘದ ಸರ್ವ ಸದಸ್ಯರು ಪಾಲ್ಗೊಂಡಿದ್ದರು.

## ಪ್ರವಾಸೋದ್ಯಮ ಇಲಾಖೆ: ಫೋಟೋ ಕಾಂಟೆಸ್ಟ್

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.01-ಪ್ರವಾಸೋದ್ಯಮ ಇಲಾಖೆ ವತಿಯಿಂದ 'ಡಿಸ್ಕವರ್ ದಿ ಬ್ಯೂಟಿ ಆಫ್ ಇಂಡಿಯಾ' ಶೀರ್ಷಿಕೆಯಡಿ 'ದೆಖೋ ಅಪ್ನ ದೇಶ್ ಫೋಟೋಕಾಂಟೆಸ್ಟ್-2025' ಸ್ಪರ್ಧೆ ಏರ್ಪಡಿಸಲಾಗಿದ್ದು,ಬಳ್ಳಾರಿ ಜಿಲ್ಲೆಯ ಪ್ರಮುಖ ಧಾರ್ಮಿಕ, ಸಾಂಸ್ಕೃತಿಕ,ಪಾರಂಪರಿಕ,ಕರಕುಶಲ, ನೈಸರ್ಗಿಕ ಹಾಗೂ ವನ್ಯಜೀವಿ ಮತ್ತು ಸಾಹಸ ಚಟುವಟಿಕೆಗಳು ಹಾಗೂ ಇತರೆ ಪ್ರವಾಸಿತಾಣಗಳ ಅತ್ಯಾಕರ್ಷಕ ಛಾಯಾಚಿತ್ರಗಳನ್ನು ಸೆರೆಹಿಡಿದು ಪ್ರವಾಸಿ ತಾಣಗಳ ಕಿರು ವಿವರಣೆಯೊಂದಿಗೆ Dekhoapnadesh-photos@gmail.com ಇ-ಮೇಲ್ ಗೆ ನೇರವಾಗಿ ಕಳುಹಿಸಿಕೊಡಬಹುದಾಗಿದೆ.

ಪ್ರವಾಸೋದ್ಯಮವನ್ನು ಇನ್ನಷ್ಟು ಮೇಲ್ದರ್ಜೆಗೇರಿಸಲು ಹಾಗೂ ಎಲ್ಲಾ ವರ್ಗಗಳ ಧಾರ್ಮಿಕ, ಸಾಂಸ್ಕೃತಿಕ,ಪಾರಂಪರಿಕ,ಕರಕುಶಲ, ನೈಸರ್ಗಿಕ ಹಾಗೂ ವನ್ಯಜೀವಿ ಮತ್ತು ಸಾಹಸ ಚಟುವಟಿಕೆಗಳು ಹಾಗೂ ಇತರೆ ಪ್ರವಾಸಿತಾಣಗಳಲ್ಲಿ ಪ್ರವಾಸಿಗರ ದೃಷ್ಟಿಕೋನದಲ್ಲಿ ಪ್ರಮುಖ ಪ್ರವಾಸಿತಾಣಗಳನ್ನು ಗುರುತಿಸಿ, ವಿಶ್ವದರ್ಜೆಯಲ್ಲಿ ಅಭಿವೃದ್ಧಿಪಡಿಸಲು ಕೇಂದ್ರ ಪ್ರವಾಸೋದ್ಯಮದಿಂದ 'ಡಿಸ್ಕವರ್ ದಿ ಬ್ಯೂಟಿ ಆಫ್ ಇಂಡಿಯಾ' ಶೀರ್ಷಿಕೆಯಡಿ 'ದೆಖೋ ಅಪ್ನ ದೇಶ್ ಫೋಟೋಕಾಂಟೆಸ್ಟ್-2025' ಸ್ಪರ್ಧೆ ಏರ್ಪಡಿಸಲಾಗಿದ್ದು, ಈ ಸಂಬಂಧ ರಾಜ್ಯದ ಎಲ್ಲಾ ಜಿಲ್ಲೆಗಳು/ ಕೇಂದ್ರಾಡಳಿತ ಪ್ರದೇಶಗಳಲ್ಲಿನ ವಿವಿಧ ವಿಭಾಗಗಳಲ್ಲಿ ಅತ್ಯುತ್ತಮ ಛಾಯಾಚಿತ್ರಗಳನ್ನು ಸೆರೆಹಿಡಿದು ಇ-ಮೇಲ್ ಗೆ ನೇರವಾಗಿ ಕಳುಹಿಸಲು ಏ.07 ರ ವರೆಗೆ ಅವಕಾಶ ಕಲ್ಪಿಸಲಾಗಿದೆ.

ವರ್ಗ:ಸ್ಮಾರಕ,ವನ್ಯಜೀವಿ,ಜಿಐ ಟ್ಯಾಗ್ ಕರಕುಶಲ ವಸ್ತುಗಳು ಮತ್ತು ಕೈಮಗ್ಗಗಳು, ಭೂದೃಶ್ಯ(ಲ್ಯಾಂಡ್ ಸ್ಕೇಪ್) ಮತ್ತು ಸಾಹಸ. ಈ ವರ್ಗಗಳಡಿ ಫೋಟೋ ಕಳುಹಿಸಿಕೊಡಬಹುದಾಗಿದೆ.

ಬಳ್ಳಾರಿ ಜಿಲ್ಲೆಯ ಪ್ರವಾಸಿತಾಣಗಳಿಗೆ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಪ್ರಚಾರವನ್ನು ನೀಡಲು ಜಿಲ್ಲೆಯ ಎಲ್ಲಾ ಛಾಯಾಗ್ರಾಹಕರು,ಸಾರ್ವಜನಿಕರು ಹಾಗೂ ಪ್ರವಾಸಿಗರು ಸಹಕರಿಸುವಂತೆ ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಪ್ರಭುಲಿಂಗ ತಳಕೇರಿ ಅವರು ಪ್ರಕಟಣೆಯಲ್ಲಿ ಕೋರಿದ್ದಾರೆ.

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.01-ಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2024-25ನೇ ಸಾಲಿನ ಮೆಟ್ರಿಕ್ ನಂತರದ ಕೋರ್ಸ್ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಂದ ಶುಲ್ಕ ಮರುಪಾವತಿ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸುವ ಅವಧಿಯನ್ನು ಮೇ 31 ರ ವರೆಗೆ ವಿಸ್ತರಿಸಲಾಗಿದೆ.

ಅರ್ಜಿ ಸಲ್ಲಿಸಲು ವೆಬ್‌ಸೈಟ್ https://ssp.postmatric.karnataka.gov.in ಗೆ ಭೇಟಿ ನೀಡಬಹುದು. ಹೆಚ್ಚಿನ ಮಾಹಿತಿಗಾಗಿ ದೂ.08392-275751 ಹಾಗೂ ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶದ ದೂ.1902 ಗೆ ಸಂಪರ್ಕಿಸಬಹುದು ಎಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಭಾನುಮತಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇಂದು ವಿದ್ಯುತ್ ವ್ಯತ್ಯಯ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.01-ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ-2 ವ್ಯಾಪ್ತಿಯಲ್ಲಿ ವಿದ್ಯುತ್ ಪರಿವರ್ತಕ ಕಾರ್ಯ ಕೈಗೊಳ್ಳುತ್ತಿರುವುರಿಂದ ಏ.02 ರಂದು ಬೆಳಿಗ್ಗೆ 9.30 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ಎಫ್-7 ವ್ಯಾಪ್ತಿಯ ರಾಘವ ಕಲಾ ಮಂದಿರ, ಅನಂತಪುರ ರಸ್ತೆ, ವಡ್ಡರ ಬಂಡೆ, ಅಗಡಿ ಮಾರೆಪ್ಪ ಕಾಂಪೌಂಡ್, ರೂಪನಗುಡಿ ರಸ್ತೆ, ಮುಬರಕ್ ಟಾಕೀಸ್,ಬಾಲಾಜಿರಾವ್ ರಸ್ತೆ, ಕೆ.ಸಿ.ರೋಡ್,ಮೀನಾಕ್ಷಿ ಸರ್ಕಲ್, ಬೆಂಗಳೂರು ರಸ್ತೆ,ದುಗ್ಗಪ್ಪ ಬೀದಿ, ರೆಡ್ಡಿ ಬೀದಿ, ಅಲ್ಲಂ ಬೀದಿ, ಮುಲ್ಲಂಗಿ ಸಂಜೀವಪ್ಪ ಬೀದಿ, ರೂಪನಗುಡಿ ನರಪ್ಪ ಬೀದಿ, ತಾಯಮ್ಮ ಕಟ್ಟೆ ಸೇರಿದಂತೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏಪ್ರಿಲ್ ಫೂಲ್ ಮಾಡುವ ಬದಲು ಏಪ್ರಿಲ್ ಕೂಲ್ ಮಾಡುವ

## ವನಸಿರಿ ತಂಡದ ಕಾರ್ಯ ಶ್ಲಾಘನೀಯ... ಶರಣಬಸಪ್ಪ ಮುಖ್ಯಗುರುಗಳು



ಮಲ್ಲಮ್ಮ ನುಡಿ ವಾರ್ತೆ

ಲಿಂಗಸೂರ: ಲಿಂಗಸುಗೂರು ತಾಲೂಕಿನ ಸ.ಕಿ.ಪ್ರಾ.ಶಾಲೆ ರಾಂಪುರ (ಭೂ)ದಲ್ಲಿ ವನಸಿರಿ ಪೌಂಡೇಷನ್ ಸಹಕಾರದಿಂದ ಹಮ್ಮಿಕೊಂಡಿರುವ ಪಕ್ಷಿಗಳಿಗೆ ನೀರಿನ ಅರವಟ್ಟಿಗೆ ಕಟ್ಟುವುದರ ಮೂಲಕ ಎಪ್ರೀಲ್ ಕೂಲ್ ಕಾರ್ಯಕ್ರಮವನ್ನು ಆಚರಿಸಲಾಯಿತು.

ದಿನೇ ದಿನೇ ಏರುತ್ತಿರುವ ಬೇಸಿಗೆ ಬಿಸಿಲಿನ ತಾಪದಿಂದ ಪ್ರಾಣಿ ಪಕ್ಷಿಗಳು ನೀರಡಿಸಿ , ಬಿರು ಬಿಸಿಲಿಗೆ ಪ್ರಾಣ ಕಳೆದುಕೊಳ್ಳುವ ಸ್ಥಿತಿಗೆ ತಲುಪಿವೆ.ಇಂಥ ಸ್ಥಿತಿಯಲ್ಲಿ ಬುದ್ಧಿಜೀವಿಗಳಾದ ನಾವು ಮನುಷ್ಯರು ಈ ಏಪ್ರಿಲ್ ತಿಂಗಳಲ್ಲಿ ಎಪ್ರಿಲ್ ಫೂಲ್ ಮಾಡುವ ಬದಲು ಏಪ್ರಿಲ್ ಕೂಲ್ ಮಾಡುವ ವನಸಿರಿ ತಂಡದ ಕಾರ್ಯ ಶ್ಲಾಘನೀಯ. ನೀವೂ ಕೂಡಾ ಎಪ್ರಿಲ್ ಫೂಲ್ ಮಾಡುವ ಬದಲು ಏಪ್ರಿಲ್ ಕೂಲ್ ಎಂದು ಮಕ್ಕಳಿಗೆ ತಿಳಿ ಹೇಳುವುದರೊಂದಿಗೆ ಮರಗಳ ಟೊಂಗಿಗಳಿಗೆ ನೀರಿನ ಅರವಟ್ಟಿಗೆ ಕಟ್ಟುವುದರ ಮೂಲಕ ಪಕ್ಷಿಗಳಿಗೆ ನೀರುಣಿಸುವ ಕಾರ್ಯ ನಿಜಕ್ಕೂ ಅದ್ಭುತ ಎಂದು ಶಾಲೆಯ ಮುಖ್ಯ ಗುರುಗಳಾದ ಶರಣಬಸಪ್ಪ ಮುಂಡರಗಿಯವರು ತಿಳಿಸಿದರು.

ನಂತರ ಶಾಲೆಯ ಶಿಕ್ಷಕ ನಾಗರಾಜ ಮಾಂಡ್ರೆ ಮಾತನಾಡಿ ಬೇಸಿಗೆಯಲ್ಲಿ ಪಕ್ಷಿಗಳಿಗೆ ನೀರಿನ ಅರವಟ್ಟಿಗೆ ನಿರ್ಮಿಸಿ ಯುವಕ ಯುವತಿಯರನ್ನು ಪರಿಸರದಡೆಗೆ ಸೆಳೆಯಲು ವನಸಿರಿ ಪೌಂಡೇಷನ್ ತಂಡ ಎಪ್ರೀಲ್ ಫೂಲ್ ಬದಲಿಗೆ ಎಪ್ರೀಲ್ ಕೂಲ್ ಕಾರ್ಯಕ್ರಮ ಹಮ್ಮಿಕೊಂಡಿರುವುದು ಒಂದು ಅದ್ಭುತವಾದ ಕಾರ್ಯ.ಸರಕಾರಿ ಶಾಲೆಗೆ ಅರವಟ್ಟಿಗೆ ನೀಡಿ ಅರವಟ್ಟಿಗೆ ಕಾರ್ಯಕ್ರಮಕ್ಕೆ ಸಹಕಾರ ನೀಡುವಂತಹ ವನಸಿರಿ ಫೌಂಡೇಶನ್ ರವರ ಕಾರ್ಯ ಶ್ಲಾಘನೀಯ ಪ್ರಶಂಶಿಸಿದರು.

ಇದೇ ಸಂದರ್ಭದಲ್ಲಿ ಶಾಲೆಯ ಶಿಕ್ಷಕರಾದ ಲಿಂಗಪ್ಪ ಪಪ್ಪಿ,ಪಡಿಯಪ್ಪ ಮುಶಿಗೇರಿ,ವಿಜಯಲಕ್ಷ್ಮಿ ಢವಳಗಿ, ನಾಗರಾಜ ಮಾಂಡ್ರೆ,ಶರಣಮ್ಮ ಮತ್ತು ಮಕ್ಕಳು ಹಾಜರಿದ್ದರು.

## ಬಿಸಿಲು; ಗರ್ಭಿಣಿಯರು ಮಧ್ಯಾಹ್ನ ಅವಧಿಯಲ್ಲಿ ಮನೆಯಿಂದ ಹೊರಗಡೆ ಓಡಾಡದಿರಿ: ಡಿಹೆಚ್‌ಒ ಯಲ್ಲಾ ರಮೇಶ್ ಬಾಬು



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಏ.01-ಜಿಲ್ಲೆಯಲ್ಲಿ ಬಿಸಿಲಿನ ಪ್ರಖರತೆ ಹೆಚ್ಚಾಗಿ ಕಂಡುಬರುತ್ತಿರುವ ಹಿನ್ನಲೆಯಲ್ಲಿ ಗರ್ಭಿಣಿ ಮಹಿಳೆಯರು ಮಧ್ಯಾಹ್ನ ಅವಧಿಯಲ್ಲಿ ಮನೆಯಿಂದ ಹೊರಗಡೆ ಓಡಾಡಬಾರದು. ಹೆಚ್ಚಾಗಿ ನೀರು ಕುಡಿಯಲು ಆದ್ಯತೆ ನೀಡಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಹೇಳಿದರು.

ಮಂಗಳವಾರದಂದು ಕುರುಗೋಡು ತಾಲ್ಲೂಕಿನ ಕೋಳೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಸಾರ್ವಜನಿಕರೊಂದಿಗೆ ಮಾತನಾಡಿದ ಅವರು, ಮಧ್ಯಾಹ್ನ 12 ರಿಂದ 3 ಗಂಟೆ ಅವಧಿಯಲ್ಲಿ ಬಿಸಿಲಿನ ತೀವ್ರತೆಯು ಹೆಚ್ಚು ಕಂಡುಬರುತ್ತಿದ್ದು, ಗರ್ಭಿಣಿಯರು ಮನೆಯಲ್ಲಿಯೇ ಇರುವ ಮೂಲಕ ಆರೋಗ್ಯದ ಕಾಳಜಿಗೆ ಕುಟುಂಬದ ಸದಸ್ಯರು ಸಹ ಮತುವರ್ಜಿ ವಹಿಸಬೇಕು ಎಂದು ತಿಳಿಸಿದರು.

ಗರ್ಭಿಣಿ ಮಹಿಳೆಯು ಮಧ್ಯಾಹ್ನದ ಅವಧಿಯಲ್ಲಿ ಮನೆಯಿಂದ ಹೊರಗಡೆ ಕೆಲಸ ಕಾರ್ಯಗಳನ್ನು ಮಾಡಬಾರದು. ದೇಹದಲ್ಲಿ ನೀರಿನಾಂಶ ಕೊರತೆಯಿಂದ ಆಗಬಹುದಾದ ಅನಾನುಕೂಲತೆಗಳನ್ನು ತಡೆಗಟ್ಟಲು ಸಹಕರಿಸಬೇಕು ಎಂದರು.

ಬೇಸಿಗೆ ಹಿನ್ನಲೆಯಲ್ಲಿ ಬಾಣಂತಿಯರು ಸಹ ನವಜಾತ ಶಿಶುವಿಗೆ ತಾಯಿ ಹಾಲು ನೀಡಬೇಕು. ಬೇರೆ ಏನನ್ನೂ ಕೊಡಬಾರದು. ತಾಯಿ ಹಾಲಿನಲ್ಲಿ ಸಾಕಷ್ಟು ನೀರಿನಾಂಶ ಇರುವುದರಿಂದ ದಿನಕ್ಕೆ ಕನಿಷ್ಟ 10 ರಿಂದ 12 ಬಾರಿ ಅಥವಾ ಮಗು ಅತ್ತಾಗಲೆಲ್ಲಾ ಹಾಲುಣಿಸಬೇಕು ಎಂದು ಸೂಚಿಸಿದರು.

ಈಗಾಗಲೇ ಆಸ್ಪತ್ರೆಗೆ ಬರುವ ರೋಗಿಗಳು ಮತ್ತು ಅವರ ಕುಟುಂಬದ ಸದಸ್ಯರ ನಿರ್ಜಲೀಕರಣ ತಡೆಗಾಗಿ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಓ.ಆರ್.ಎಸ್. ಕಾರ್ನರ್ ಮಾಡಲಾಗಿದ್ದು, ಆಸ್ಪತ್ರೆ ಭೇಟಿ ಸಂದರ್ಭದಲ್ಲಿ ಓ.ಆರ್.ಎಸ್ ದ್ರಾವಣ ಸೇವಿಸುವ ಮೂಲಕ ದೇಹದಲ್ಲಿ ನಿರ್ಜಲೀಕರಣದಿಂದಾಗುವ ಅಪಾಯಗಳನ್ನು ತಪ್ಪಿಸಬಹುದಾಗಿದೆ ಎಂದು ತಿಳಿಸಿದರು.

ಈಗಾಗಲೇ ಬಿಸಿಲಿನ ಶಾಖಾಘಾತದಿಂದ ಸಂಭವಿಸಬಹುದಾದ ತೊಂದರೆಯನ್ನು ತಪ್ಪಿಸಲು ಮತ್ತು ತಕ್ಷಣ ಚಿಕಿತ್ಸೆ ನೀಡಲು ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ತಲಾ 01 ಬೆಡ್ ಮತ್ತು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ 02 ಬೆಡ್ ಕಾಯ್ದಿರಿಸಲಾಗಿದೆ ಎಂದು ಡಿಹೆಚ್‌ಒ ಅವರು ಹೇಳಿದರು.

ಜಿಲ್ಲೆಯ ಗ್ರಾಮ ಮಟ್ಟದಲ್ಲಿರುವ ಆಯುಷ್ಮಾನ್ ಆರೋಗ್ಯ ಮಂದಿರ ಸೇರಿದಂತೆ ಎಲ್ಲ ಆರೋಗ್ಯ ಕೇಂದ್ರಗಲ್ಲಿ ಬಿಸಿಲಿನ ಶಾಖಾಘಾತದ ಚಿಕಿತ್ಸೆಗೆ ಸಂಬಂಧಸಿದಂತೆ ಅಗತ್ಯ ತುರ್ತು ಔಷಧಿಗಳನ್ನು ಕೊರತೆಯಾಗದಂತೆ ದಾಸ್ತಾನು ಇರಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ತಾರನಾಥ ಆಯುರ್ವೇದ ಕಾಲೇಜಿನ ಪ್ರಾಂಶುಪಾಲರಾದ ಡಾ.ಶ್ರೀಧರ್, ಆಯುಷ್ ಪ್ರಾಧ್ಯಾಪಕರಾದ ಡಾ.ರಾಜಶೇಖರ್ ಗಾಣಿಗೇರ್, ಡಾ.ಫಣೀಂದ್ರ,ಡಾ.ಕಲ್ಯಾಣಿ,ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಕಚೇರಿ ಅಧೀಕ್ಷಕ ಬಸವರಾಜ್, ಆರೋಗ್ಯ ನಿರೀಕ್ಷಣಾಧಿಕಾರಿ ಕೆ.ವಿರೇಶ್, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಶರಣಮ್ಮ,ಸಿದ್ದಮ್ಮ,ಫಾರ್ಮಸಿಸ್ಟ್ ಕ್ರಿಷ್ಣಮೂರ್ತಿ,ಆಶಾಕಾರ್ಯಕರ್ತೆ ರಾಧ ಸೇರಿದಂತೆ ತಾಯಂದಿರು ಹಾಗೂ ಸಾರ್ವಜನಿಕರು ಇದ್ದರು.

## ಭಾರತೀಯ ರೆಡ್ ಕ್ರಾಸ್ ಸಂಸ್ಥೆಗೆ ಸಭಾಪತಿಯಾಗಿ ರಾಜೀವ ಶೆಟ್ಟಿ, ಉಪ ಸಭಾಪತಿಯಾಗಿ ಕೊಪ್ಪಳದ ಶ್ರೀನಿವಾಸ ಹ್ಯಾಟಿ ಆಯ್ಕೆ




ಮಲ್ಲಮ್ಮ ನುಡಿ ವಾರ್ತೆ


ಕೊಪ್ಪಳ : ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಬೆಂಗಳೂರು ರಾಜ್ಯಶಾಖೆಗೆ ಮೂರು ವರ್ಷಗಳ ಅವಧಿಗೆ ಸಭಾಪತಿ ಹಾಗೂ ಉಪಸಭಾಪತಿ ಹುದ್ದೆಗೆ ಮಂಗಳವಾರ ರೆಡ್ ಕ್ರಾಸ್ ಸಂಸ್ಥೆ ಕಛೇರಿಯಲ್ಲಿ ಚುನಾವಣೆ ಜರುಗಿತು.

ಚುನಾವಣೆಯಲ್ಲಿ ಸಭಾಪತಿಯಾಗಿ ಉಡುಪಿ ಶಾಖೆಯ ರಾಜೀವ ಶೆಟ್ಟಿ ಹಾಗೂ ಉಪಸಭಾಪತಿಯಾಗಿ ಕೊಪ್ಪಳ ಶಾಖೆಯ ಡಾ.ಶ್ರೀನಿವಾಸ ಹ್ಯಾಟಿ ಆಯ್ಕೆಯಾಗಿದ್ದಾರೆ.

ಸಭಾಪತಿ ಹುದ್ದೆಗೆ ಮೂರು ಜನ ಆಕಾಂಕ್ಷಿಗಳು ಸ್ಪರ್ಧಿಸಿದ್ದರು. ಉಪ ಸಭಾಪತಿ ಹುದ್ದೆಗೆ ಇಬ್ಬರು ಸ್ಪರ್ಧಿಸಿದ್ದರು. ಒಟ್ಟು 30 ಸದಸ್ಯರು ತಮ್ಮ ಮತ ಚಲಾಯಿಸಿದರು. ಅದರಲ್ಲಿ ಸಭಾಪತಿ ಆಯ್ಕೆಯಲ್ಲಿ ಬಾಗಲಕೋಟೆ ಶಾಖೆಯ ಆನಂದ ಜಿಗಜಿನ್ನಿ, ಶಿವಮೊಗ್ಗ ಶಾಖೆಯ ಎಸ್.ಪಿ. ದಿನೇಶ ಹಾಗೂ ಉಡುಪಿ ಶಾಖೆಯ ಬಸ್ರೂರು ರಾಜೀವ ಶೆಟ್ಟಿ ಈ ಮೂರು ಜನರೂ ತಲಾ 10 ಮತಗಳನ್ನು ಪಡೆದರು. ಇದರಲ್ಲಿ ಕೊನೆಗೆ ಚೀಟಿ ಎತ್ತಿದಾಗ ಉಡುಪಿ ಶಾಖೆಯ ಬಸ್ರೂರು ರಾಜೀವ ಶೆಟ್ಟಿ ಸಭಾಪತಿಯಾಗಿ ಆಯ್ಕೆಯಾದರು.

ಉಪ ಸಭಾಪತಿಗೆ ಇಬ್ಬರು ಸ್ಪರ್ಧಿಸಿದ್ದರು. ಇದರಲ್ಲಿ ಬಳ್ಳಾರಿಯ ಎಂ.ಎ. ಶಕೀಬ್ 11 ಮತಗಳನ್ನು ಪಡೆದರೆ,ಕೊಪ್ಪಳ ಶಾಖೆಯ ಡಾ.ಶ್ರೀನಿವಾಸ ಹ್ಯಾಟಿ 19 ಮತಗಳನ್ನು ಪಡೆದು ಜಯಶಾಲಿಯಾಗಿದ್ದಾರೆ. ಡಾ.ಶ್ರೀನಿವಾಸ ಹ್ಯಾಟಿ ಇವರ ಆಯ್ಕೆಗೆ ಕೊಪ್ಪಳ ಭಾರತೀಯ ರೆಡ್ ಕ್ರಾಸ್ ಪದಾಧಿಕಾರಿಗಳು, ಸ್ನೇಹಿತರು ಹರ್ಷ ವ್ಯಕ್ತಪಡಿಸಿದ್ದಾರೆ.

# ಯತ್ನಾಳ ಉಚ್ಚಾಟನೆ: ಬೆಂಬಲಿಗರ ಖಂಡನೆ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ಬಿಜೆಪಿಯಿಂದ ಶಾಸಕ ಬಸನಗೌಡ ಪಾಟೀಲ ಯತ್ನಾಳ ಉಚ್ಚಾಟನೆ ಖಂಡಿಸಿ ತಾಲೂಕಿನ ಮಿಣಜಗಿ ಗ್ರಾಮಸ್ಥರು ಹಾಗೂ ಯತ್ನಾಳ ಅಭಿಮಾನಿಗಳು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿ,ಟೈರ್ ಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ಮಂಗಳವಾರ ತಾಳಿಕೋಟಿ ತಾಲೂಕಿನ ಮಿಣಜಗಿ ಗ್ರಾಮದಲ್ಲಿ ನೂರಾರು ಸಂಖ್ಯೆಯಲ್ಲಿ ಸೇರಿದ ಯತ್ನಾಳರ ಅಪಾರ ಅಭಿಮಾನಿಗಳು ಗ್ರಾಮದ ಶ್ರೀ ಬಸವೇಶ್ವರ ವೃತ್ತದಿಂದ ಪ್ರತಿಭಟನಾ ಮೆರವಣಿಗೆ ಆರಂಭಿಸಿ ಅಲ್ಲಿಂದ ಗ್ರಾಮ ಪಂಚಾಯಿತಿ ಮಾರ್ಗ, ಚೆನ್ನಮ್ಮ ವೃತ್ತ,ಸಂತ ಸೇವಾಲಾಲ ದೇವಸ್ಥಾನದ ಮೂಲಕ ಹಾಯ್ದು ನಂತರ ಮತ್ತೆ ಚೆನ್ನಮ್ಮ ವೃತ್ತಕ್ಕೆ ತಲುಪಿದರು. ಚೆನ್ನಮ್ಮ ವೃತ್ತದಲ್ಲಿ ಟೈರ್ ಗೆ ಬೆಂಕಿ ಹಚ್ಚಿ ಕೆಲಹೊತ್ತು ರಸ್ತಾರೂಕೋ ನಡೆಸಿ, ಯತ್ನಾಳ ಪರ ಘೋಷಣೆ ಕೂಗಿ ಅವರ ಉಚ್ಚಾಟನೆ ನಿರ್ಧಾರವನ್ನು ಖಂಡಿಸಿದರು. ನಂತರ ಅಲ್ಲಿಯೇ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ವಿಜಯಪುರ ಜಿಲ್ಲಾ ಪಂಚಾಯತ ಮಾಜಿ ಉಪಾಧ್ಯಕ್ಷ ಪ್ರಭುಗೌಡ ದೇಸಾಯಿ ಮಾತನಾಡಿ ಉತ್ತರ ಕರ್ನಾಟಕದಲ್ಲಿ ಬಿಜೆಪಿ ಪಕ್ಷವನ್ನು ಕಟ್ಟುವಲ್ಲಿ ಯತ್ನಾಳ ಅವರ ಶ್ರಮ ಅಪಾರವಾಗಿದೆ,ಅವರೊಬ್ಬ ಜನನಾಯಕ, ಬಿಜೆಪಿ ಕಾರ್ಯಕರ್ತರನ್ನು, ಬಿಜೆಪಿ ಕಟ್ಟಿ ಬೆಳೆಸಿದವರನ್ನು ಕೈಬಿಡಬಾರದು, ನಿನ್ನೆ ಮೊನ್ನೆ ಪಕ್ಷಕ್ಕೆ ಬಂದ ತಾಲೂಕಿನ ನಾಯಕರೊಬ್ಬರು ಅವರ ಕುರಿತು ಹಗುರವಾಗಿ ಮಾತನಾಡಿದ್ದಾರೆ, ಅವರ ಕೆಟ್ಟ ವ್ಯಕ್ತಿತ್ವದಿಂದಾಗಿ ಅವರು ಈಗ ಎಲ್ಲಿದ್ದಾರೆ ಎಂಬುದು ಎಲ್ಲರಿಗೂ ಗೊತ್ತು, ಯತ್ನಾಳರ ಕುರಿತು ಮಾತನಾಡುವಷ್ಟು ಯೋಗ್ಯತೆ ಅವರಿಗಿಲ್ಲ ಯತ್ನಾಳ ಗೌಡರು ಈ ರಾಜ್ಯ ಕಂಡ ಧೀಮಂತ ನಾಯಕ ಎಂಬುದು ಎಲ್ಲರಿಗೂ ಗೊತ್ತು ಎಂದರು. ಮುಖಂಡ ಮಡುಸಾಹುಕಾರ ಬಿರಾದಾರ ಮಾತನಾಡಿ ಹಿಂದುತ್ವವನ್ನೇ ಉಸಿರಾಗಿಸಿಕೊಂಡಿರುವ ಬಸನಗೌಡ ಪಾಟೀಲ ಯತ್ನಾಳ ಅವರು ಹಿಂದೂಗಳು ಸಂಕಷ್ಟದಲ್ಲಿದ್ದಾಗ ಧೈರ್ಯ ತುಂಬುವ ಜೊತೆಗೆ ಅವರ ನೆರವಿಗೆ ನಿಲ್ಲುತ್ತಾರೆ,ಅವರ ಉಚ್ಚಾಟನೆ ಹಿಂದೂತ್ವವನ್ನೇ ಪಕ್ಷದಿಂದ ಹೊರಹಾಕಿದಂತಾಗಿದೆ, ಇದರ ಆಧಾರದಲ್ಲಿಯೇ ಬಿಜೆಪಿ ರಾಷ್ಟ್ರ ಮತ್ತು ರಾಜ್ಯದಲ್ಲಿ ಅಧಿಕಾರ ಹಿಡಿದಿದೆ. ಬಿಜೆಪಿಯ ವರಿಷ್ಠರು ರಾಜ್ಯದ ಅಧ್ಯಕ್ಷರು ಹಿರಿಯರು ಈ ನಿರ್ಧಾರದ ಕುರಿತು ಮರುಪರಿಶೀಲನೆ ನಡೆಸಬೇಕು ಇಲ್ಲದಿದ್ದರೆ ಲಕ್ಷಾಂತರ ಕಾರ್ಯಕರ್ತರು ಬೀದಿಗಿಳಿದು ಹೋರಾಟವನ್ನು ನಡೆಸುತ್ತಾರೆ ಎಂದರು. ಪುರಸಭೆ ಮಾಜಿ ಸದಸ್ಯ ಸುರೇಶ ಹಜೇರಿ, ಮಹಾಂತೇಶ ಮುರಾಳ, ಗುರಪ್ಪಗೌಡ ಪಾಟೀಲ, ಜಿ.ಎಂ.ಪಾಟೀಲ ಮಾತನಾಡಿ ಯತ್ನಾಳರ ಉಚ್ಚಾಟನೆಯನ್ನು ಉಗ್ರವಾಗಿ ಖಂಡಿಸಿದರು. ಪ್ರತಿಭಟನಾ ಮೆರವಣಿಗೆಯಲ್ಲಿ ಯತ್ನಾಳರ ಅಭಿಮಾನಿಗಳಾದ ಶರಣು ಬಾಗೇವಾಡಿ,ಮಲ್ಲನಗೌಡ ಬಿರಾದಾರ,ಮಲ್ಲನಗೌಡ ಪ್ಯಾಟನ್, ಪುನೀತಗೌಡ ಬಿರಾದಾರ,ಶ್ರೀಶೈಲ ಹಡಪದ,ಕೆ.ಎ.ಪಾಟೀಲ,ಸಿ.ಬಿ.ರೂಡಗಿ, ಜಗು ಕವಿತಾಳ, ಗುರಪ್ಪಗೌಡ ಬಿ. ಪಾಟೀಲ,ಬಸನಗೌಡ ಬಿರಾದಾರ, ಈರಯ್ಯ ಹಿರೇಮಠ, ಪ್ರಭುಗೌಡ ಪಾಟೀಲ ಬಳಗಾನೂರ,ಮಂಜು ಶೆಟ್ಟಿ,ರಾಮು ಜಗತಾಪ,ರತನಸಿಂಗ್ ಕೊಕಟನೂರ,ಅಪ್ಪುಗೌಡ ಪಾಟೀಲ, ತಾಳಿಕೋಟಿ,ಬಳಗಾನೂರ, ಮಡಿಕೇಶ್ವರ, ಕುಂಟೋಜಿ,ಹಿರೂರ ಹಾಗೂ ಕೂಚಬಾಳ ಗ್ರಾಮಗಳ ಯತ್ನಾಳ ಅಭಿಮಾನಿಗಳು ಭಾಗವಹಿಸಿದ್ದರು.

# ಬೆನಕಟ್ಟಿಯಲ್ಲಿ ಯಲ್ಲಾಲಿಂಗ ಜಾತ್ರಾ ಮಹೋತ್ಸವ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಎ.1-ಬೆನಕಟ್ಟಿ ಗ್ರಾಮದಲ್ಲಿ ರಾಮನವಮಿ ನಿಮಿತ್ತ 5 ದಿನಗಳ ಕಾಲ ಯಲ್ಲಾಲಿಂಗ ಮಹಾರಾಜರ ಜಾತ್ರಾಮಹೋತ್ಸವ ಜರುಗಲಿದೆ.

ಯಲ್ಲಾಲಿಂಗ ಸಾಂಸ್ಕೃತಿಕ ಯುವಕ ಸಂಘದ ವತಿಯಿಂದ ನಡೆಯುವ ಜಾತ್ರಾಮಹೋತ್ಸವದಲ್ಲಿ ಎಪ್ರೀಲ್ 5 ರವರೆಗೆ ಆಧ್ಯಾತ್ಮಿಕ ಚಿಂತಕ ಪ್ರದೀಪ ಗುರೂಜಿ ಅವರಿಂದ ಪ್ರವಚನ ನಡೆಯಲಿದೆ. ವೀರಯ್ಯಜ್ಜ ಕಲಕೇರಿ ಸಾನಿಧ್ಯ ವಹಿಸುವರು.

ಎ.6 ರಂದು ಭಾನುವಾರ ಬೆಳಿಗ್ಗೆ 7 ಗಂಟೆಗೆ ಯಲ್ಲಾಲಿಂಗ ಮಹಾರಾಜರ ಮೂರ್ತಿಗೆ ರುದ್ರಾಭಿಷೇಕ,ಪೂಜೆ ನೆರವೇರಲಿದ್ದು, ಮುಂಜಾನೆ 10 ಗಂಟೆಗೆ ಮಹಿಳೆಯರ ಪೂರ್ಣಕುಂಭ, ಡೊಳ್ಳು, ಕಳಸಾರತಿಯೊಂದಿಗೆ ಯಲ್ಲಾಲಿಂಗ ಮಹಾರಾಜರ ಮೂರ್ತಿಯ ಪಲ್ಲಕ್ಕಿ ಉತ್ಸವ ಜರುಗಲಿದೆ. ಮಧ್ಯಾಹ್ನ 1 ಗಂ-ಟೆಗೆ ಸೈನಿಕ ಸಿದ್ದಪ್ಪ ಕೆಲೂಡಿ ಅವರಿಂದ ಅನ್ನ ಸಂತರ್ಪಣೆ ನಡೆಯಲಿದೆ.

ಅಂದೇ ರಾತ್ರಿ ಯುವಕ ಸಂಘದವರಿಂದ 'ರೈತ ನಕ್ಕರೆ ಜಗವೆಲ್ಲ ಸಕ್ಕರೆ' ಸಾಮಾಜಿಕ ನಾಟಕ ಪ್ರದರ್ಶನಗೊಳ್ಳಲಿದ್ದು, ಜಾತ್ರೆಯ ಪ್ರಯುಕ್ತ ಟಗರಿನ ಕಾಳಗ ಸ್ಪರ್ಧೆ ನಡೆಯಲಿದೆ ಎಂದು ಯಲ್ಲಾಲಿಂಗ ಸಾಂಸ್ಕೃತಿಕ ಯುವಕ ಸಂಘ ತಿಳಿಸಿದೆ.

# ಇಂದು ಪೊಲೀಸ್ ಧ್ವಜ ದಿನಾಚರಣೆ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಏಪ್ರೀಲ್.01-ರಾಯಚೂರು ಜಿಲ್ಲಾ ಪೊಲೀಸ್ ಇಲಾಖೆಯಿಂದ ಏಪ್ರೀಲ್ 02ರ ಬೆಳಿಗ್ಗೆ 8ಗಂಟೆಗೆ ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಪೊಲೀಸ್ ಧ್ವಜ ದಿನಾಚರಣೆ ಹಮ್ಮಿಕೊಳ್ಳಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಿಯಶಸ್ವಿಗೊಳಿಸಬೇಕೆಂದು ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಎಂ.ಪುಟ್ಟಮಾದಯ್ಯ ಅವರು ಕೋರಿದ್ದಾರೆ.

ಮುಖ್ಯ ಅತಿಥಿಗಳಾದ ನಿವೃತ್ತ ಆರಕ್ಷಕ ನಿರೀಕ್ಷಕರಾದ ಶ್ರೀ ಹಸನ್ ಸಾಬ್ ಭಾಗವಹಿಸಲಿದ್ದು, ಲಿಂಗಸೂಗೂರು ಡಿಎಸ್‌ಪಿಯಾದ ದತ್ತಾತ್ರೇಯ ಕಾರ್ನಾಡ್ ಅವರು ವಂದನಾರ್ಪಣೆಯನ್ನು ಮಾಡಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಜಿಲ್ಲೆಯ 179 ಗ್ರಾಮ ಪಂಚಾಯತಿಗಳಲ್ಲಿ ವಲಸೆ ಯಾಕ್ರಿ ನಿಮ್ಮೂರಲ್ಲೆ ಉದ್ಯೋಗ ಖಾತ್ರಿ ಅಭಿಯಾನ**

# ನರೇಗಾ ಕಾರ್ಮಿಕರ ಕೂಲಿ ಮೊತ್ತ 349ರೂ. ನಿಂದ 370ರೂ. ಏರಿಕೆ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಏಪ್ರೀಲ್.01-ಬೇಸಿಗೆ ಅವಧಿಯಲ್ಲಿ ಜಿಲ್ಲೆಯ ಗ್ರಾಮೀಣ ಪ್ರದೇಶದ ಜನರಿಗೆ ತಮ್ಮ ಊರಲ್ಲಿ ಕೆಲಸವಿಲ್ಲದ ಕಾರಣದಿಂದಾಗಿ ನಗರ ಪ್ರದೇಶಗಳಿಗೆ ಗುಳೆ ಹೋಗುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿದೆ. ಈಗಾಗಲೇ ಮಾರ್ಚ್ 15 ರಿಂದ ಮೇ ಅಂತ್ಯದ ಎರಡು ತಿಂಗಳವರೆಗೆ ನರೇಗಾ ಯೋಜನೆಯಡಿ ವಲಸೆ ಯಾಕ್ರಿ ನಿಮ್ಮೂರಲ್ಲೆ ಉದ್ಯೋಗ ಖಾತ್ರಿ ಹಾಗೂ ಸ್ತ್ರೀ-ಚೇತನ ಅಭಿಯಾನದಡಿ ಈ ಬಾರಿ ಹೆಚ್ಚು ಪ್ರಚಾರ ಕಾರ್ಯಕ್ರಮಗಳನ್ನು ಮಾಡಿ ಕೂಲಿಕಾರರಿಗೆ ನರೇಗಾದಿಂದ ಸಿಗುವ ಅಗತ್ಯ ಸೌಲಭ್ಯಗಳ ಮಾಹಿತಿ ಒದಗಿಸಲಾಗುತ್ತಿದೆ.

ಏನೆಲ್ಲಾ ಮಾಡಬಹುದು?: ಅಂತರ್ಜಲ ಚೇತನ ಸಂರಕ್ಷಣೆ ಕಾಮಗಾರಿ, ರೈತರ ಕ್ರಿಯಾ ಯೋಜನೆ, ಹಸಿರೀಕರಣ ಕಾಮಗಾರಿ, ಶಾಲಾಭಿವೃದ್ಧಿ ಕಾಮಗಾರಿಗಳು, ಸಂಜೀವಿನಿ ಶೆಡ್ ನಿರ್ಮಾಣ, ಅಂಗನವಾಡಿ ಕಟ್ಟಡಗಳ ನಿರ್ಮಾಣ, ರಸ್ತೆ ಕಾಮಗಾರಿ, ಚರಂಡಿ ಹಾಗೂ ಇನ್ನಿತರ ಸಮುದಾಯ ಮತ್ತು ವೈಯುಕ್ತಿಕ ಕಾಮಗಾರಿಗಳನ್ನು ಸೇರಿಸಲಾಗಿದೆ. ಇದರಿಂದ ಜನರಿಗೆ, ರೈತರಿಗೆ ಹಾಗೂ ಕೆಲಸ ಮಾಡುವವರಿಗೆ ಪ್ರಯೋಜನ ಸಿಗುತ್ತಿದೆ.

ಕೂಲಿ ಹೆಚ್ಚಳ: ಈ ಯೋಜನೆಯಡಿ ಆಯಾ ರಾಜ್ಯಗಳಿಗೆ ಅನುಗುಣವಾಗಿ ಕೂಲಿಯನ್ನು ನಿಗದಿ ಮಾಡಲಾಗಿದೆ. ಇದೀಗ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಮನರೇಗಾ ಯೋಜನೆ ಕೂಲಿ ಹೆಚ್ಚಳ ಮಾಡಿ ಆದೇಶ ಹೊರಡಿಸಿದೆ. ಇದರನ್ವಯ ಕರ್ನಾಟಕದಲ್ಲಿ 2024-25ನೇ ಸಾಲಿನಲ್ಲಿ 349ರೂ.ಗಳಿಂದ ಕೂಲಿಯನ್ನು 2025-26ನೇ ಸಾಲಿನಲ್ಲಿ 370ರೂ.ಗಳಿಗೆ ಕೂಲಿ ಹೆಚ್ಚಳ ಮಾಡಿದೆ. ಏಪ್ರಿಲ್ 1, 2025 ರಿಂದ 370ರೂ.ಗಳ ಕೂಲಿ ಜಾರಿಯಲ್ಲಿರುತ್ತದೆ.


ಮಹಿಳೆಯರ ಭಾಗವಹಿಸುವಿಕೆ ಶೇ60 ಪ್ರಮಾಣ ಹೆಚ್ಚಿಸಲು ಕ್ರಮ; ಜಿಲ್ಲೆಯ 179 ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಪ್ರತಿಯೊಂದು ಮನೆಗೆ ಭೇಟಿ ನೀಡಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ದೊರೆಯುವ ಕೂಲಿ ಮೊತ್ತ, ದಿನದ ಕೂಲಿ ಪಡೆಯಲು ಮಾಡಬೇಕಾದ ಕ್ರಮ, ಕೆಲಸದ ಪ್ರಮಾಣ ಮತ್ತು ಕೆಲಸದ ಅವಧಿ, ಯೋಜನೆಯಡಿ ದೊರೆಯುವ ಸೌಲಭ್ಯಗಳು ಮತ್ತು ಅರ್ಹತೆಗಳು, ಕಾಮಗಾರಿ ಪ್ರಮಾಣದಲ್ಲಿ ಹಿರಿಯ ನಾಗರೀಕರಿಗೆ ಮತ್ತು ವಿಶೇಷ ಚೇತನರಿಗೆ ಶೇ.50ರಷ್ಟು ರಿಯಾಯಿತಿ, ಕಾಮಗಾರಿ ಸ್ಥಳದಲ್ಲಿ ಒದಗಿಸಲಾಗುವ ಸೌಲಭ್ಯಗಳು, ಅಕುಶಲ ಮಹಿಳೆಯರು ಮತ್ತು ಲಿಂಗತ್ವ ಅಲ್ಪಸಂಖ್ಯಾತರುಗಳಿಗೆ ನಿರ್ವಹಿಸುವ ಕೆಲಸಕ್ಕೆ ಅಥವಾ ಕೂಲಿಕಾರ್ಮಿಕರಿಗೆ ಹೆಚ್ಚುವರಿಯಾಗಿ ಶೇ.20ರಷ್ಟು ಕೆಲಸದ ಪ್ರಮಾಣದಲ್ಲಿ ರಿಯಾಯಿತಿ ಜೊತೆಗೆ ಮಹಿಳೆಯರ ಭಾಗವಹಿಸುವಿಕೆಯನ್ನು ಶೇ.60ರಷ್ಟು ಹೆಚ್ಚಿಸುವುದು, ಅನುಷ್ಠಾನದ ಮಹತ್ವ ಮತ್ತು ಅಗತ್ಯತೆಯ ಕುರಿತ ಪ್ರಮುಖ ಮಾಹಿತಿಯನ್ನು ಗ್ರಾಮಸ್ಥರಿಗೆ, ಹಿರಿಯ ನಾಗರಿಕರು, ಮಹಿಳೆಯರು, ದುರ್ಬಲ ವರ್ಗದವರು, ಲಿಂಗತ್ವ ಅಲ್ಪಸಂಖ್ಯಾತರು, ಸ್ವ-ಸಹಾಯ ಸಂಘಗಳ ಸದಸ್ಯರು ಹಾಗೂ ರೈತರಿಗೆ ತಿಳಿಸುವ ಹಾಗೂ ಕೆಲಸ ಮತ್ತು ಕಾಮಗಾರಿಯ ಬೇಡಿಕೆಯನ್ನು ಸಂಗ್ರಹಿಸುವ ಪ್ರಕ್ರಿಯೆ ಇದಾಗಿದೆ.

ಸಾರ್ವಜನಿಕ ಸ್ಥಳಗಳಲ್ಲಿ ಗೋಡೆ ಬರಹ: ವಲಸೆ ಬೇಡ ನಿಮ್ಮೂರಲ್ಲೇ ಖಾತ್ರಿ ಯೋಜನೆಯಡಿ 100 ದಿವಸ ಕೆಲಸ ಪಡೆಯಿರಿ, ಗಂಡು ಮತ್ತು ಹೆಣ್ಣಿಗೆ ಸಮಾನ ಅವಕಾಶ-ಸಮಾನ ಕೂಲಿ ಪ್ರತಿ ದಿನಕ್ಕೆ ರೂ.370, ನಿಮ್ಮ ಜಮೀನಿನಲ್ಲಿ ಮಳೆ ನೀರು ಸಂಗ್ರಹಕ್ಕೆ ಕಂಡಕ ಬದು/ಕೃಷಿ ಹೊಂಡ ನಿರ್ಮಿಸಿಕೊಳ್ಳಲು ನೆರವು ಪಡೆಯಿರಿ, ಲಾಭದಾಯಕ ತೋಟಗಾರಿಕೆ/ರೇಷ್ಮೆ ಕೃಷಿ ವಿಸ್ತರಣೆ 5,00,000ರೂ. ವರೆಗೆ ಆರ್ಥಿಕ ನೆರವು ಪಡೆಯಿರಿ, ಉದ್ಯೋಗ ಖಾತ್ರಿ, ನಿಮ್ಮ ಮಕ್ಕಳ ಭವಿಷ್ಯದ ಖಾತ್ರಿ., ಉದ್ಯೋಗ ಖಾತ್ರಿ ಕೈ ಜೋಡಿಸೋಣ ಸುಂದರ ಶಾಲೆ ನಿರ್ಮಿಸೋಣ., ವಲಸೆ ಯೋಚನೆ ಯಾಕ್ರೀ ಉದ್ಯೋಗ ಇಲ್ಲೆ ಖಾತ್ರಿ., ಪ್ರತಿ ಹೊಲದಲ್ಲಿ ಬದು ರೈತನ ಮೊಗದಲ್ಲಿ ನಗು ಸೇರಿದಂತೆ ಇತರೆ ಗೋಡೆ ಬರಹಗಳ ಮೂಲಕ ಸಾರ್ವಜನಿಕ ಸ್ಥಳಗಳಲ್ಲಿ ಜಾಗೃತಿ ಮೂಡಿಸಲಾಗುತ್ತದೆ.

ದಿವ್ಯಾಂಗದ ಚಿಂತೆ ಬೇಡ; ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತ್ ವ್ಯಾಪ್ತಿಯ ವಿಶೇಷ ಚೇತನರು ಕೆಲಸಕ್ಕಾಗಿ ತಮ್ಮ ಗ್ರಾಮ ಪಂಚಾಯತಿಗೆ ಭೇಟಿ ನೀಡಿ ನಮೂನೆ-1ರಲ್ಲಿ ನೋಂದಾಯಿಸಿಕೊಂಡು ವಿಶೇಷಚೇತನರಿಗಾಗಿ ಇರುವ ಪ್ರತ್ಯೇಕ ಉದ್ಯೋಗ ಚೀಟಿಯನ್ನು ಪಡೆದು ನರ್ಸರಿ ಅಭಿವೃದ್ಧಿ, ಗಿಡ ನೆಡುವುದು, ಗಿಡಗಳಿಗೆ ನೀರು ಹಾಯಿಸುವುದು, ಮಕ್ಕಳ ಪಾಲನೆಯಂತಹ ಕೆಲಸಗಳಲ್ಲಿ ಆದ್ಯತೆ ಪಡೆಯಬಹುದಾಗಿದೆ.

ಏಕೀಕೃತ ಉಚಿತ ಸಹಾಯವಾಣಿ; ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಇಲಾಖೆಯಡಿ ಮಾಹಿತಿಗಾಗಿ ಮತ್ತು ಕುಂದುಕೊರತೆಗಳ ನಿವಾರಣೆಗಾಗಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಯೋಜನೆಯಡಿ ಪರಿಹಾರ ಹಾಗೂ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಸಾರ್ವಜನಿಕರು ಒಂದೇ ಇಲಾಖೆಯ ವಿವಿಧ ಯೋಜನೆಗಳ ಮಾಹಿತಿ ಮತ್ತು ಕುಂದುಕೊರತೆ ನಿವಾರಣೆಗಾಗಿ ಏಕೀಕೃತ ಸಹಾಯವಾಣಿ ಸಂಖ್ಯೆ: 8277506000ಅನ್ನು ಸ್ಥಾಪಿಸಲಾಗಿದೆ.

ಕೋಟ್;01- ನರೇಗಾ ಯೋಜನೆಯಡಿ ವಲಸೆ ಯಾಕ್ರಿ ನಿಮ್ಮೂರಲ್ಲೆ ಉದ್ಯೋಗ ಖಾತ್ರಿ ಹಾಗೂ ಸ್ತ್ರೀ-ಚೇತನ ಅಭಿಯಾನದಡಿ ಹೆಚ್ಚು ಪ್ರಚಾರ ಕಾರ್ಯಕ್ರಮಗಳನ್ನು ಮಾಡಿ ಜಿಲ್ಲೆಯ 179 ಗ್ರಾಮ ಪಂಚಾಯತಿಯ ಕೂಲಿಕಾರರಿಗೆ ನರೇಗಾದಿಂದ ಸಿಗುವ ಸೌಲಭ್ಯಗಳ ಮಾಹಿತಿಯನ್ನು ಒದಗಿಸಲಾಗುತ್ತಿದೆ.



**-ರಾಹುಲ್ ತುಕಾರಾಂ ಪಾಂಡ್ವೆ, ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾಪಂಚಾಯತ್ ರಾಯಚೂರು.**

# ಯುಗಾದಿ ಫಲಾಫಲ-'ಈ ವರ್ಷ ಉತ್ತಮ ಮಳೆ, ಬೆಳೆ'



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಎ.1-ಈ ವರ್ಷದ ಫಲಾಫಲ ಕುರಿತು ತಾಲೂಕಿನ ಶಿರೂರ ಪಟ್ಟಣದಲ್ಲಿ ವಸಂತರಾವ್ ಕಡಿವಾಲ ಆಚಾರ್ಯರು ಭವಿಷ್ಯ ನುಡಿದಿದ್ದು, ಈ ಬಾರಿ ಉತ್ತಮ ಮಳೆ ಹಾಗೂ ಬೆಳೆ ಬರಲಿದ್ದು, ಎಲ್ಲವೂ ಸಮೃದ್ಧವಾಗಿದೆ ಎಂದಿದ್ದಾರೆ.

ಯುಗಾದಿ ಮರಿಪಾಡ್ಯೆ ದಿನವಾದ ಸೋಮವಾರ ಪಟ್ಟಣದ ಕಮ್ಮಾರ ಓಣಿಯ ಲಕ್ಷ್ಮೀನಾರಾಯಣ ದೇವಸ್ಥಾನದಲ್ಲಿ ಹಿರಿಯರ ಸಮ್ಮುಖದಲ್ಲಿ ಪಂಚಾಂಗ ಓದುವ ಮೂಲಕ ವರ್ಷದ ರಾಶಿಫಲವನ್ನು ಹೇಳಿದರು.

ರೈತರಿಗೆ ಸಕಾಲಕ್ಕೆ ಅನುಕೂಲವಾಗುವ ಮಳೆಗಳು ಉತ್ತಮವಾಗಿ ಆಗಲಿವೆ. ರೈತರು ಕೃಷಿಗೆ ಒತ್ತು ನೀಡಬೇಕು. ಒಳ್ಳೆಯ ಭವಿಷ್ಯವಿದೆ. ಆರೋಗ್ಯಪೂರ್ಣ ಸಮಾಜ ನಿರ್ಮಾಣವಾಗುತ್ತದೆ. ಜನರಲ್ಲಿ ಭಕ್ತಿ, ಭಾವ, ಧಾರ್ಮಿಕತೆ ಹೆಚ್ಚಾಗಲಿದೆ. ಸು:ಖ, ಶಾಂತಿ, ನೆಮ್ಮದಿಯ ಕಾಲ ಇದಾಗಲಿದೆ ಎಂದು ಕಡಿವಾಲ ಆಚಾರ್ಯರು ನುಡಿದರು.

ಯುಗಾದಿಯ ಈ ಭವಿಷ್ಯಕ್ಕೆ ಬಾಬುದಾರ ಕುಟುಂಬದವರು ಹಾಗೂ ಪಟ್ಟಣದ ಹಿರಿಯರನ್ನು ಬಾಜಾ, ಭಜಂತ್ರಿಯೊಂದಿಗೆ ಚಾವಡಿಗೆ ಕರೆತರಲಾಯಿತು. ಅಲ್ಲಿ ನೂತನ ವರ್ಷದ ಪಂಚಾಂಗ-ಕ್ಕೆ ಪೂಜೆ ಸಲ್ಲಿಸಲಾಯಿತು. ನಂತರ ವಸಂತರಾವ ಕಡಿವಾಲ ಆಚಾರ್ಯರು ಪಂಚಾಂಗ ಓದಿ ಫಲಾಫಲ ತಿಳಿಸಿದರು.

ಸುರೇಶ ದೇಸಾಯಿ, ಶ್ರೀನಿವಾಸ ಇನಾಂದಾರ, ತಿಪ್ಪಣ್ಣ ಪಟ್ಟಣಶೆಟ್ಟಿ, ಪ್ರಭಾಕರ ಕುಲಕರ್ಣಿ, ಯಂಕಪ್ಪ ಶಿಂಪಿ, ವೆಂಕಟರಾವ್ ಕುಲಕರ್ಣಿ, ಸಿದ್ದಯ್ಯ ಎಮ್ಮಿಮಠ, ಯರಗುರದಪ್ಪ ಹೊಸಮನಿ, ಶಿವಪ್ಪ ಅಚನೂರ, ಭೀಮಪ್ಪ ಬೊಮ್ಮಣಗಿ, ಕುಮಾರ ನಾಶಿ, ಮಲ್ಲಿಕಾರ್ಜುನಯ್ಯ ಗಣಾಚಾರಿ, ಹೇಮಣ್ಣ ಪೂಜಾರ, ಮುಕುಂದ ಪೂಜಾರ, ವೆಂಕಟೇಶ ಪೂಜಾರ ಮತ್ತಿತರರು ಇದ್ದರು.

# ತಾಯಿ, ಮಗುವಿಗೆ ಕಿಲ್ಕಾರಿ ರಕ್ಷೆ
## ರಾಯಚೂರಿನಲ್ಲಿ ಆರೋಗ್ಯ ಸಲಹೆ ನೀಡುವ ವಿನೂತನ ಕಾರ್ಯಕ್ರಮ



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಏಪ್ರೀಲ್.01 -ಜಿಲ್ಲೆಯಲ್ಲಿ ತಾಯಿ ಮತ್ತು ಮಕ್ಕಳ ಮರಣ ಪ್ರಮಾಣ ತಗ್ಗಿಸುವ ಉದ್ದೇಶದಿಂದ ಆರೋಗ್ಯ ಇಲಾಖೆಯು ತೆಗೆದುಕೊಳ್ಳಬೇಕಾದ ಲಸಿಕೆ, ಆರೋಗ್ಯ ಕ್ರಮಗಳ ಬಗ್ಗೆ ಕರೆ ಮಾಡಿ ಮಾಹಿತಿ ನೀಡುವ ಕಿಲ್ಕಾರಿ ಎಂಬ ಉಚಿತ ಮೊಬೈಲ್ ಆರೋಗ್ಯ ಸೇವೆಯನ್ನು ಜಾರಿಗೆ ತಂದಿದೆ. ಜಿಲ್ಲೆಯ ಅಂದಾಜು 42 ಸಾವಿರ ಗರ್ಭಿಣಿಯರು, ಮಕ್ಕಳಿಗೆ ಇದರಿಂದ ಅನುಕೂಲವಾಗಲಿದೆ.

ತಾಯಿ ಮತ್ತು ಶಿಶು ಮರಣ ಸಂಭವಿಸುವ ಸಾಧ್ಯತೆಯನ್ನು ತಡೆಗಟ್ಟುವ ಉದ್ದೇಶದಿಂದ ಸರ್ಕಾರವು ಆರೋಗ್ಯ ಇಲಾಖೆ ವತಿಯಿಂದ ಕಿಲ್ಕಾರಿ ಎಂಬ ಉಚಿತ ಮೊಬೈಲ್ ಆರೋಗ್ಯ ಸೇವೆ ಜಾರಿಗೆ ತಂದಿದ್ದು, ಈ ಯೋಜನೆಯನ್ನು ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳಬೇಕು.



**- ಸುರೇಂದ್ರ ಬಾಬು, ಡಿಹೆಚ್‌ಓ ರಾಯಚೂರು**

ಪ್ರತಿವರ್ಷ ರಾಯಚೂರು ಜಿಲ್ಲೆಯಲ್ಲಿ ಅಂದಾಜು 42 ರಿಂದ 45 ಸಾವಿರ ಗರ್ಭಿಣಿಯರು ದಾಖಲಾಗುತ್ತಾರೆ. ಈ ಸಂದರ್ಭದಲ್ಲಿ ನಾನಾ ಕಾರಣಗಳಿಗೆ ತಾಯಿ ಮತ್ತು ನವಜಾತ ಶಿಶುಗಳ ಮರಣ ಸಂಭವಿಸುವ ಸಾಧ್ಯತೆ ಇರುತ್ತದೆ. ಅದನ್ನು ತಪ್ಪಿಸಲು ಸರಕಾರವು ಕಿಲ್ಕಾರಿ ಸೇವೆ ಜಾರಿಗೆ ತರಲಾಗಿದೆ. ತನ್ಮೂಲಕ ಗರ್ಭಧಾರಣೆ, ಗರ್ಭಿಣಿ ತಾಯಿ ಮತ್ತು ಮಗುವಿನ ಆರೋಗ್ಯದ ಮಾಹಿತಿಯನ್ನು ನೇರವಾಗಿ ಕುಟುಂಬಗಳ ಮೊಬೈಲ್ ಫೋನ್‌ಗೆ ತಲುಪಿಸಲಾಗುತ್ತದೆ.

ಕಿಲ್ಕಾರಿ ಕಾರ್ಯಕ್ರಮವು ಮೊಬೈಲ್ ಆಧಾರಿತ ಸೇವೆಯಾಗಿದ್ದು, ಇದು 2016ರ ಜನವರಿ 15ರಂದು ಡಿಜಿಟಲ್ ಇಂಡಿಯಾ ಉಪಕ್ರಮದ ಭಾಗವಾಗಿ ಹೊಸ ಮತ್ತು ಹಾಲಿ ಗರ್ಭಿಣಿಯರಿಗಾಗಿ ಪ್ರಾರಂಭಿಸಲ್ಪಟ್ಟಿದೆ. ಹೊಸ ಮತ್ತು ನಿರೀಕ್ಷಿತ ತಾಯಂದಿರಿಗೆ ಪ್ರಮುಖ ಆರೋಗ್ಯ ಮಾಹಿತಿಯನ್ನು ನೇರವಾಗಿ ತಲುಪಿಸಲು ಮೊಬೈಲ್ ತಂತ್ರಜ್ಞಾನ ಬಳಸಿಕೊಳ್ಳಲಾಗುತ್ತದೆ.

ಕಿಲ್ಕಾರಿ ಎಂದರೇನು? ಕಿಲ್ಕಾರಿಯು ಗರ್ಭಿಣಿ, ಬಾಣಂತಿಯರಿಗೆ ತಂದಿರುವ ಉಚಿತ ಆರೋಗ್ಯ ಮಾಹಿತಿ ನೀಡುವ ಮೊಬೈಲ್ ಸೇವೆಯಾಗಿದೆ. ಈ ಉಚಿತ ಸೇವೆಯು ಗರ್ಭಧಾರಣೆಯ 4ನೇ ತಿಂಗಳಿನಿಂದ ಮಗುವಿನ ಮೊದಲ ಜನ್ಮದಿನದವರೆಗಿನ ಅವಧಿಯಲ್ಲಿ ತಾಯಿಯ ಆರೋಗ್ಯದ ಬಗ್ಗೆ ಹಾಗೂ ಮಕ್ಕಳಿಗೆ ನೀಡುವ ಲಸಿಕೆಗಳ ಬಗ್ಗೆ ಮಾಹಿತಿಯನ್ನು ಮುಂಚಿತವಾಗಿ ಕರೆಗಳ ಮೂಲಕ ತಿಳಿಸಲಾಗುತ್ತದೆ.

ತಾಯಿ ಮತ್ತು ಶಿಶು ಮರಣದ ದರ ಕಡಿಮೆ ಮಾಡಲು ಹಾಗೂ ಗರ್ಭಿಣಿ ತಾಯಂದಿರಿಗೆ ಗುಣಮಟ್ಟದ ಆರೈಕೆ ಮಾಹಿತಿ ಒದಗಿಸಲು ಸರ್ಕಾರವು ಕಿಲ್ಕಾರಿ ಸೇವೆ ಆರಂಭಿಸಿದ್ದು, ಜಿಲ್ಲೆಯ ಸಾರ್ವಜನಿಕರು ಇದರ ಸದುಪಯೋಗ ಪಡೆಯಬೇಕು.



**-ಡಾ.ನಂದಿತಾ, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳು ರಾಯಚೂರು.**

ಕಿಲ್ಕಾರಿ ನೋಂದಣಿ ಹೇಗೆ? ಗರ್ಭಧಾರಣೆಯ ಅಥವಾ ಮಗುವಿನ ಜನನದ ವಿವರಗಳನ್ನು ಆಶಾ ಕಾರ್ಯಕರ್ತೆ, ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ, ಸಮುದಾಯ ಆರೋಗ್ಯ ಅಧಿಕಾರಿ ಅಥವಾ ಹತ್ತಿರದ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಮೊಬೈಲ್ ಸಂಖ್ಯೆ ನೀಡಿ ನೋಂದಾಯಿಸಿಕೊಳ್ಳಬೇಕು. ನಂತರ ಈ ಮಾಹಿತಿಯನ್ನು ಆರ್.ಸಿ.ಹೆಚ್ (ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ) ಪೋರ್ಟಲ್‌ನಲ್ಲಿ ನಮೂದಿಸಲಾಗುತ್ತದೆ.

ಗರ್ಭಿಣಿಯರು ಪಾಲಿಸಬೇಕಾದ ಅಂಶಗಳು: ಆರೋಗ್ಯ ಇಲಾಖೆಗೆ ತಾವು ಚಾಲ್ತಿಯಲ್ಲಿರುವ ಸೂಕ್ತ ಮೊಬೈಲ್ ಸಂಖ್ಯೆಯನ್ನು ನೀಡಬೇಕು ಅಲ್ಲದೆ ತಮ್ಮ ಮೊಬೈಲ್‌ನಲ್ಲಿ ಕಿಲ್ಕಾರಿ ದೂರವಾಣಿ ಸಂ-ಖ್ಯೆ: 0124-4451660 ಅನ್ನು ಸೇವ್ ಮಾಡಬೇಕು. ಹಾಗೂ ಈ ಸಂಖ್ಯೆಯಿಂದ ಕರೆಗಳು ಬಂದಾಗ ಸ್ವೀಕಾರ ಮಾಡಬೇಕು. ಸರ್ಕಾರಿ ಆರೋಗ್ಯ ಕೇಂದ್ರದಲ್ಲಿ ಫಲಾನುಭವಿಗಳು ತಮ್ಮ ಮೊಬೈಲ್ ಸಂಖ್ಯೆ ನೀಡಿ ನೊಂದಾಯಿಸಿಕೊಳ್ಳಬೇಕು. ನಂತರ ಈ ಮಾಹಿತಿ ಆರ್.ಸಿ.ಹೆಚ್ ಪೋರ್ಟಲ್‌ಗೆ ನಮೂದಿಸಲಾಗುತ್ತದೆ. ನಂತರ ಉಚಿತವಾದ ಕಿಲ್ಕಾರಿ ಕರೆ ಸ್ವೀಕರಿಸಲು ಸಾಧ್ಯವಾಗುತ್ತದೆ. ಗರ್ಭಧಾರಣೆ ಅವಧಿಗೆ ಸಂಬಂಧಿಸಿದ ಆರೋಗ್ಯ ಮಾಹಿತಿ ಮತ್ತು ಮಗು ಜನಿಸಿದ ನಂತರ 9 ತಿಂಗಳವರೆಗೆ ಹಾಕಿಸಬೇಕಾದ 12 ಲಸಿಕೆ ಬಗ್ಗೆ ಮುಂಚಿತವಾಗಿ ಕರೆ ಮೂಲಕ ತಿಳಿಸಲಾಗುತ್ತದೆ. ಕಿಲ್ಕರಿ ಸಂಖ್ಯೆಯನ್ನು ಮೊಬೈಲ್‌ನಲ್ಲಿ ಇರಿಸಿಕೊಳ್ಳಬೇಕು.

ಒಂದು ವೇಳೆ ಕರೆ ಬಾರದಿದ್ದರೆ ಅಥವಾ ಮಾಹಿತಿಯನ್ನು ಮತ್ತೊಮ್ಮೆ ಕೇಳಲು ಬಯಸಿದರೆ ತಮ್ಮ ನೋಂದಾಯಿತ ಮೊಬೈಲ್ ಸಂಖ್ಯೆಯಿಂದ 14423ಗೆ ಕರೆ ಮಾಡಬೇಕು. ಸಾಕಷ್ಟು ಫಲಾನುಭವಿಗಳು ತಮ್ಮ ಪ್ರಿ-ರಿಕಾರ್ಡೆಡ್ ಕರೆಗಳು ಬಂದಾಗ ಸ್ವೀಕರಿಸುವುದಿಲ್ಲ. ಅಥವಾ ಆರೋಗ್ಯ ಇಲಾಖೆಗೆ ಯಾರೋದೋ ಮೊಬೈಲ್ ನಂಬರ ನೀಡಿರುತ್ತಾರೆ. ಹಾಗಾಗಂದಂತೆ ಸಾರ್ವಜನಿಕರು ನೋಡಿಬೇಕು. ಈ ಯೋಜನೆಯ ಸದುಪಯೋಗ ತಪ್ಪದೇ ಪಡೆದುಕೊಂಡು ತಾಯಿ ಮತ್ತು ಶಿಶುವಿನ ಮರಣದ ಪ್ರಮಾಣ ಕಡಿಮೆ ಮಾಡಬೇಕು.

ಯಾವ್ಯಾವ ಸಂದೇಶ ಬರುತ್ತದೆ? ಗರ್ಭಧಾರಣೆಯ ಅವಧಿಗೆ ಸಂಬಂಧಿಸಿದ ಆರೋಗ್ಯ ಮಾಹಿತಿ, ಮಗು ಜನಿಸಿದ ನಂತರ, ಶಿಶುವಿನ ವಯಸ್ಸಿಗೆ ಸಂಬಂಧಿಸಿದ ಆರೋಗ್ಯ ಮಾಹಿತಿ ಮತ್ತು ಸಲಹೆ ನೀಡಲಾಗುತ್ತದೆ. ಇದಲ್ಲದೇ ಫ್ಯಾಮಿಲಿ ಪ್ಲಾನಿಂಗ್ ಬಗ್ಗೆಯೂ ಮಾಹಿತಿಗಳನ್ನು ತಿಳಿಸಿಕೊಡಲಾಗುತ್ತದೆ.

ಜಾಹೀರಾತಿಗಾಗಿ ಇಂದೇ ಸಂಪರ್ಕಿಸಿರಿ:8073731722

# ಅಬಕಾರಿ ಇಲಾಖೆ: ಆಕ್ಷೇಪಣೆಗೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಏಪ್ರೀಲ್.01-ಇಲ್ಲಿನ ಅಬಕಾರಿ ಇಲಾಖೆಯಲ್ಲಿ ಖಾಲಿ ಇರುವ 5 ವಾಹನ ಚಾಲಕರ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದ್ದು, ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ 15ದಿನಗಳ ಒಳಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಲಿಂಗಸುಗೂರು ತಾಲೂಕಿನ ಗುಡದನಾಳ ಗ್ರಾಮದ ನಿವಾಸಿಯಾದ ಹನುಮೇಶ ತಂದೆ ಬಸಪ್ಪ ಬರಿನಾಳ, ದೇವದುರ್ಗದ ನಗರಗುಂಡ ನಿವಾಸಿಯಾದ ರಂಗನಾಥ ತಂದೆ ಚಿದಾನಂದ, ಯಾದಗಿರಿ ಜಿಲ್ಲೆಯ ಸುರಪೂರ ತಾಲೂಕಿನ ಮೇದಾಗಲ್ಲಿ ಗ್ರಾಮದ ನಿವಾಸಿಯಾದ ಅರುಣ್ ಕುಮಾರ್ ತಂದೆ ಆನಂದ, ರಾಯಚೂರಿನ ಅಸ್ಕಿಹಾಳ ನಿವಾಸಿಯಾದ ಖಾಜಾ ನಿಹಾರ ಬಾಷಾ ತಂದೆ ಮಹಮದ್ ಖಾಸಿಂ ಹಾಗೂ ದೇವದುರ್ಗ ತಾಲೂಕಿನ ಅರ-ಕೇರಾ ನಿವಾಸಿಯಾದ ಮಹಮದ್ ಇದ್ರೀಸ್ ತಂದೆ ಮೆಹಬೂಬ್ ಸಾಬ್ ಈ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಬಾಧಿತ ಅಭ್ಯರ್ಥಿಗಳು ಅಧಿಸೂಚನೆ ಹೊರಡಿಸಿದ 15 (ಹದಿನೈದು) ದಿನಗಳ ಒಳಗಾಗಿ ಸೂಕ್ತ/ಪೂರಕ ದಾಖಲೆಗಳೊಂದಿಗೆ ಲಿಖಿತ ಮೂಲಕ ಆಕ್ಷೇಪಣೆಗಳನ್ನು ಅಬಕಾರಿ ಉಪ ಆಯುಕ್ತರು ಹಾಗೂ ನೇಮಕಾತಿ ಸಮಿತಿಯ ಸದಸ್ಯ ಕಾರ್ಯದರ್ಶಿಗಳು, ಕಟ್ಟಡ ಸಂ.1-11-65/9 ಮತ್ತು 10, ಕೃಷಿ ವಿಶ್ವವಿದ್ಯಾಲಯದ ಎದುರು, ಶೋರೂಮ್ ಹಿಂಭಾಗ, ಲಿಂಗಸುಗೂರು ರಸ್ತೆ, ರಾಯಚೂರು ಈ ವಿಳಾಸಕ್ಕೆ ಸಲ್ಲಿಸತಕ್ಕದು. ನಿಗದಿತ ದಿನಾಂಕದೊಳಗೆ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಮಾತ್ರ ನಿಯಮಾನುಸಾರ ಪರಿಶೀಲಿಸಿ ನಂತರ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುವುದು. ನಿಗದಿತ ಅವಧಿ ಮೀರಿ ಸ್ವೀಕೃತವಾಗುವ ಆಕ್ಷೇಪಣೆಗಳು/ಪೂರಕ ದಾಖಲೆಗಳೊಂದಿಗೆ ಸಲ್ಲಿಸದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಅಬಕಾರಿ ಇಲಾಖೆಯ ಉಪ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶ್ರೀ ಸದ್ಗುರು ರ್ರಿತಾತನವರ ವಾರ್ಷಿಕ ಜಾತ್ರೆರಥೋತ್ಸವ ನಿಷೇಧಿಸಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಆದೇಶ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಎ.01:ಬಳ್ಳಾರಿ ತಾಲ್ಲೂಕಿನ ಕೊಳಗಲ್ ಗ್ರಾಮದಲ್ಲಿ ಎ.04 ರಂದು ನಡೆಯುವ ಶ್ರೀ ಸದ್ಗುರು ರ್ರಿತಾತನವರ ವಾರ್ಷಿಕ ಜಾತ್ರೆ/ರಥೋತ್ಸವವನ್ನು ಕರ್ನಾಟಕ ಪೊಲೀಸ್ ಕಾಯ್ದೆ 1963 ರ ಕಲಂ 35 ರಡಿ ಪ್ರದತ್ತವಾದ ಅಧಿಕಾರದ ಮೇರೆಗೆ ನಿಷೇಧಿಸಿ ಜಿಲ್ಲಾ ದಂಡಾಧಿಕಾರಿ ಆಗಿರುವ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಆದೇಶಿಸಿದ್ದಾರೆ.

ಕೊಳಗಲ್ಲು ಗ್ರಾಮದಲ್ಲಿ ಶ್ರೀ ಸದ್ಗುರು ರ್ರಿತಾತನವರ ದೇವಸ್ಥಾನದ ಆಸ್ತಿ-ಪಾಸ್ತಿ ಮತ್ತು ಆಡಳಿತ ವಿಚಾರವಾಗಿ ಗಲಾಟೆಗಳಾಗಿ ವಿವಾದ ಇರುತ್ತದೆ ಹಾಗೂ 2024 ರ ಫೆ.24 ರಂದು ಬೆಳಿಗ್ಗೆ 04 ಗಂಟೆಗೆ ಶ್ರೀ ಸದ್ಗುರು ರ್ರಿತಾತನವರ ಮಠದ ಆವರಣದಲ್ಲಿ ಹೊಸದಾಗಿ ಕಟ್ಟಿರುವ ಎರಿಯಪ್ಪತಾತ ಗುಡಿಯಲ್ಲಿ ಮೂರ್ತಿ ಪ್ರತಿಷ್ಠಾಪನೆ ಮಾಡಿರುವ ವಿಚಾರವಾಗಿ ಧಾರವಾಡ ಉಚ್ಚ ನ್ಯಾಯಾಲಯ ಪೀಠವು ಪ್ರತಿಷ್ಠಾಪಿಸಿದ ಮೂರ್ತಿಯನ್ನು ತೆರವುಗೊಳಿಸಬೇಕು ಎಂದು ಆದೇಶಿಸಿರುತ್ತಾರೆ.

ಉಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಮೂರ್ತಿ ತೆರವುಗೊಳಿಸಿರುವುದರಿಂದ ಕೊಳಗಲ್ ಗ್ರಾಮದಲ್ಲಿ ಪರ-ವಿರೋಧ ಇರುವ ವಿವಿಧ ಜಾತಿ ಜನಾಂಗದವರ ಮಧ್ಯೆ ವೈಷಮ್ಯ ಉಂಟಾಗಿ 2024 ರ ಏ.07 ರಂದು ಪೊಲೀಸರ ಮೇಲೆ ಕಲ್ಲು ತೂರಾಟ ನಡೆಸಿ ಹಲ್ಲೆ ಮಾಡಿದ್ದು ಮತ್ತು ದೇವಸ್ಥಾನದ ಆಸ್ತಿ-ಪಾಸ್ತಿ ಹಾಗೂ ಆಡಳಿತದ ವಿಚಾರವಾಗಿ ಗಲಾಟೆಗಳಾಗಿ ಬಳ್ಳಾರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿರುತ್ತವೆ.

ಶ್ರೀ ಸದ್ಗುರು ರ್ರಿತಾತನವರ ವಾರ್ಷಿಕ ಜಾತ್ರೆ/ರಥೋತ್ಸವವು ಆಚರಣೆ ಮಾಡಿದಲ್ಲಿ ಸಾರ್ವಜನಿಕರಿಗೆ ಪ್ರಾಣ ಹಾನಿ, ಆಸ್ತಿ-ಪಾಸ್ತಿ ನಷ್ಟ ಉಂಟಾಗಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ಉಂಟಾಗುವ ಸಾಧ್ಯತೆ ಇರುವುದರಿಂದ ಕೊಳಗಲ್ ಗ್ರಾಮದಲ್ಲಿ ಇದೇ ಏ.04 ರಂದು ನಡೆಯುವ ಶ್ರೀ ಸದ್ಗುರು ರ್ರಿತಾತನವರ ವಾರ್ಷಿಕ ಜಾತ್ರೆ/ರಥೋತ್ಸವವನ್ನು ಆಚರಣೆ ಮಾಡದಂತೆ ಕರ್ನಾಟಕ ಪೊಲೀಸ್ ಕಾಯ್ದೆ 1963 ರ ಕಲಂ 35 ರಂತೆ ನಿಷೇಧಿಸಿ ಆದೇಶ ಹೊರಡಿಸಲು ಕೋರಿರುತ್ತಾರೆ.

ಅದರಂತೆ ಸಹಾಯಕ ಆಯುಕ್ತರ ಅಧ್ಯಕ್ಷತೆಯಲ್ಲಿ ಮಾ.28 ರಂದು ನಡೆದ ಸಭೆಯ ನಡವಳಿಗಳಲ್ಲಿ ಜಾತ್ರೆ ಆಚರಿಸಲು ಅನುಮತಿ ನೀಡಿದಲ್ಲಿ ಗ್ರಾಮದಲ್ಲಿ ಅಹಿತಕರ ಘಟನೆಗಳು ನಡೆಯುವ ಸಾಧ್ಯತೆ ಹೆಚ್ಚಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಜಿಲ್ಲಾ ಪೊಲೀಸ್ ಅಧೀಕ್ಷಕರು ಸಹ ಕೊಳಗಲ್ ಗ್ರಾಮದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಜಾತ್ರೆ/ರಥೋತ್ಸವ ಆಚರಣೆ ಮಾಡದಂತೆ ನಿಷೇಧಿಸುವುದು ಸೂಕ್ತ ಎಂದು ತಿಳಿಸಿರುತ್ತಾರೆ.

ಹಾಗಾಗಿ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಕೊಳಗಲ್ ಗ್ರಾಮದಲ್ಲಿ ಎ.04

# ಬಡ ಮಕ್ಕಳ ಪಾಲಿನ ದೇವರು:ಲಿಂಗಾರೆಡ್ಡಿ ನಾಯಕ



ಮಲ್ಲಮ್ಮ ನುಡಿ ವಾರ್ತೆ

ಸೈದಾಪುರ:ಏ.1:ಡಾ.ಶಿವಕುಮಾರ ಶ್ರೀಗಳು ತ್ರಿವಿಧ ದಾಸೋಹದ ಮೂಲಕ ಸಾವಿರಾರೂ ವಿದ್ಯಾರ್ಥಿಗಳ ಬದಕನ್ನೂ ರೂಪಿಸಿದ ಬಡ ಮಕ್ಕಳ ಪಾಲಿನ ದೇವರಾಗಿದ್ದಾರೆ ಎಂದು ಮುಖ್ಯಗುರು ಲಿಂಗಾರೆಡ್ಡಿ ನಾಯಕ ಅಭಿಪ್ರಾಪಟ್ಟರು.

ವಿದ್ಯಾ ವರ್ಧಕ ಸಂಘದ ವಿವಿಧ ವಿಭಾಗಗಳ ವತಿಯಿಂದ ಹಮ್ಮಿಕೊಂಡ ಡಾ.ಶಿವಕುಮಾರ ಮಾಹಾಸ್ವಾಮೀಗಳ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಕಾಯಕಕ್ಕೆ ಹೆಚ್ಚಿನ ಮಹತ್ವ ನೀಡಿ ನಡೆದಾಡುವ ದೇವರಾಗಿರುವ ಡಾ.ಶಿವಕುಮಾರ ಶ್ರೀಗಳ ಆದರ್ಶ ಬದಕು ಹಾಗೂ ಅವರ ತತ್ವಗಳು ಮಾನವ ಮೌಲ್ಯಯುತವಾದ ಜೀವನ ರೂಪಿಸುವಲ್ಲಿ ನೆರವಾಗಲಿವೆ. ಅವರ ಜೀವನವೇ ನಮಗೆ ಶಕ್ತಿಯಾಗಿದೆ. ದಿನಾಚರಣೆ ಆಚರಿಸುವ ಮೂಲಕ ಅವರ ಸರಳ ಜೀವನ ಮತ್ತು ಸೇವಾ ಮನೋಭಾವನೆಯ ಗುಣಗಳನ್ನು ನಮ್ಮದಾಗಿಸಿಕೊಂಡರೆ ಉತ್ತಮ ಸಮಾಜವನ್ನು ಕಾಣಲು ಸಾಧ್ಯವಿದೆ ಎಂದು ಹೇಳಿದರು.

ಪ್ರಾಂಶುಪಾಲ ಜಿ.ಎಂ.ಗುರುಪ್ರಸಾದ, ಉಪನ್ಯಾಸಕರಾದ ಸಾಬಯ್ಯ ರಾಯಪ್ಪನೋರ, ಹಣಮರೆಡ್ಡಿ ಮೋಟ್ನಳ್ಳಿ, ಆನಂದ ಪಾಟೀಲ ಕೊಂಡಾಪುರ, ಡಿ.ಎಲ್.ಇಡಿ ಪ್ರಥಮ ಹಾಗೂ ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಗಳು ಸೇರಿದಂತೆ ಇತರರಿದ್ದರು.

# ಇಲಾಳ ಬಾಲಕರ ಮೃತದೇಹ ಪತ್ತೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಎ.1–ಆಲಮಟ್ಟಿ ಜಲಾಶಯದ ಮುಂಭಾಗದ ಕೃಷ್ಣಾ ನದಿಯಲ್ಲಿ ರವಿವಾರ ಮುಳುಗಿ ನೀರು ಪಾಲಾಗಿದ್ದ ಇಲಾಳ ಗ್ರಾಮದ ಇಬ್ಬರು ಬಾಲಕರ ಮೃತದೇಹ ಮಂಗಳವಾರ ಬೆಳಿಗ್ಗೆ ಪತ್ತೆಯಾಗಿವೆ. ಇಲಾಳ ಬೊಮ್ಮಲಿಂಗೇಶ್ವರ ದೇವರನ್ನು ನದಿಗೆ ಗಂಗಾ ಸ್ನಾನಕ್ಕೆ ತೆಗೆದುಕೊಂಡು ಹೋಗಿದ್ದ ಸಂದರ್ಭದಲ್ಲಿ ಈಜಾಡಲು ಹೋಗಿದ್ದ ಗ್ರಾಮದ ಮೂವರು ಬಾಲಕರು ನೀರಲ್ಲಿ ಮುಳುಗಿ ಮೃತಪಟ್ಟಿದ್ದರು. ಘಟನೆ ನಡೆದ ದಿನ ರವಿವಾರ ಸೋಮಶೇಖರ ದೇವರಮನಿ ಬಾಲಕನ ಮೃತದೇಹ ಪತ್ತೆಯಾಗಿತ್ತು.

ಪರನಗೌಡ ಬೀಳಗಿ ಮತ್ತು ಮಲ್ಲಪ್ಪ ಬಗಲಿ ಅವರ ಮೃತದೇಹ ದೊರೆತಿರಲಿಲ್ಲ.

ಎರಡು ದಿನಗಳ ಶೋಧ ಕಾರ್ಯಾಚರಣೆಯ ಬಳಿಕ ಮಂಗಳವಾರ ಮುಂಜಾನೆ 7–30 ಗಂಟೆಯ ವೇಳೆಗೆ ಆಲಮಟ್ಟಿ ಹಳೆ ಸೇತುವೆ ಬಳಿ ಇಬ್ಬರು ಬಾಲಕರ ಮೃತದೇಹ ದೊರೆತಿವೆ ಎಂದು ಬಾಗಲಕೋಟೆ ಗ್ರಾಮೀಣ ಠಾಣೆ ಪೊಲೀಸರು ತಿಳಿಸಿದ್ದಾರೆ.

# ಇಸ್ಪೀಟ್ ಅಡ್ಡೆಯ ಮೇಲೆ ದಾಳಿ: 9 ಜನರ ವಿರುದ್ಧ ಪ್ರಕರಣ

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ :ಎ.1: ಜಿಲ್ಲೆ ಗಂಗಾವತಿ ತಾಲೂಕಿನ ಗ್ರಾಮೀಣ ಭಾಗದಲ್ಲಿ ಇಸ್ಪೇಟ್ ಹಾವಳಿ ಹೆಚ್ಚಾಗಿದ್ದು ಇಲ್ಲಿಯವರೆಗೂ ತಡೆಗಟ್ಟಲು ಕೇವಲ ಬಾಯಿ ಮಾತಿನಲ್ಲಿ ಹೇಳುತ್ತಿದ್ದರು ಆದರೆ ನೂತನ ಗ್ರಾಮೀಣ ಠಾಣೆಗೆ ಸಿಪಿಐ ಆಗಿ ಬಂದಿರುವ ರಂಗಪ್ಪ ದೊಡ್ಡಮನಿ ಯವರು ಗ್ರಾಮೀಣ ಭಾಗದಲ್ಲಿ ಅಕ್ರಮ ಚಟುವಟಿಕೆಗಳಿಗೆ ಆಸ್ಪದ ನೀಡುವುದಿಲ್ಲ ಮತ್ತು ಗ್ರಾಮೀಣ ಜನರ ನೆಮ್ಮದಿಗೆ ಭಂಗ ತರುವ ಯಾವುದೇ ಅಕ್ರಮ ಚಟುವಟಿಕೆಗಳ ನಡೆದರು, ಪೊಲೀಸ್ ಇಲಾಖೆ ಸುಮ್ಮನೆ ಇರುವುದಿಲ್ಲ ಎಂಬ ಸಂದೇಶವನ್ನು ರವಾನಿಸಿದ್ದಾರೆ. ಅದೇ ರೀತಿಯಾಗಿ ತಾಲೂಕಿನ ಸಮೀಪದ ಉಡುಮಕಲ್ ಸೋಲರ್ ಪ್ಲಾಂಟ್ ಹತ್ತಿರ ಇಸ್ಪೀಟು ಆಡುವರ ಮೇಲೆ ದಾಳಿ ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆಯ ಸಿಪಿಐ ರಂಗಪ್ಪ ದೊಡ್ಡಮನಿ ಇಸ್ಪೇಟ್ ಅಡ್ಡೆಯ ಮೇಲೆ ದಾಳಿ ಮಾಡಿದ್ದು, ಇಸ್ಪೀಟ್ ಆಡುವವರ ಪೈಕಿ 9 ಜನರು ಪೊಲೀಸರ ಕೈಗೆ ಸಿಕ್ಕ ಹಾಕಿಕೊಂಡುದ್ದು, ಉಳಿದವರು ಓಡಿಹೋಗಿದ್ದಾರೆ, ಇಸ್ಪೀಟ್ ಆಡಲು ಸ್ಥಳಕ್ಕೆ ತೆಗೆದು–ಕೊಂಡು ಬಂದಿದ್ದ 26 ಬೈಕುಗಳನ್ನು ಗ್ರಾಮೀಣ ಪೊಲೀಸ್ ಠಾಣೆಯ ಸಿಪಿಐ ರಂಗಪ್ಪ ದೊಡ್ಡಮನಿ ಜಪ್ತಿ ಮಾಡಿದ್ದು, 9 ಜನರ ಮೇಲೆ ದೂರು ದಾಖಲಾಗಿದ್ದು, 26 ಟು ವೀಲರ್ ಬೈಕ್ ಮತ್ತು 39 ಸಾವಿರ ನಗದು ವಶ ಪಡೆಸಿಕೊಂಡಿದ್ದಾರೆ.



ಈ ಸಂದರ್ಭದಲ್ಲಿ ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆ ಸಿಪಿಐ ರಂಗಪ್ಪದೊಡ್ಡಮನಿ,ಸಿಬ್ಬಂದಿಗಳಾದ ಬಸವರಾಜ ಚಿನ್ನೂರು,ರಾಘವೇಂದ್ರ, ಮಂಜುನಾಥ, ಬಸವರಾಜ ಮುರುಡಿ,ಮುತ್ತುರಾಜ,ಡೈವರ ಅಮರೇಶ, ಸೇರಿದಂತೆ ಇತರರು ಇದ್ದರು.

# ರಾಜ್ಯದಲ್ಲಿ ಡೀಸೆಲ್ ದರ 2 ರೂ. ಏರಿಕೆ

ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಏ.1: ಗ್ಯಾರಂಟಿ ಸರ್ಕಾರ ಪ್ರತಿ ಲೀಟರ್ ಡೀಸೆಲ್ ಬೆಲೆಯನ್ನು 2 ರೂ. ಏರಿಕೆ ಮಾಡಿದೆ. ಈಗಾಗಲೇ ಬೆಲೆ ಏರಿಕೆಯಿಂದ ತತ್ತರಿಸುವ ಜನತೆಗೆ ಕಾಂಗ್ರೆಸ್ ಸರ್ಕಾರ ಮತ್ತೊಂದು ಶಾಕ್ ನೀಡಿದ್ದು ಇಂದು ಮಧ್ಯರಾತ್ರಿಯಿಂದಲೇ ಪರಿಷ್ಕೃತ ದರ ಜಾರಿಯಾಗಲಿದೆ.

ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು 18.44% ರಿಂದ 21.17 % ಗೆ ಏರಿಕೆ ಮಾಡಲಾಗಿದೆ. ಸದ್ಯ ರಾಜ್ಯದಲ್ಲಿ ಪ್ರತಿ ಲೀಟರ್ ಡೀಸೆಲ್‌ಗೆ 88.93 ರೂ. ದರವಿದೆ. ತೆರಿಗೆ ಏರಿಕೆಯಿಂದ ದರ 90.93 ರೂ.ಗೆ ಆಗಲಿದೆ. ಪೆಟ್ರೋಲ್ ಮೇಲೆ ಮಾರಾಟ ತೆರಿಗೆಯನ್ನು ಏರಿಸದ ಕಾರಣ ಪ್ರತಿ ಲೀಟರ್ ಪೆಟ್ರೋಲ್ ದರ 102. 84 ರೂ.(ನಗರದಿಂದ ನಗರಕ್ಕೆ ದರ ಬದಲಾಗುತ್ತದೆ) ಇರಲಿದೆ.ಸರಕು ಸಾಗಾಣಿಕೆ ಮಾಡುವ ವಾಹನಗಳಾದ ಟ್ರಕ್,ಲಾರಿಗಳು ಡೀಸೆಲ್ ಬಳಸುವ ಕಾರಣ ಮುಂದಿನ ದಿನಗಳಲ್ಲಿ ಇದರ ನೇರ ಪರಿಣಾಮ ದಿನ ಬಳಕೆಯ ವಸ್ತುಗಳ ಮೇಲೆ ತಟ್ಟಲಿದೆ. ಇದ–ರಿಂದಾಗಿ ದಿನ ಬಳಕೆ ತರಕಾರಿ, ಆಹಾರ ವಸ್ತುಗಳ ಬೆಲೆಯೂ ಏರಿಕೆ ಆಗಲಿದೆ.ಕಳೆದ ಜೂನ್‌ನಲ್ಲಿ ಏರಿಕೆ:

2024ರ ಜೂನ್ ನಲ್ಲಿ ಪ್ರತಿ ಲೀಟರ್ ಪೆಟ್ರೋಲ್ ದರ 3.02 ರೂ. ಹಾಗೂ ಡೀಸೆಲ್ ಬೆಲೆಯಲ್ಲಿ 3 ರೂ. ಹೆಚ್ಚಳ ಮಾಡಲಾಗಿತ್ತು.



ಹುಮನಾಬಾದ:ಮಾಜಿ ಸಚಿವ ರಾಜಶೇಖರ ಪಾಟೀಲ ಅವರಿಗೆ ಜನ್ಮದಿನದ ಪ್ರಯುಕ್ತ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ. ಅಜಯ್ ಸಿಂಗ್ ಹುಮನಾಬಾದನಲ್ಲಿ ಮಂಗಳವಾರ ಶಾಲು ಹೊದಿಸಿ ಸತ್ಕರಿಸಿದರು. ಬಿ.ಎಸ್.ಎಸ್.ಕೆ. ಮಾಜಿ ಅಧ್ಯಕ್ಷ ಸಂಗಮೇಶ ಪಾಟೀಲ, ಕಾಂಗ್ರೆಸ್ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ದತ್ತಾತ್ರಿ ಮೂಲಗೆ, ಪ್ರಮುಖರಾದ ಅಜಮತ್ ಪಟೇಲ್, ವೀರೇಂದ್ರ ಕುಶನೂರ ಇದ್ದರು

# ಬೀದರ್‌ನಲ್ಲಿ ಮಹಿಳೆಯ ಬರ್ಬರ ಹತ್ಯೆ: ಆರೋಪಿ ಅರೆಸ್ಟ್

ಮಲ್ಲಮ್ಮ ನುಡಿ ವಾರ್ತೆ

ಬೀದರ. ಏ. 01 : ಬೀದರ್ ಜಿಲ್ಲೆ ಬಸವಕಲ್ಯಾಣದ ಶಾ–ಹುಸೇನ್ ಬಡಾವಣೆಯಲ್ಲಿ ಮಹಿಳೆಯ ಭೀಕರವಾಗಿ ಹತ್ಯೆ ಮಾಡಿರುವ ಗಟನೆ ನಡೆದಿದೆ. ಮಹಿಳೆಯನ್ನು ಕೊಲೆಗೈದು ಪರಾರಿಯಾಗಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಬಸವಕಲ್ಯಾಣ ನಗರಸಭೆಯಲ್ಲಿ ಸ್ವಚ್ಚತಾ ಕಾರ್ಮಿಕರಾಗಿ ರೇಷ್ಮಾ ಹೈದರ್ (34) ಎಂಬವರು ಕೊಲೆಯಾದ ಮಹಿಳೆ.



ಬೆಡ್ ರೂಮ್‌ನಲ್ಲಿ ಮಹಿಳೆಯನ್ನು ಕೊಲೆಗೈದು ಪರಾರಿಯಾಗಿದ್ದ ಆರೋಪಿ ಕೂಡಾ ಪೌರ ಕಾರ್ಮಿಕನೇ ಆಗಿದ್ದನು. ಕೊಲೆಗೆ ಕಾರಣ ಏನೆಂಬುದು ನಿಖರವಾಗಿ ತಿಳಿದುಬಂದಿಲ್ಲ. ಈ ಕೊಲೆ ಅನೈತಿಕ ಸಂಬಂಧದ ಹಿನ್ನೆಲೆಯಿಂದ ನಡೆದಿರಬಹುದೆಂದು ಪೊಲೀಸರು ಶಂಕಿಸಿದ್ದಾರೆ. ಮಹಿಳೆಯ ಕುತ್ತಿಗೆ ಹಾಗೂ ಬಾಯಿಗೆ ಗಂಭೀರ ಗಾಯಗಳಾಗಿದ್ದು, ಕ್ರೂರ ಹತ್ಯೆಯಾಗಿದೆ ಎಂದು ಹೇಳಲಾಗಿದೆ. ಮೃತ ಮಹಿಳೆ ರೇಷ್ಮಾ ಹೈದರ್ ಅವರು ತಮ್ಮ ತಾಯಿಯೊಂದಿಗೆ ವಾಸಿಸುತ್ತಿದ್ದರು. ಮನೆಯಲ್ಲಿ ಯಾರು ಇಲ್ಲದ ವೇಳೆ ಈ ಕೊಲೆ ನಡೆದಿದೆ ಎನ್ನಲಾಗಿದೆ.

ಘಟನಾ ಸ್ಥಳಕ್ಕೆ ಬೀದರ್ ಎಸ್‌ಪಿ ಪ್ರದೀಪ್ ಗುಂಟಿ, ಡಿವೈಎಸ್‌ಪಿ ನ್ಯಾಮೆಗೌಡ್, ಸಿಪಿಐ ಅಲಿಸಾಬ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸ್ಥಳೀಯರು ಈ ಪ್ರಕರಣವನ್ನು ತಿಳಿದು ಬೆಚ್ಚಿಬಿದ್ದಿದ್ದು, ಕೊಲೆಯು ಊರಿನ ಜನರಲ್ಲಿ ಆತಂಕ ಮೂಡಿಸಿದೆ.

ಕೊಲೆಯ ಬಳಿಕ ಪರಾ–ರಿಯಾಗಿದ್ದ ಆರೋಪಿ ಸಂತೋಷ್ ಎಂಬಾತನನ್ನು ಪೊಲೀಸರು ತಕ್ಷಣವೇ ಶೋಧಿಸಿ ಬಂಧಿಸಿದ್ದಾರೆ. ಬಸವಕಲ್ಯಾಣ ನಗರ ಪೊಲೀಸ್ ಠಾಣೆಯಲ್ಲಿ ಈ ಕುರಿತು ಪ್ರಕರಣ ದಾಖಲಿಸಿಕೊಂಡು ತನಿಖೆಯನ್ನು ಮುಂದುವರಿಸಿದ್ದಾರೆ.

# ಜನಪ್ರಿಯ ಮಾಜಿ ಮಂತ್ರಿ ಹುಟ್ಟು ಹಬ್ಬದ ನಿಮಿತ್ಯ ಕವನ



ರಾ –ರಾಜಕೀಯ ಚತುರ, ದೀನದಲಿತರ ನಾಯಕ ಇವರೇ ನಮ್ಮ ರಾಜಶೇಖರ ಪಾಟೀಲರು
ಜ –ಜನಮೆಚ್ಚಿನ ನಾಯಕ ಪ್ರತಿಯೊಬ್ಬರ ಮನದಲ್ಲಿ ಮನೆ ಮಾತಾಗಿರುವ ನಾಯಕ ಇವರೇ ನಮ್ಮ ರಾಜಶೇಖರ ಪಾಟೀಲರು
ಶೇ –ಶಕುಂತಲಾ ಹಾಗೂ ಬಸವರಾಜ ಪಾಟೀಲ ಇವರ ಹೊಟ್ಟೆಯಲ್ಲಿ ಹುಟ್ಟಿದ ಧೀಮಂತ ನಾಯಕ ಇವರೇ ನಮ್ಮ ರಾಜಶೇಖರ ಪಾಟೀಲರು
ಖ –ಖರೇ–ಖರೇ ಇದ್ದ ಎದುರು ಮಾತನಾಡುವ ನಾಯಕ ಇವರೇ ನಮ್ಮ ರಾಜಶೇಖರ ಪಾಟೀಲರು
ರ –ರಣರಂಗದ ವೀರ ಇವರೇ ನಮ್ಮ ರಾಜಶೇಖರ ಪಾಟೀಲರು.
ಪಾ –ಪರರ ಹಿತ ಚಿಂತೆ ಮಾಡುವ ಚಿಂತಕ ಜನ ಮೆಚ್ಚಿದ ನಾಯಕ ಇವರೇ ನಮ್ಮ ರಾಜಶೇಖರ ಪಾಟೀಲರು
ಟೀ –ಟೈಮ್‌ಗೆ ಬಡವರಿಗೆ ಸಿಗುವ ಕರ್ನಾಟಕದ ನಾಯಕ ಇವರೇ ನಮ್ಮ ರಾಜಶೇಖರ ಪಾಟೀಲರು
ಲ –ಯಾವಾಗಲೂ ಲವ–ಲವಿಕೆಯಿಂದ ಇರುವ ಜನ ನಾಯಕ ಇವರೇ ನಮ್ಮ ರಾಜಶೇಖರ ಪಾಟೀಲರು



ನಿಮ್ಮ ಅಭಿಮಾನಿ/ಲೇಖಕರು
ಬಾಬುರಾವ ಪರಮಶೆಟ್ಟಿ
ಸಮಾಜ ಸೇವಕರು
ಹುಮನಾಬಾದ

# ಕಲಬುರಗಿ ನಗರವನ್ನು ಸ್ಮಾರ್ಟ್ ಸಿಟಿಯಾಗಿ ರೂಪಿಸಲು ಶಾಸಕರು, ಜಿಲ್ಲಾಧಿಕಾರಿ ಹಾಗೂ ಇತರೆ ಅಧಿಕಾರಿಗಳೊಂದಿಗೆ ಸಚಿವ ಪ್ರಿಯಾಂಕ್ ಖರ್ಗೆ ಚರ್ಚೆ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ ನಗರವನ್ನು ನಾಗರಿಕಸ್ನೇಹಿಯಾಗಿಸಲು ಸ್ಮಾರ್ಟ್ ಸಿಟಿಯಾಗಿ ರೂಪಿಸುವ ಸಲುವಾಗಿ ಯೋಜನೆಗಳನ್ನು ಹಮ್ಮಿಕೊಳ್ಳಲು ಪೂರ್ವಭಾವಿಯಾಗಿ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಶಾಸಕರು,ಅಧಿಕಾರಿಗಳು ಹಾಗೂ ಸಂಸ್ಥೆಗಳೊಂದಿಗೆ ಚರ್ಚೆ ನಡೆಸಿದರು.

ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಹಾಗೂ ಇತರೆ ಅಧಿಕಾರಿಗಳೊಂದಿಗೆ ಬೆಂಗಳೂರಿನ ತಮ್ಮ ಕಚೇರಿಯಲ್ಲಿ ಚರ್ಚೆ ನಡೆಸಿದ ಸಚಿವರು, ನಗರದ ಸಮಗ್ರ ಅಭಿವೃದ್ಧಿಗೆ ಪೂರಕವಾಗುವಂತೆ ಕಾರ್ಯಕ್ರಮಗಳನ್ನು ರೂಪಿಸುವ ನಿಟ್ಟಿನಲ್ಲಿ ಹಲವಾರು ಸಲಹೆ, ಸೂಚನೆಗಳನ್ನು ನೀಡಿದರು.

ಇದೇ ಸಂದರ್ಭದಲ್ಲಿ ವಿಡಿಯೋ ಸಂವಾದದಲ್ಲಿ ಶಾಸಕರಾದ ಅಲ್ಲಮಪ್ರಭು ಪಾಟೀಲ ಹಾಗೂ ಕನಿಝಾ ಫಾತಿಮಾ ಹಾಗೂ ಕಲಬುರಗಿ ನಗರ ಪಾಲಿಕೆಯ ಆಯುಕ್ತರು, ನಗರ ಯೋಜನಾ ಸಂಸ್ಥೆಯಾದ ಐಐಹೆಚ್‌ಎಸ್ ಪ್ರತಿನಿಧಿಗಳು ಭಾಗವಹಿಸಿದ್ದರು.

ನಗರಕ್ಕೆ ಸುಸ್ಥಿರ ನೀರು ಸರಬರಾಜು, ಉತ್ತಮ ರಸ್ತೆ, ಉದ್ಯಾನವನ, ತ್ಯಾಜ್ಯ ಮರುಬಳಕೆ, ತ್ಯಾಜ್ಯ ವಿಲೇವಾರಿ, ಸುಗಮ ವಾಹನ ಸಂಚಾರ, ಆಕರ್ಷಕ ಹಾಗೂ ಅನುಕೂಲಕರ ಬಸ್ ತಂಗುದಾಣಗಳ ನಿರ್ಮಾಣ ಮುಂತಾದ ಮೂಲಭೂತ ಸೌಲಭ್ಯಗಳನ್ನು ಉತ್ತಮ ಪಡಿಸಿ ಕಲಬುರಗಿ ನಗರವನ್ನು ಸ್ಮಾರ್ಟ್ ಸಿಟಿಯನ್ನಾಗಿ ಪರಿವರ್ತನೆ ಮಾಡುವ ಗುರಿ ಹೊಂದಲಾಗಿದೆ ಎಂದು ಸಚಿವರು ತಿಳಿಸಿದರು.

ನಗರ ಯೋಜನೆಯನ್ನು ರೂಪಿಸುವಲ್ಲಿ ಪರಿಣಿತ ಸಲಹಾ ಸಂಸ್ಥೆಯಾದ ಇಂಡಿಯನ್ ಇನ್ಸಿಟ್ಯೂಟ್ ಆಫ್ ಹ್ಯೂಮನ್ ಸೆಟಲ್ಮೆಂಟ್ ಸಂಸ್ಥೆಯು ಸ್ಥಳೀಯ ಶಾಸಕರು ಹಾಗೂ ನಗರಸಭೆ ಅಧಿಕಾರಿಗಳೊಂದಿಗೆ ಚರ್ಚಿಸಿ ಕಲಬುರಗಿ ನಗರದ ಉತನ್ನತೀಕರಣಕ್ಕೆ ಸಂಬಂಧಿಸಿದಂತೆ ವಿವರಗಳನ್ನು ಒಳಗೊಂಡ ವರದಿಯನ್ನು ಐದು ದಿನಗಳ ಒಳಗಾಗಿ ಸಲ್ಲಿಸಲು ಸಚಿವ ಪ್ರಿಯಾಂಕ್ ಖರ್ಗೆ ಸೂಚಿಸಿದರು.

# ಸಂಸದರಿಗೆ ವಿಪ್ ಜಾರಿ

ಮಲ್ಲಮ್ಮ ನುಡಿ ವಾರ್ತೆ

ನವದೆಹಲಿ:ಏ.1:ಕೇಂದ್ರ ಸರ್ಕಾರವು ವಕ್ಫ್ ಮಸೂದೆ ತಿದ್ದುಪಡಿಗಳನ್ನು ಲೋಕಸಭೆಯಲ್ಲಿ ಮಂಡಿಸಲು ಮುಂದಾಗಿದ್ದು ಇದರ ನಡುವೆ ಕಾಂಗ್ರೆಸ್ ಇಂದು ಲೋಕಸಭೆಯಲ್ಲಿನ ತನ್ನ ಎಲ್ಲಾ ಸಂಸದರಿಗೆ ವಿಪ್ ಜಾರಿ ಮಾಡಿದೆ. ಮುಂದಿನ ಮೂರು ದಿನಗಳವರೆಗೆ ಕಾಂಗ್ರೆಸ್ ಸಂಸದರು ಸದನಕ್ಕೆ ಗೈರಾಗದಂತೆ ಎಚ್ಚರಿಸಿದೆ ಎಂದು ಮೂಲಗಳು ತಿಳಿಸಿವೆ.ವಿವಾದಾತ್ಮಕ ವಕ್ಫ್ (ತಿದ್ದುಪಡಿ) ಮಸೂದೆಯನ್ನು ನಾಳೆ ಲೋಕಸಭೆಯಲ್ಲಿ ಚರ್ಚೆ ಮತ್ತು ಅಂಗೀಕಾರಕ್ಕಾಗಿ ಕೈಗೆತ್ತಿಕೊಳ್ಳಲಾಗುತ್ತದೆ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದ ನಂತರ ಕಾಂಗ್ರೆಸ್ ಪಕ್ಷವು ವಿಪ್ ಜಾರಿ ಮಾಡಿದೆ. ಈ ಸಂಬಂಧ ವಿರೋಧ ಪಕ್ಷಗಳು ದೊಡ್ಡ ಸಭೆ ನಡೆಸಿದ್ದು, ವಕ್ಫ್ ಮಸೂದೆಯಲ್ಲಿ ಸರ್ಕಾರವನ್ನು ಹೇಗೆ ಎದುರಿಸುವುದು ಎಂಬುದರ ಕುರಿತು ಕಾರ್ಯತಂತ್ರ ರೂಪಿಸಲಾಗಿದೆ.ಬುಧವಾರ, ಗುರುವಾರ ಮತ್ತು ಶುಕ್ರವಾರ ಅಂದರೆ ಏಪ್ರಿಲ್ 2, 3 ಮತ್ತು 4, 2025ರಂದು ಲೋಕಸಭೆಯಲ್ಲಿ ಬಹಳ ಮುಖ್ಯವಾದ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಗುವುದು. ಲೋಕಸಭೆಯಲ್ಲಿರುವ ಕಾಂಗ್ರೆಸ್ ಪಕ್ಷದ ಎಲ್ಲಾ ಸದಸ್ಯರು ಈ ಮೂವರು ದಿನವೂ ಬೆಳಿಗ್ಗೆ 11 ಗಂಟೆಯಿಂದ ಸದನದಲ್ಲಿ ಹಾಜರಿದ್ದು ಪಕ್ಷದ ನಿಲುವನ್ನು ಬೆಂಬಲಿಸುವಂತೆ ವಿನಂತಿಸಲಾಗಿದೆ ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಮುಖ್ಯ ಸಚೇತಕ ಕೆ. ಸುರೇಶ್ ಹೊರಡಿಸಿದ ವಿಪ್‌ನಲ್ಲಿ ತಿಳಿಸಿದ್ದಾರೆ.















Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.